ಸಂಪುಟ: 06 ಸಂಚಿಕೆ: 232 ಪುಟಗಳು: 08 ಶನಿವಾರ 07 ನವೆಂಬರ್ 2026

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035621249

₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಎಷ್ಟೇ ಒತ್ತಡವಿದ್ದರೂ ಆತ್ಮೀಯರಿಗಾಗಿ ಸಮಯ ಕೊಡಬೇಕು. ಏಕೆಂದರೆ ಬಿಡುವಾದಾಗ ಮಾತನಾಡಲು ನಮಗೆ ಆತ್ಮೀಯರೇ ಇಲ್ಲವಾಗಬಹುದು.

‘ಪೇ ಸಿಎಂ ಎಂದವರ ಹಣೆಬರಹವೀಗ ಫೋನ್ ಪೇ ಕಮಿಷನ್‌ನಲ್ಲಿ ಬಯಲು’: ಆರ್. ಅಶೋಕ್ ವ್ಯಂಗ್ಯ

• ಉದಯವಾಹಿನಿ, ಬೆಂಗಳೂರು





ಬಿಜೆಪಿ ಅವಧಿಯಲ್ಲಿ ಪೇಸಿಎಂ ಅಭಿಯಾನ ನಡೆಸಿ ಅಪಪ್ರಚಾರ ಮಾಡಿದ್ದ ಕಾಂಗ್ರೆಸ್ ಈಗ ತನ್ನ ಸರ್ಕಾರದಲ್ಲಿ ಫೋನ್ ಪೇ ಕಮಿಷನ್ ವ್ಯವಹಾರ ನಡೆಸುತ್ತಿದೆ. ವಿಧಾನಸೌಧ, ವಿಕಾಸಸೌಧ, ಎಂ.ಎಸ್. ಬಿಲ್ಡಿಂಗ್‌ಗಳಂತಹ ಆಡಳಿತದ ಶಕ್ತಿಕೇಂದ್ರಗಳಲ್ಲೇ ಕಮಿಷನ್ ದಂಧೆ ತಾಂಡವವಾಡುತ್ತಿದೆ.

ಡೈರೆಕ್ಟ್ ಕಮಿಷನ್ ಟ್ರಾನ್ಸ್‌ಫರ್ ಎಂಬ ಹೊಸ ಡಿಜಿಟಲ್ ಭ್ರಷ್ಟಾಚಾರ ವ್ಯವಸ್ಥೆ ಕಾಂಗ್ರೆಸ್ ಸರ್ಕಾರ ರೂಪಿಸಿದೆ ಎಂದು ಕರ್ನಾಟಕ ವಿಧಾನ ಸಭೆಯ ವಿಪಕ್ಷ ನಾಯಕ ಆರ್. ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ. ಕ್ಯಾಂಟೀನ್ ಗುತ್ತಿಗೆದಾರರ ಬಳಿಯೂ ‘ಮೂಲಕ 10 ಲಕ್ಷ ಲಂಚ ವಸೂಲಿ ಮಾಡುವ ಮಟ್ಟಕ್ಕೆ ಈ ಭ್ರಷ್ಟ ಸರ್ಕಾರದ ಹಗಲು ದರೋಡೆ ತಲುಪಿದೆ ಎಂದರೆ ಇನ್ನು ದೊಡ್ಡ ದೊಡ್ಡ ತಿಮಿಂಗಿಲಗಳು ಹೇಗೆ ರಾಜ್ಯವನ್ನು ಕೊಳ್ಳೆ ಹೊಡೆಯುತ್ತಿವೆ ಎಂದು ನೀವೇ ಊಹಿಸಿಕೊಳ್ಳಬಹುದು.

ಗುತ್ತಿಗೆದಾರರ ಬಾಕಿ ಬಿಲ್ ಪಾವತಿಸಲು ಹಣವಿಲ್ಲ, ಗೃಹಲಕ್ಷ್ಮಿಯರಿಗೆ ನೀಡಲು ಹಣವಿಲ್ಲ, ಡೀಸೆಲ್ ಹಾಕಲು ದುಡ್ಡಿಲ್ಲ ಎನ್ನುವ ಗತಿಗೆಟ್ಟ ಕಾಂಗ್ರೆಸ್ ಸರ್ಕಾರ, ನಾಚಿಕೆ ಮಾನ ಬಿಟ್ಟು ಕಷ್ಟಪಟ್ಟು ದುಡಿಯುವ ಗುತ್ತಿಗೆದಾರರಿಂದ ಕಮಿಷನ್ ವಸೂಲಿ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದೆ ಎಂದವರು ವಾಗ್ದಾಳಿ ನಡೆಸಿದ್ದಾರೆ. ಪದೇ ಪದೇ ಲಂಚ ಪಡೆಯುವುದರ ಜೊತೆಗೆ ಬೆದರಿಕೆ ಒಡ್ಡಿದ ಅಧಿಕಾರಿಗಳ ವಿರುದ್ಧ ತಿರುಗಿಬಿದ್ದಿರುವ ಗುತ್ತಿಗೆದಾರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ, ಉಪ ಕಾರ್ಯದರ್ಶಿ, ವಿಧಾನಪರಿಷತ್ ಸಭಾಪತಿಗಳ ಆಪ್ತ ಕಾರ್ಯದರ್ಶಿಗೆ ವಕೀಲರ ಮೂಲಕ ನೋಟಿಸ್ ಕೊಡಿಸಿದ್ದಾರೆ. ಮುಖ್ಯಮಂತ್ರಿಗಳೇ, ಲಂಚ ಕೇಳಿದರೆ ನನಗೆ ನೇರವಾಗಿ ಕರೆ ಮಾಡಿ ಎಂದು ನೀವು ಹೇಳುತ್ತೀರಿ. ಆದರೆ ನಿಮ್ಮ ಅಧಿಕಾರಿಗಳು ನೇರವಾಗಿ ಫೋನ್ ಪೇ ಮಾಡಿ ಎನ್ನುತ್ತಿದ್ದಾರೆ. ನೀವೇ ಸಚಿವರಾಗಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಕಮಿಷನ್ ದಂಧೆ ನಡೆಯುತ್ತಿರುವುದು ನಿಮಗೆ ತಿಳಿಯದೇ ಹೋಯಿತೇ? ಅಥವಾ ಇದಕ್ಕೂ ನಿಮ್ಮ ಅನುಮತಿ ಸಿಕ್ಕಿದೆಯೇ? ಎಂದು ಅಶೋಕ್‌ಪ್ರಶ್ನಿಸಿದ್ದಾರೆ.

ಬರ ಪರಿಹಾರಕ್ಕಾಗಿ ಕೇಂದ್ರದ ಬಳಿ ಸರ್ವಪಕ್ಷ ನಿಯೋಗ ಹೋದ ಉದಾಹರಣೆ ಇಲ್ಲ: ಹೆಚ್‌ಡಿಕೆ

• ಉದಯವಾಹಿನಿ, ಬೆಂಗಳೂರು

ಬರ ಪರಿಹಾರಕ್ಕಾಗಿ ಕೇಂದ್ರಕ್ಕೆ ಯಾವತ್ತು ಸರ್ವಪಕ್ಷದ ನಿಯೋಗಕ್ಕೆ ಕರೆದುಕೊಂಡು ಹೋದ ಉದಾಹರಣೆ ಇಲ್ಲ ಅಂತ ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ನಗರದಲ್ಲಿ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ಈ ವೇಳೆ, ಬರ ಪರಿಹಾರ ಕೇಳಲು ಸರ್ವಪಕ್ಷ ನಿಯೋಗ ಹೋಗೊದಕ್ಕೆ ವಿಪಕ್ಷಗಳು ಸಹಕಾರ ಕೊಡ್ತಿಲ್ಲ ಎಂಬ ಡಿಸಿಎಂ ಪರಮೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಿ, ಎರಡು ತಿಂಗಳಿಂದ ನೋಡ್ತಾ ಇದ್ದೀನಿ ರಾಜ್ಯ ಸರ್ಕಾರ ಕೇವಲ ಪತ್ರ ವ್ಯವಹಾರ ಮಾಡಿದೆ. ಕಂದಾಯ ಸಚಿವರು ಮೋದಿ, ಅಮಿತ್ ಶಾ, ಕೃಷಿ ಸಚಿವರನ್ನ ಭೇಟಿ ಮಾಡೋ ಸೌಜನ್ಯ ತೋರಿಸಿಲ್ಲ. 2 ತಿಂಗಳಲ್ಲಿ 10 ರೀತಿ ಪತ್ರ ಬರೆದಿದ್ದಾರೆ. ಮೊದಲು 3 ಸಾವಿರ ಕೋಟಿ ಅಂದು ಈಗ 26 ಸಾವಿರ ಕೋಟಿ ಕೊಡಿ ಅಂತಿದ್ದಾರೆ. ಬರದ ಸಂಪೂರ್ಣ ಮಾಹಿತಿ ಸರಿಯಾಗಿ ಕೊಡ್ತಿಲ್ಲ, ಬೇಕು ಬೇಕಾದ ರೀತಿ ಮಾಡ್ತಾ ಇದ್ದಾರೆ. ಇವರಿಗೆ ಗಾಂಭೀರ್ಯತೆ ಇದೆಯಾ? ಎಂದು ಅಸಮಾಧಾನ ಹೊರಹಾಕಿದ್ದಾರೆ. ಶಾಸಕರು, ಜನರ ಡಿಮ್ಯಾಂಡ್ ಮೇಲೆ ಬರ ತಾಲ್ಲೂಕ ಘೋಷಣೆ ಮಾಡಿದ್ದಾರೆ. ಇದನ್ನ ಮಾಡ್ತಿರೋದು ಮೊದಲ ಸಲ. ನಾನು ನೋಡಿಲ್ಲ, ಸಿಎಂ, ಸಚಿವರು ಹೋಗಿ ಮನವಿ ಮಾಡೋದು ಸಹಜ ಎಂದರು.

ಬೇಡ್ತಿ-ಅಘನಾಶಿನಿ ನದಿ ತಿರುವು ಯೋಜನ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ದಕ್ಷಿಣ ಭಾಗದಲ್ಲಿ ‘ಸ್ಟಿಂಗ್’ ನ ಗಾಳಿ ಬೀಸುತ್ತಿರುವಾಗ, ಉತ್ತರದ ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬೆಳವಣಿಗೆಯೊಂದು ನಡೆದೇ ಹೋಯಿತು. ತಿಂಗಳುಗಳಿಂದ ಸುದ್ದಿಯಲ್ಲಿರುವ ಬೇಡ್ತಿ-ಅಘನಾಶಿನಿ ನದಿ ತಿರುವು ಯೋಜನೆಯ ಪರವಾಗಿರುವವರ ಮತ್ತು ವಿರೋಧಿಗಳ ಹೋರಾಟ, ಕುತೂಹಲಕಾರಿ ತಿರುವೊಂದನ್ನು ಪಡೆದುಕೊಂಡಿದೆ. ನದಿ ತಿರುವು ಯೋಜನೆ ವಿರೋಧಿಸುವ ಉತ್ತರ ಕನ್ನಡದ ಜನ ಶಾಂತಿಯುತವಾಗಿ ಬೆಂಗಳೂರಿನಲ್ಲಿ ಒಂದು ದಿನದ ಧರಣಿ ನಡೆಸಿದ ಬೆನ್ನಲ್ಲೇ, ಅಭಿಯಾನದ ಚುಕ್ಕಾಣಿ ಹಿಡಿದಿರುವ ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯು ಯಲ್ಲಾಪುರ ತಾಲ್ಲೂಕಿನ ಕೇಂದ್ರ ಭಾಗದಲ್ಲಿ 20,000 ಸಾವಿರಕ್ಕೂ ಹೆಚ್ಚು ಜನರನ್ನು ಸೇರಿಸಿ ಹೆದ್ದಾರಿ ರಸ್ತೆ ತಡೆ ಮಾಡಿ, ರಾಜ್ಯಕ್ಕೊಂದು ಸಂದೇಶ ನೀಡಿದೆ. ರಸ್ತೆ ತಡೆದ ಮರುದಿನವೇ ಹಾವೇರಿಯಲ್ಲಿ ಸಭೆ ನಡೆಸಿದ ಮಠಾಧಿಪತಿಗಳು ಮತ್ತು ಅವರನ್ನು ಒಂದೇ ವೇದಿಕೆಗೆ ಕರೆತಂದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಂದು ಕುತೂಹಲಕಾರಿ ಘೋಷಣೆ ಮಾಡಿದ್ದಾರೆ. ಸ್ವರ್ಣವಲ್ಲೀ ಮಠಕ್ಕೆ ಹೋಗಿ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರನ್ನು ಈ ಯೋಜನೆಗೆ ಒಪ್ಪಿಸುವುದು ನಮ್ಮ ಕೆಲಸ ಎಂದಿದ್ದಾರೆ.

200 ಕೋಟಿ ಹೂಡಿಕೆ: ಸಚಿವ ಎಂ.ಬಿ.ಪಾಟೀಲ್ ಸಮ್ಮುಖದಲ್ಲಿ ಬೇಯರ್ ಕಂಪನಿ ಜೊತೆ ಒಪ್ಪಂದಕ್ಕೆ ಸಹಿ

• ಉದಯವಾಹಿನಿ, ಬೆಂಗಳೂರು

ಆರೋಗ್ಯ ಸೇವೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದ ಕಂಪನಿಯಾಗಿರುವ ಜರ್ಮನಿ ಮೂಲದ ಬೇಯರ್ ಸೈನ್ಸ್ ಅಂಡ್ ಇನ್ನೋವೇಶನ್ ಬೆಂಗಳೂರಿನ ಸಮೀಪ ತನ್ನ ಅತ್ಯಾಧುನಿಕ ಉತ್ಪಾದನಾ ಸ್ಥಾವರ ಅಭಿವೃದ್ಧಿಗೆ 200 ಕೋಟಿ ರೂ. ಹೂಡಿಕೆ ಮಾಡಲಿದ್ದು, ಈ ಸಂಬಂಧ ಸರ್ಕಾರದೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ಅವರ ಸಮ್ಮುಖದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಮತ್ತು ಬೇಯರ್ ಕಂಪನಿಯ ಸಿಎಫ್‌ಒ ವಿನೀತ್ ಜಿಂದಾಲ್ ಒಡಂಬಡಿಕೆಗೆ ಸಹಿ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಬೇಯರ್ ಕಂಪನಿಯು ಮುಂದಿನ 7 ವರ್ಷಗಳಲ್ಲಿ ಹಂತಹಂತವಾಗಿ ಈ ಹೂಡಿಕೆ ಮಾಡಲಿದೆ. ಇದರಿಂದ 220 ಉದ್ಯೋಗಗಳು ಸೃಷ್ಟಿಯಾಗಲಿವೆ. ತಾವು ಇತ್ತೀಚೆಗೆ ರಾಜ್ಯಕ್ಕೆ ಬಂಡವಾಳ ಆಕರ್ಷಿಸಲು ನೆದರ್ಲೆಂಡ್ಸ್ ಪ್ರವಾಸ ಕೈಗೊಂಡಿದ್ದಾಗ ಆಮ್ಸ್ಟರ್ ಡ್ಯಾಮ್‌ನಲ್ಲಿ ಕಂಪನಿಯ ಉನ್ನತ ಮಟ್ಟದ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಲಾಗಿತ್ತು ಎಂದಿದ್ದಾರೆ.

ನಾನು ಗ್ರಾಫಿಕ್ ಡಿಸೈನರ್, ಮೋದಿಗಿಂತ ಚೆನ್ನಾಗಿ ಇಂಗ್ಲಿಷ್ ಬರುತ್ತೆ ನಂಗೆ

• ಉದಯವಾಹಿನಿ, ಬೆಂಗಳೂರು

ಶೈಕ್ಷಣಿಕ ಅರ್ಹತೆ ವಿಚಾರವಾಗಿ ಬಿಜೆಪಿ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಹೇಳಿಕೆಗಳಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ತಮ್ಮ ವಿದ್ಯಾರ್ಹತೆ ಕುರಿತು ಚರ್ಚಿಸಲು ಸಿದ್ಧರಿರುವುದಾಗಿ ಅವರು ಘೋಷಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ಪ್ರಮಾಣಪತ್ರದ ಬಗ್ಗೆ ಆರ್‌ಟಿಐ ಮೂಲಕವೂ ಮಾಹಿತಿ ಲಭ್ಯವಾಗಿಲ್ಲ ಎಂದು ಹೇಳಿದ ಪ್ರಿಯಾಂಕ್ ಖರ್ಗೆ, ತಾವು ಮೋದಿ ಅವರಿಗಿಂತ ಹೆಚ್ಚು ವಿದ್ಯಾರ್ಹತೆ ಹೊಂದಿದ್ದೇನೆ ಹಾಗೂ ಉತ್ತಮ ಇಂಗ್ಲಿಷ್ ಮಾತನಾಡುತ್ತೇನೆ ಎಂದು ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದ್ದಾರೆ. ತಾವು ‘ಗ್ರಾಫಿಕ್ ಡಿಸೈನರ್’ ಎಂದು ಇಡೀ ಜಗತ್ತಿಗೆ ತಿಳಿದಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಕಾನ್ವೆಂಟ್ ದಲಿತ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಆರೋಪಿಸಿದವರ ನಾಯಕರ ಮಕ್ಕಳೇ ಕಾನ್ವೆಂಟ್ ಶಾಲೆಗೆ ಹೋಗಿದ್ದಾರೆಯೇ ಹೊರತು ತಾವು ಅದಮಾರು ಮಠ ಶಾಲೆಯಲ್ಲಿ ಓದಿದವರು ಎಂದು ಸ್ಪಷ್ಟಪಡಿಸಿದ್ದಾರೆ.

ಮಹಿಳೆಯರಿಗೆ ಬೆಂಬಲ ಗೃಹಲಕ್ಷ್ಮೀಗೆ ಆನೆಬಲ

‘ನನ್ನ ಮೊಮ್ಮಗಳಿಗೆ ಬೇಕು ತೊಟ್ಟಿಲು ಕೊಡಮ್ಮ’ ಎಂದು ಸಿಎಂ

ದೀಪಾವಳಿ ಭರ್ಜರಿ ಗಿಫ್ಟ್

ಸಿಎಂಗೆ ಗೃಹಲಕ್ಷ್ಮೀ ಫಲಾನುಭವಿ ಮಹಿಳೆ ಮಾತು



ಮೀಟರ್ ಬಡ್ಡಿ ಹಣದ ಆಸೆಗೆ ಬೀಳಬೇಡಿ: ಸಿಎಂ ಸಲಹೆ

ಕೆಲವರು ಗೃಹಲಕ್ಷ್ಮೀ ಯೋಜನೆಯ ಮೀಟರ್ ಬಡ್ಡಿ ಆಸೆಗೆ ಹಣ ಕೊಟ್ಟು ಮೋಸ ಹೋಗುತ್ತಿದ್ದಾರೆ. ಮೀಟರ್ ಬಡ್ಡಿ ಹಣದ ಆಸೆಗೆ ಬೀಳಬೇಡಿ ಎಂದು ಹೇಳಿದ್ದೇನೆ. ಗೃಹಲಕ್ಷ್ಮೀ ಹಣವನ್ನು ಚಿಟ್ ಫಂಡ್‌ನಲ್ಲಿ ಹಾಕಿ ಕಳೆದುಕೊಳ್ತಿದ್ದಾರೆ. ಹಾಗಾಗಿ ಹೆಚ್ಚಿನ ಹಣದ ಆಸೆಗೆ ಬಿದ್ದು ಚಿಟ್‌ಫಂಡ್‌ಗೆ ಹಾಕದಂತೆ ಹೇಳಿರುವೆ.

ಯಾರೊಬ್ಬರೂ ಅಧಿಕ ಬಡ್ಡಿ, ಚಿಟ್ ಫಂಡ್ ಆಸೆಗೆ ಬೀಳಬಾರದು ಎಂದಿರುವ ಸಿಎಂ ಹಣ ಕಳೆದುಕೊಂಡವರ ಪ್ರಕರಣ ಉಲ್ಲೇಖಿಸಿ ಸಲಹೆ ಕೂಡ ನೀಡಿದ್ದಾರೆ.

ಮಹಿಳೆಯರಿಗೆ ಡಿಕೆಶಿ ಸಲಹೆ

ಮಹಿಳೆಯರಿಗೆ ಸಿಎಂ ಮನವಿ

ಮತ್ತೆ ಅಧಿಕಾರಕ್ಕೆ ತರಬೇಕು

ಗೃಹಲಕ್ಷ್ಮೀ ಫಲಾನುಭವಿಗಳೊಂದಿಗೆ ಸಿಎಂ ಸಂವಾದ

• ಉದಯವಾಹಿನಿ, ಬೆಂಗಳೂರು

ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳಿಗೆ ಮೂರು ಕಂತಿನ ಹಣ ಬಿಡುಗಡೆ ಮಾಡುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಈಗಾಗಲೇ ಭರ್ಜರಿ ಗಿಫ್ಟ್ ನೀಡಿದೆ. ಈ ಬೆನ್ನಲ್ಲೇ ಸಿಎಂ ಡಿಕೆ ಶಿವಕುಮಾರ್, ಗೃಹಕಚೇರಿ ಕೃಷ್ಣಾದಲ್ಲಿ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿ ತಾಯಂದಿರು ಮತ್ತು ಸಹೋದರಿಯರೊಂದಿಗೆ ಮುಕ್ತವಾಗಿ ಸಂವಾದ ನಡೆಸಿ, ಅವರ ಅನಿಸಿಕೆಗಳನ್ನು ಆಲಿಸಿದ್ದಾರೆ. ಸರ್ಕಾರ ಮೊನ್ನೆಯಷ್ಟೇ 3 ತಿಂಗಳ ಗೃಹಲಕ್ಷ್ಮೀ ಹಣ ಬಿಡುಗಡೆ ಮಾಡಿದೆ. ಆ ಮೂಲಕ ದೀಪಾವಳಿ ಸಮಯದಲ್ಲಿ ಮಹಿಳೆಯರಿಗೆ ಆರ್ಥಿಕ ನೆರವು ನೀಡಿದೆ. ಇನ್ನು ಗೃಹಲಕ್ಷ್ಮೀ ಯೋಜನೆಯ ಪ್ರಯೋಗದ ಬಗ್ಗೆ ಸಂವಾದದಲ್ಲಿ ಮಹಿಳಾ ಫಲಾನುಭವಿಗಳಿಂದ ಸಿಎಂ ಡಿಕೆ ಶಿವಕುಮಾರ್ ಮಾಹಿತಿ ಪಡೆದರು. ಈ ವೇಳೆ ಮಾತನಾಡಿದ ಫಲಾನುಭವಿಯೊಬ್ಬರು, ‘ಗೃಹಲಕ್ಷ್ಮೀ ಯೋಜನೆ ಹಣದಲ್ಲಿ ಮಕ್ಕಳನ್ನು ಓದಿಸಿದ್ದೇನೆ. ದ್ವಿತೀಯ ಪಿಯುಸಿಯಲ್ಲಿ ಮಗ ಶೇ.98ರಷ್ಟು ಅಂಕ ಪಡೆದಿದ್ದಾನೆ. ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಬರಲಿ’ ಹಾರೈಸಿದರು. ಮತ್ತೊಬ್ಬರು ಫಲಾನುಭವಿ ಮಾತನಾಡಿ, ‘ಗೃಹಲಕ್ಷ್ಮೀ ಯೋಜನೆಯಿಂದ ನಮಗೆ ಆರ್ಥಿಕ ಸಹಾಯವಾಗಿದೆ. ಆ ಹಣದಿಂದ ಸಣ್ಣಪುಟ್ಟ ವ್ಯವಹಾರ ಆರಂಭಿಸಿದ್ದೇನೆ. ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ ವ್ಯಾಪಾರ ಮಾಡುತ್ತಿದ್ದೇನೆ. ಜಿಲ್ಲೆ, ರಾಜ್ಯ, ವಿದೇಶಕ್ಕೂ ರಫ್ತು ಮಾಡುತ್ತಿದ್ದೇನೆ’ ಎಂದರು. ಈ ವೇಳೆ ‘ನನಗೂ ಕೋಡುಬಳೆ ತಂದಿದ್ಯಾ ಎಂದ ಡಿಕೆ ಶಿವಕುಮಾರು ಕೇಳಿದರು. ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ಡಿಕೆ ಶಿವಕುಮಾರ್, ‘ಹೆಣ್ಮಗಳಿಗೆ ಸಹಾಯ ಮಾಡಬೇಕು ಅಂತ ನಾವು ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೆ ತಂದಿದ್ದೇವೆ. 36 ತಿಂಗಳು ಕೊಟ್ಟಿದ್ದೇವೆ. ಮುಂದೆ ಯಾರೂ ಸಹ ಈ ಯೋಜನೆಯನ್ನ ನಿಲ್ಲಿಸುವುದಕ್ಕೆ ಆಗಲ್ಲ.

ನಮ್ಮನ್ನ ನೋಡಿ ಮಹಾರಾಷ್ಟ್ರ, ಮಧ್ಯಪ್ರವೇಶದಲ್ಲೂ ಯೋಜನೆ ಮಾಡಿದ್ದಾರೆ. ಬೆಳಗಾವಿ ಅಧಿವೇಶನ ಶುರುವಾಗುವುದರೊಳಗೆ ಹೆಣ್ಮಗಳನ್ನ ಮಂತ್ರಿ ಮಾಡುತ್ತೇನೆ. ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ, ಅದೇ ಆಸ್ತಿ. ನಿಮ್ಮ ಆಶೀರ್ವಾದ ನನ್ನ ಮೇಲೆ ಇರಲಿ’ ಎಂದಿದ್ದಾರೆ.

ಒಟ್ಟು 86 ಸಾವಿರ ಕೋಟಿ ರೂ ಹಣ ಗೃಹಲಕ್ಷ್ಮೀಯರಿಗೆ ತಲುಪಿದೆ. ಫಲಾನುಭವಿಗಳ ಫೋನ್ ನಂಬರ್ ಬೇರೆ ಬೇರೆ ಇತ್ತು. ಸತ್ತು ಹೋಗಿರುವವರ ಅಕೌಂಟ್‌ಗೂ ಹಣ ಹೋಗಿದೆ. ಆ ಹಣ ಯಾರು ಹೇಗೆ ಉಪಯೋಗಿಸಿಕೊಂಡರು ಎನ್ನುವುದು ಗೊತ್ತಾಗಲಿಲ್ಲ. ಹಾಗಾಗಿ ಗೃಹಲಕ್ಷ್ಮೀ ಯೋಜನೆಗೆ ಫಿಲ್ಟರ್ ಮಾಡಿದ್ದವು. ನಾವು ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿದ್ದೇವೆ. ಕೆಲವರು ವ್ಯಾಪಾರ ಶುರು ಮಾಡಿದ್ದಾರೆ. ಕೆಲವರು ಹಣದಲ್ಲಿ ಉಳಿತಾಯ ಮಾಡಿದ್ದಾರೆ. ಕೆಲವರು ಕುಟುಂಬದ ನಿರ್ವಹಣೆ ಮಾಡಿದ್ದಾರೆ’ ಎಂದರು.

ಆರ್ಥಿಕ ಲೆಕ್ಕಾಚಾರ ಹಾಗೂ ತಾಂತ್ರಿಕ ಲೋಪ ಸರಿಪಡಿಸಲು ಕ್ರಮ



ಯೋಜನೆಯ ಹಣಕಾಸು ವಿವರ ಹಂಚಿಕೊಂಡ ಸಿಎಂ, ಇಲ್ಲಿಯವರೆಗೆ ಯೋಜನೆಯಡಿ 120 ಕೋಟಿ ವಹಿವಾಟು ಕ್ರಾಸ್ ಆಗಿದ್ದು, ಒಟ್ಟು 86,000 ಕೋಟಿ ರೂಪಾಯಿ ಬಜೆಟ್ ವೆಚ್ಚ ತಲುಪಿದೆ ಎಂದರು. ಕೆಲವು ಕಡೆ ಫೋನ್ ನಂಬರ್ ಒಬ್ಬರದ್ದಾಗಿದ್ದು, ಹಣ ಬೇರೆಯವರ ಖಾತೆಗೆ ಜಮೆಯಾಗುತ್ತಿರುವುದು ಹಾಗೂ ಸತ್ತವರ ಖಾತೆಗಳಿಗೂ ಹಣ ತಲುಪುತ್ತಿರುವ ತಾಂತ್ರಿಕ ಲೋಪಗಳು ಗಮನಕ್ಕೆ ಬಂದಿವೆ. ಕೆಲವರು ಬ್ಯಾಂಕ್ ಸಾಲ ಪಡೆದು, ಈ ಗೃಹಲಕ್ಷ್ಮಿ ಹಣ ನೇರವಾಗಿ ಆ ಸಾಲದ ಕಂತಿಗೆ ಜಮೆಯಾಗುವಂತೆ ಮಾಡಿಕೊಂಡಿದ್ದಾರೆ.

ಇವೆಲ್ಲವನ್ನೂ ಸರಿಪಡಿಸಿ, ಯೋಜನೆಗೆ ಸಂಬಂಧಿಸಿದಂತೆ ನೂತನ ಅಪ್ಲಿಕೇಶನ್ ರೆಡಿ ಮಾಡಿಟ್ಟುಕೊಳ್ಳಲಾಗಿದ್ದು, ಮಹಿಳೆಯರ ಅಭಿಪ್ರಾಯ ಪಡೆದು ಶೀಘ್ರವೇ ಜಾರಿಗೆ ತರಲಾಗುವುದು ಎಂದು ಸ್ಪಷ್ಟಪಡಿಸಿದರು.





ಯೋಜನೆಯ ಹುಟ್ಟಿನ ಕಥೆ ಹಂಚಿಕೊಂಡ ಸಿಎಂ

ಈ ಹಂತದಲ್ಲಿ ಯೋಜನೆ ಹುಟ್ಟಿದ ಕ್ಷಣವನ್ನು ಸಿಎಂ ನೆನಪಿಸಿಕೊಂಡರು. ’ರಾಜ್ಯದ ಜನ ನಮಗೆ 136 ಸೀಟುಗಳನ್ನು ಕೊಟ್ಟರು. ನಾವು 5 ಗ್ಯಾರಂಟಿಗಳನ್ನು ಘೋಷಿಸಿದಾಗ ವಿರೋಧ ಪಕ್ಷದವರು ನಮ್ಮನ್ನು ನೋಡಿ ನಕ್ಕರು, ಅತ್ತೆ-ಸೊಸೆ ನಡುವೆ ಜಗಳ ತಂದಿಡುತ್ತಿದ್ದೀರಾ ಎಂದರು. ಆದರೆ ನಾವು 1 ಕೋಟಿ 24 ಲಕ್ಷ ಮನೆ ಯಜಮಾನಿಯರಿಗೆ ಹಣ ತಲುಪಿಸಿದ್ದೇವೆ. ಚಾಮುಂಡೇಶ್ವರಿಯ ಬಳಿ ಹೋಗಿ ರಾಜ್ಯದ ಮಹಿಳೆಯರಿಗೆ ಶಕ್ತಿ ನೀಡುವಂತೆ ಬೇಡಿಕೊಂಡಿದ್ದೆ. ನನ್ನ ಸಂಬಂಧಿ ಹುಡುಗ ಪರಮೇಶ್ ಹಾಡಿದ 'ತಾಯಿ ಸತ್ತ ಮೇಲೆ ತವರಿಗೆ ಎಂದು ಹೋಗಬಾರದಮ್ಮ’ ಎಂಬ ಹಾಡನ್ನು ಕೇಳಿ, ಮಹಿಳೆಯರಿಗೆ ಸ್ವಾವಲಂಬನೆ ಮತ್ತು ಶಕ್ತಿ ನೀಡಲೇಬೇಕು ಎಂದು ತೀರ್ಮಾನಿಸಿ ಗೃಹಲಕ್ಷ್ಮಿ ಹಾಗೂ ಶಕ್ತಿ ಯೋಜನೆಗಳನ್ನು ರೂಪಿಸಿದೆವು. ಸಿದ್ದರಾಮಯ್ಯನವರು ತಮ್ಮ ಬಾಲ್ಯದಲ್ಲಿ ಮನೆಯಲ್ಲಿ ಅಕ್ಕಿಯೇ ಇರಲಿಲ್ಲ ಎಂಬ ಸ್ಥಿತಿಯನ್ನು ನೆನಪಿಸಿಕೊಳ್ಳುತ್ತಿದ್ದರು. ಈ ಯೋಜನೆಗಳನ್ನು ಯಾರಿಂದಲೂ ನಿಲ್ಲಿಸಲು ಸಾಧ್ಯವಿಲ್ಲ. ಮೋದಿಯವರೇ ಇದನ್ನು ಟೀಕಿಸಿ, ಬಳಿಕ ಅವರೂ ಇಂತಹ ಯೋಜನೆಗಳನ್ನು ಅನುಕರಿಸಿದರು’ ಎಂದರು.

ಗೃಹಲಕ್ಷ್ಮಿಗೆ 7,400 ಕೋಟಿ ಬಿಡುಗಡೆ

7,400 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಹಿಳೆಯರಿಗೆ ಅನುಕೂಲವಾಗಲಿ ಉದ್ದೇಶದಿಂದ ಹಣ ಬಿಡುಗಡೆ ಮಾಡಲಾಗಿದೆ. ಕೆಲವು ಮಹಿಳೆಯರು ನನ್ನನ್ನು ಭೇಟಿ ಮಾಡಲು ಬರುತ್ತಿದ್ದಾರೆ.

ಅವರನ್ನು ಭೇಟಿ ಮಾಡುತ್ತೇನೆ. ರಾಮನಗರಕ್ಕೆ ನಾನು ಪ್ರವಾಸ ಮಾಡಲು ಬಂದಿಲ್ಲ. ಇದು ನನ್ನೂರು, ನನ್ನ ಮನೆ, ನನ್ನ ಜನ. ನಮ್ಮವರನ್ನು ಭೇಟಿ ಮಾಡಲು ಬಂದಿದ್ದೇನೆ. ನಮ್ಮ ಮನೆಗೆ ಬಂದಂತೆ ಸಹಜವಾಗಿ ಇಲ್ಲಿಗೆ ಬಂದಿದ್ದೇನೆ ಎಂದು ಹೇಳಿದರು. ರಾಮನಗರ ಜಿಲ್ಲೆಯ ಕ್ಷೇತ್ರಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳ ಕುರಿತು ಶಾಸಕರು ಹಾಗೂ ಸಚಿವರನ್ನು ಪ್ರತ್ಯೇಕವಾಗಿ ಕರೆದು ಪ್ರಗತಿ ಪರಿಶೀಲನೆ ನಡೆಸುತ್ತಿದ್ದೇನೆ. ಯಾವ ಕ್ಷೇತ್ರದಲ್ಲಿ ಏನೇನು ಕೆಲಸ ಆಗಬೇಕು ಎಂಬುದರ ಕುರಿತು ಶಾಸಕರಿಂದ ಪಟ್ಟಿ ಪಡೆದುಕೊಳ್ಳುತ್ತಿದ್ದೇನೆ. ಹಿಂದೆ ನೀಡಿರುವ ಪಟ್ಟಿಯಲ್ಲಿನ ಕಾಮಗಾರಿಗಳನ್ನೂ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕನಕಪುರ ಮತ್ತು ರಾಮನಗರದಲ್ಲಿ ಆಸ್ಪತ್ರೆಗಳ ಕಾಮಗಾರಿ ನಡೆಯುತ್ತಿದೆ. ಮಾಗಡಿಯಲ್ಲಿಯೂ ಹಲವು ಯೋಜನೆಗಳಿವೆ. ನೀರಾವರಿ ಕ್ಷೇತ್ರದಲ್ಲಿ ಈಗಾಗಲೇ 1,000 ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳಾಗಿವೆ.

ಅಧಿವೇಶನದ ಹೊತ್ತಿಗೆ ಮಹಿಳಾ ಸಚಿವರ ಎಂಟ್ರಿ

ಅಧಿವೇಶನದ ಹೊತ್ತಿಗೆ ಮಹಿಳಾ ಸಚಿವರ ಎಂಟ್ರಿ ನೀಡುತ್ತಾರೆ ಎಂದು ಸಂವಾದ ಕಾರ್ಯಕ್ರಮದಲ್ಲಿ ಸಿಎಂ ಡಿಕೆ ಶಿವಕುಮಾರ್ ಅವರು ಸುಳಿವು ನೀಡಿದರು. ಅಧಿವೇಶನದ ಹೊತ್ತಿಗೆ ಒಬ್ಬ ಮಹಿಳಾ ಸಚಿವರು ಬರುತ್ತಾರೆ. ಆದರೆ ನೀವ್ಯಾರೂ ಬಡ್ಡಿ ವ್ಯವಹಾರಕ್ಕೆ ಹೋಗಬೇಡಿ. ಬಿಲ್ಡಿಂಗ್ ಕಟ್ಟದೇ ಇದ್ದರೂ ಚಿಂತೆ ಇಲ್ಲಾ, ಮಕ್ಕಳಿಗೆ ಶಿಕ್ಷಣ ಕೊಡಿಸಿ ಎಂದು ಮನವಿ ಮಾಡಿಕೊಂಡರು.ಇದೇ ಸಂದರ್ಭದಲ್ಲಿ ಮಾತನಾಡಿದ ಡಿಕೆ ಶಿವಕುಮಾರ್, ಚಿಟ್ ಫಂಡ್ ಗೂ ಗೃಹಲಕ್ಷ್ಮಿ ಹಣ ಹಾಕಿ ಕಳೆದುಕೊಳ್ತಿದ್ದಾರೆ. ಸಂವಾದದ ವೇಳೆ ಈ ಬಗ್ಗೆಯೂ ಹೇಳಿದ್ದೇನೆ. ಹೆಚ್ಚಿನ ಹಣದ ಆಸೆಗೆ ಚಿಟ್ ಫಂಡ್ ಗೆ ದುಡ್ಡು ಹಾಕ್ತಿದ್ದಾರೆ. ಮೋಸ ಹೋದ ಪ್ರಕರಣಗಳ ಹಿನ್ನಲೆಯಲ್ಲಿ ಹೇಳಿದ್ದೇನೆ. ಕೆಲವು ಮಹಿಳೆಯರು ಗೃಹಲಕ್ಷ್ಮಿ ಹಣ ಮೀಟರ್ ಬಡ್ಡಿ ಆಸೆಗೆ ಕೊಟ್ಟು ಮೋಸ ಹೋಗ್ತಿದ್ದಾರೆ.

ಮಹಿಳೆಯ ಪ್ರೀತಿಯ ಕೊಡುಗೆ

ಉಡುಪಿ ಮತ್ತು ಮಂಗಳೂರು ಭಾಗದಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲದಿದ್ದರೂ ಅಲ್ಲಿನ ಮಹಿಳೆಯರು ಗೃಹಲಕ್ಷ್ಮಿ ಯೋಜನೆ ಪಡೆಯುತ್ತಿದ್ದಾರೆ. ಅಲ್ಲಿನ ವಾತಾವರಣ ಬದಲಾಗಿದೆಯೇ ಎಂದು ಸಿಎಂ ಉಡುಪಿಯ ಮಹಿಳೆಯನ್ನು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಮಹಿಳೆ, ಎಲ್ಲಾ ಮಹಿಳೆಯರಿಗೂ ಯೋಜನೆ ನೆರವಾಗಿದೆ, ಜನರು ಬದಲಾಗುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲೂ ಇಂತಹ ಬೃಹತ್ ಕಾರ್ಯಕ್ರಮ ಮಾಡಿದರೆ ಇನ್ನಷ್ಟು ಬದಲಾವಣೆ ಸಾಧ್ಯ ಎಂದರು. ದೊಡ್ಡಬಳ್ಳಾಪುರದ ಹಾರೂಡಿಯಿಂದ ಬಂದಿದ್ದ ಪ್ರಭಾವತಿ ಎಂಬ ಫಲಾನುಭವಿ ಮಹಿಳೆ, ಪ್ರೀತಿಯಿಂದ ತಂದಿದ್ದ ’ಹುರುಳಿ ಕಾಳಿನ ಹಪ್ಪಳ’ವನ್ನು ಸಿಎಂಗೆ ಉಡುಗೊರೆಯಾಗಿ ನೀಡಿದರು. ಅದನ್ನು ಸ್ವೀಕರಿಸಿದ ಸಿಎಂ, ಅದನ್ನು ತಮ್ಮ ಮನೆಗೆ ತಲುಪಿಸುವಂತೆ ಸಿಬ್ಬಂದಿಗೆ ಸೂಚಿಸಿದರು. ಮತ್ತೊಬ್ಬ ಮಹಿಳೆ, ಗೃಹಲಕ್ಷ್ಮಿ ಹಣದಿಂದ ತಮ್ಮ ಮಗನನ್ನು ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗೆ ಸೇರಿಸಿ ಓದಿಸುತ್ತಿರುವುದಾಗಿ ಸಂತಸ ಹಂಚಿಕೊಂಡರು.

ರಾಜ್ಯದಲ್ಲಿ ಮಾರಾಟವಾಗುತ್ತಿರುವ ಪೆಟ್ರೋಲ್ ನಲ್ಲಿ 31%ರವರೆಗೆ ಎಥೆನಾಲ್ ಮಿಶ್ರಣ ಪತ್ತೆ: ಸಚಿವ ರಿಜ್ವಾನ್ ಅರ್ಷದ್

• ಉದಯವಾಹಿನಿ, ಬೆಂಗಳೂರು

ಲ್ಯಾಬ್ ಪರೀಕ್ಷೆ ಮೂಲಕ ಕರ್ನಾಟಕದ ಪೆಟ್ರೋಲ್ ಬಂಕ್‌ಗಳಲ್ಲಿ ಮಿತಿಮೀರಿದ ಎಥೆನಾಲ್ ಮಿಶ್ರಣ ಪತ್ತೆಯಾಗಿದೆ. ಇ20 ಹೆಸರಿನಲ್ಲಿ ಪೆಟ್ರೋಲ್‌ನಲ್ಲಿ ಹೆಚ್ಚಿನ ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಎಂದು ಆಹಾರ ಹಾಗೂ ನಾಗರಿಕ ಪೂರೈಕೆ ಸಚಿವ ರಿಜ್ವಾನ್ ಅರ್ಷದ್ ಆರೋಪಿಸಿದ್ದಾರೆ.

ವಿಕಾಸಸೌಧಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ ಕರ್ನಾಟಕದಲ್ಲಿ ಲಭ್ಯವಿರುವ ಪ್ರಮುಖ ಬ್ರಾಂಡ್‌ಗಳ ಪೆಟ್ರೋಲ್ ಗುಣಮಟ್ಟ ತಪಾಸಣೆ ನಡೆಸಿತ್ತು. ಈ ಪರೀಕ್ಷೆಗಾಗಿ ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಗಳೂರು ಮತ್ತು ತುಮಕೂರಿನಿಂದ ಮಾದರಿಗಳನ್ನು ಸಂಗ್ರಹಿಸಲಾಗಿತ್ತು.

ಎಲ್ಲಾ ಪ್ರಮುಖ ಇಂಧನ ಕಂಪನಿಗಳಿಂದ ಸಂಗ್ರಹಿಸಲಾದ ಪೆಟ್ರೋಲ್ ಮಾದರಿಗಳಲ್ಲಿ ಶೇ.20ಕ್ಕಿಂತ ಹೆಚ್ಚಿನ ಎಥೆನಾಲ್ ಮಿಶ್ರಣವಿರುವುದು ಕಂಡುಬಂದಿದೆ. ಇದರಲ್ಲಿ ಪೆಟ್ರೋಲ್‌ನಲ್ಲಿ ಶೇ.31.2 ರಷ್ಟು ಮತ್ತು ಪೆಟ್ರೋಲ್‌ನಲ್ಲಿ ಶೇ.30.5 ರಷ್ಟು ಎಥೆನಾಲ್ ಇರುವುದು ಕಂಡುಬಂದಿದೆ. ಪೆಟ್ರೋಲ್ ಮಾದರಿಗಳನ್ನು ಮೊದಲು ತೈಲ ಕಂಪನಿಗಳ ಸ್ವಂತ ಲ್ಯಾಬ್‌ಗಳಿಗೆ ಕಳುಹಿಸಿದಾಗ, ಎಥೆನಾಲ್ ಪ್ರಮಾಣವನ್ನು ಪರೀಕ್ಷಿಸುವುದು ಕಡ್ಡಾಯವಾಗಿದ್ದರೂ ಆ ಲ್ಯಾಬ್‌ಗಳು ವರದಿಯಲ್ಲಿ ಎಥೆನಾಲ್ ಶೇಕಡಾವಾರು ನಮೂದಿಸದೆ ಮುಚ್ಚಿಟ್ಟವು ಎಂದು ಆರೋಪಿಸಿದರು.

ಈ ಮುಖ್ಯ ಮಾಹಿತಿಯನ್ನು ಬಚ್ಚಿಟ್ಟಿರುವುದು ತೈಲ ಕಂಪನಿಗಳು ಗ್ರಾಹಕರಿಗೆ



ಮೋಸ ಮಿತಿಮೀರಿದ ಎಥೆನಾಲ್ ಮಿಶ್ರಣವನ್ನು ಮರೆಮಾಚಲು ಪ್ರಯತ್ನಿಸುತ್ತಿವೆ ಎಂಬ ಬಲವಾದ ಅನುಮಾನಕ್ಕೆ ಕಾರಣ ಆದ್ದರಿಂದ ಮತ್ತೊಮ್ಮೆ ಮಾದರಿಗಳನ್ನು ವಿವಿಧ ಪೆಟ್ರೋಲ್ ಬಂಕ್‌ಗಳಲ್ಲಿ ನಿಯಮಾನುಸಾರ ಸಂಗ್ರಹಿಸಿ ಎನ್.ಎ.ಬಿ.ಎಲ್ ಮಾನ್ಯತೆ ಪಡೆದ ಹಾಗೂ ಐಎಸ್‌ಒ ಪ್ರಮಾಣೀಕೃತ ಪ್ರಯೋಗಾಲಯಗಳಿಗೆ ನೀಡಿ ಪರೀಕ್ಷೆಗೆ ಒಳಪಡಿಸಲಾಯಿತು ಎಂದರು.

ಭಾರತದಲ್ಲಿ ಪ್ರತಿವರ್ಷ 6,200 ಕೋಟಿ ಲೀಟರ್ ಇಂಧನ ಬಳಕೆಯಾಗುತ್ತದೆ. ಲೀಟರ್‌ಗೆ 100 ರಂತೆ ಶೇ. 10 ರಷ್ಟು ಮೈಲೇಜ್ ಕಡಿಮೆಯಾದರೆ, ಈ ಮಿತಿಮೀರಿದ ಮಿಶ್ರಣದಿಂದ ಗ್ರಾಹಕರ ಮೇಲೆ ವಾರ್ಷಿಕ 62,000 ಕೋಟಿ ಆರ್ಥಿಕ ಹೊರೆ ಬೀಳುತ್ತದೆ.

ಇಂತಹ ಇಂಧನ ಬಳಕೆಗೆ ಹೊಂದಿಕೊಳ್ಳದ ವಾಹನಗಳ ಫಿಲ್ಟರ್, ಫ್ಯೂಯಲ್ ಪಂಪ್, ಇಂಜೆಕ್ಟರ್, ಪೈಪ್ (ಹೋಸ್) ಹಾಗೂ ಸೀಲ್‌ಗಳು ಹಾನಿಗೊಳಗಾಗುತ್ತವೆ. ಇದರಿಂದಾಗಿ ವಾಹನಗಳ ರಿಪೇರಿಗಾಗಿ ಹೆಚ್ಚುವರಿಯಾಗಿ 39,000 ಕೋಟಿ ವೆಚ್ಚವಾಗುತ್ತದೆ ಎಂದು ಅವರು ಹೇಳಿದರು. ಕನಿಷ್ಠ ಲೆಕ್ಕಾಚಾರ ಹಾಕಿದ್ರೂ ಸಾಕು, ಒಟ್ಟಾರೆ ಪ್ರತಿಯೊಬ್ಬ ಗ್ರಾಹಕರ ಮೇಲೆ ಪರೋಕ್ಷವಾಗಿ ವರ್ಷಕ್ಕೆ ಬರೋಬ್ಬರಿ 1.01 ಲಕ್ಷ ಕೋಟಿಯಷ್ಟು ಹೊರೆ ಬೀಳುತ್ತಿದೆ. ಈ ಅಪಾಯ ಕೇವಲ ಹಳೆಯ ವಾಹನಗಳಿಗೆ ಮಾತ್ರ ಸೀಮಿತವಲ್ಲ, ದೇಶದಲ್ಲಿರುವ 35 ಕೋಟಿ ವಾಹನಗಳ ಪೈಕಿ ಶೇಕಡ 99ರಷ್ಟು ವಾಹನಗಳು ಹೆಚ್ಚಿನ ಇಂಧನ ಸಂಯೋಜನೆಗೆ ತಕ್ಕಂತೆ ಸಿದ್ಧಗೊಂಡಿಲ್ಲ. ಏಪ್ರಿಲ್ 2023ರ ನಂತರ ಮಾರುಕಟ್ಟೆಗೆ ಬಂದ ವಾಹನಗಳೂ ಗರಿಷ್ಠ ಇ20 ಮಿವರೆಗೆ ಮಾತ್ರ ಪ್ರಮಾಣೀಕರಿಸಲ್ಪಟ್ಟಿವೆ. ದೇಶದ ಸುಮಾರು 1 ಲಕ್ಷ ಇಂಧನ ಕೇಂದ್ರಗಳಿಂದ ಕಡಿಮೆ ಎಥೆನಾಲ್ ಮಿಶ್ರಣದ ಪೆಟ್ರೋಲ್ ಅನ್ನು ಸಂಪೂರ್ಣವಾಗಿ ಹಿಂಪಡೆದಿರುವುದರಿಂದ, ಸಾರ್ವಜನಿಕರಿಗೆ ಯಾವುದೇ ಪರ್ಯಾಯ ಇಂಧನದ ಆಯ್ಕೆಯೂ ಉಳಿದಿಲ್ಲ ಎಂದು ತಿಳಿಸಿದರು.

ಎಥೆನಾಲ್ ಮಿಶ್ರಣದಿಂದ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ ಎಂದು ಕೇಂದ್ರ ಸರ್ಕಾರ ವಾದಿಸುತ್ತಿದೆ. ಆದರೆ, ಅದರ ಲಾಭ ಗ್ರಾಹಕರಿಗೆ ತಲುಪಿಲ್ಲ, ಮತ್ತು ಕಂಪನಿಗಳ ಒಟ್ಟು ಲಾಭ 77,821 ಕೋಟಿ ರೂ. (2025-26ರ ಆರ್ಥಿಕ ವರ್ಷ) ಇತ್ತು. ಜೊತೆಗೆ, ಆಟೋಮೊಬೈಲ್ ಕಂಪನಿಗಳಿಗೆ ಬರುವ ಲಾಭದಲ್ಲಿ ಸುಮಾರು 50% ರಷ್ಟು ಸರ್ವಿಸ್ ಮತ್ತು ಸ್ಪೇರ್ ಪಾರ್ಟ್ಸ್‌ಗಳ ಮಾರಾಟದಿಂದಲೇ ಬರುತ್ತದೆ. ತೈಲ ಕಂಪನಿಗಳು ದಾಖಲೆ ಮಟ್ಟದ ಲಾಭ ಗಳಿಸುತ್ತಿದ್ದರೆ, ಅತ್ತ ಮೈಲೇಜ್ ನಷ್ಟ ಮತ್ತು ವಾಹನ ದುರಸ್ತಿಯ ರೂಪದಲ್ಲಿ ಸಾಮಾನ್ಯ ಗ್ರಾಹಕರೇ ಈ ನಷ್ಟವನ್ನು ಅನುಭವಿಸುತ್ತಿದ್ದಾರೆ ಎಂದು ದೂರಿದರು. ಪ್ರಸ್ತುತ ಪೆಟ್ರೋಲ್ ಬಂಕ್‌ಗಳಲ್ಲಿ ಬಳಕೆಯಲ್ಲಿರುವ ಹೆಚ್ಚಿನ ಇಂಧನ ಡಿಸ್ಪೆನ್ಸಿಂಗ್ ಯೂನಿಟ್‌ಗಳು ಕೇವಲ ಎಥೆನಾಲ್ ಮಿಶ್ರಣಕ್ಕೆ ಮಾತ್ರ ಸರಿಹೊಂದುವಂತೆ ವಿನ್ಯಾಸಗೊಂಡಿವೆ. ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣವನ್ನು ಅಗತ್ಯವಿರುವ ಮೂಲಸೌಕರ್ಯ ಹಾಗೂ ಸಂಬಂಧಿತ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮೇಲ್ದರ್ಜೆಗೇರಿಸದಿರುವುದು ಗಂಭೀರ ಆತಂಕವನ್ನು ಹುಟ್ಟುಹಾಕಿದೆ.

ತಪಾಸಣೆ ನಿರಂತರ ಮುಂದುವರಿಕೆ


ಕರ್ನಾಟಕ ಸರ್ಕಾರ ರಾಜ್ಯಾದ್ಯಂತ ಇಂತಹ ತಪಾಸಣೆಗಳನ್ನು ನಿರಂತರವಾಗಿ ಮುಂದುವರಿಸಲಿದೆ. ಪರೀಕ್ಷಾ ಫಲಿತಾಂಶಗಳನ್ನು ನಿಯಮಿತವಾಗಿ ಸಾರ್ವಜನಿಕವಾಗಿ ಬಿಡುಗಡೆ ಮಾಡಲಿದೆ. ’ಮೋಟಾರು ಸ್ಪಿರಿಟ್ ಮತ್ತು ಹೈ ಸ್ಪೀಡ್ ಡೀಸೆಲ್ (ಸರಬರಾಜು, ವಿತರಣೆ ನಿಯಂತ್ರಣ ಹಾಗೂ ಅಕ್ರಮಗಳ ತಡೆಗಟ್ಟುವಿಕೆ) ಆದೇಶ, 2005’ರ ಅನ್ವಯ, ಇಂಧನ ಸರಬರಾಜು ಮತ್ತು ವಿತರಣೆಯಲ್ಲಿನ ಲೋಪಗಳ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರು, ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು ಹಾಗೂ ಡಿವೈಎಸ್‌ಪಿ ಶ್ರೇಣಿಗಿಂತ ಕಡಿಮೆಯಿಲ್ಲದ ಪೊಲೀಸ್ ಅಧಿಕಾರಿಗಳಿಗೆ ರಾಜ್ಯ ಸರ್ಕಾರವು ಕಾನೂನುಬದ್ಧ ಅಧಿಕಾರ ಪ್ರತ್ಯಾಯೋಜಿಸಿದೆ ಎಂದು ಸಚಿವರು ತಿಳಿಸಿದರು.

ಈ ದಿನದ ದರ ಪೆಟ್ರೋಲ್: 111.68 ₹/L | ಡೀಸೆಲ್ : 99.56 ₹/L | ಬಂಗಾರ: ₹14,346/Gram24ct ₹13,150 /Gram22ct | ಬೆಳ್ಳಿ: ₹205.00/Gram

ಧಾರ್ಮಿಕ ಪ್ರವಚನ

• ಉದಯವಾಹಿನಿ, ಬೆಂಗಳೂರು

ಸುಬ್ರಹ್ಮಣ್ಯನಗರದ ಸೋಸಲೆ ಶ್ರೀ ವ್ಯಾಸರಾಜ ಮಠದಲ್ಲಿ ನವೆಂಬರ್ 7 ರಿಂದ 13ರ ವರೆಗೆ ಪ್ರತಿದಿನ ಸಂಜೆ 6–00 ರಿಂದ 7–00 ಶ್ರೀ ಜಿ.ಪಿ. ನಾಗರಾಜಾಚಾರ್ಯರಿಂದ ವಿದುರ ನೀತಿ ವಿಷಯವಾಗಿ ಧಾರ್ಮಿಕ ಪ್ರವಚನ. ಸ್ಥಳ : ಸೋಸಲೆ ಶ್ರೀ ವ್ಯಾಸರಾಜ ಮಠ, 5ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ರಾಜಾಜಿನಗರ 2ನೇ ಹಂತ. ಸುಧೀಂದ್ರನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನವೆಂಬರ್ 7 ರಿಂದ 14ರ ವರೆಗೆ ಪ್ರತಿದಿನ ಸಂಜೆ 7–00 ರಿಂದ 8–00 ಶ್ರೀ ಡಂಬಳ ಜಯಸಿಂಹಾಚಾರ್ಯರಿಂದ ಶ್ರೀಮನ್ಮಹಾಭಾರತ ವಿಷಯವಾಗಿ ಧಾರ್ಮಿಕ ಪ್ರವಚನ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಈಜುಕೊಳದ ಬಡಾವಣೆ, ಬೆಂಗಳೂರು.




ಉದಯವಾಹಿನಿ ಚಿತ್ರ

104 ಅಕ್ರಮ ಖಾತೆ ಸೃಷ್ಟಿ ಆರೋಪ, ಕಂದಾಯ ಅಧಿಕಾರಿಗಳ ಅಮಾನತು..!

• ಉದಯವಾಹಿನಿ, ಬೆಂಗಳೂರು

ಇಬ್ಬರು ಅಧಿಕಾರಿಗಳ ಅಮಾನತು ಖಂಡಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ನೌಕರರ ಸಂಘ ಪ್ರತಿಭಟನೆಗೆ ಸಿದ್ಧತೆ ನಡೆಸುತ್ತಿದ್ದು, ಇದರ ಬೆನ್ನಲ್ಲೇ ಜಿಬಿಎ ವಿಶೇಷ ಆಯುಕ್ತ (ಕಂದಾಯ) ಮುನೀಶ್ ಮೌದ್ಗಿಲ್ ಅವರು ಐದು ನಗರ ಪಾಲಿಕೆಗಳ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಅಕ್ರಮವಾಗಿ ಮತ್ತು ಅನರ್ಹವಾಗಿ ಹೊಸ ಇ–ಖಾತಾಗಳನ್ನು ಸೃಷ್ಟಿಸಿದ ಆರೋಪದ ಹಿನ್ನೆಲೆಯಲ್ಲಿ ಇಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ ಎಂದು ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ. ಬೆಂಗಳೂರು ಪೂರ್ವ ನಗರ ಪಾಲಿಕೆಯ ಕೆ.ಆರ್.ಪುರ ವಿಭಾಗದ ಪ್ರಭಾರ ಕಂದಾಯ ಅಧಿಕಾರಿ ಬಸವರಾಜ್ ಮಾಫಿ ಅವರನ್ನು ನವೆಂಬರ್ 3ರಂದು ಅಮಾನತುಗೊಳಿಸಲಾಗಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಕೆಂಗೇರಿ ವಿಭಾಗದ ಸಹಾಯಕ ಆಯುಕ್ತ ಪ್ರಭಾರ ಕಂದಾಯ ಅಧಿಕಾರಿ ಲೋಕಮಾತಾ ಡಿ.ಎಸ್. ಅವರನ್ನು ನವೆಂಬರ್ 4ರಂದು ಅಮಾನತುಗೊಳಿಸಲಾಗಿದೆ.

ಖಾಸಗಿ ಬಿಲ್ಡರ್‌ಗಳು ಅಕ್ರಮವಾಗಿ ನಿರ್ಮಿಸಿರುವ ಅಪಾರ್ಟ್‌ಮೆಂಟ್‌ಗಳಿಗೆ ಹೊಸ ಇ–ಖಾತಾಗಳನ್ನು ನೀಡಲು ಇ–ಆಸ್ತಿ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಮೌದ್ಗಿಲ್ ಪತ್ರದಲ್ಲಿ ಆರೋಪಿಸಿದ್ದಾರೆ.

ಸಾಲ ಮರುಪಾವತಿಯಾಗದ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳು ಆಸ್ತಿಗಳನ್ನು ಹರಾಜು ಹಾಕುವ ಸಂದರ್ಭದಲ್ಲಿ ಬ್ಯಾಂಕ್‌ಗಳ ಹೆಸರಿನಲ್ಲಿ ಇ–ಖಾತಾ ನೀಡಲು ಈ ವ್ಯವಸ್ಥೆಯನ್ನು ರೂಪಿಸಲಾಗಿತ್ತು.

ಬೆನ್ನಲ್ಲೇ ಜಿಬಿಎ ವಿಶೇಷ ಆದರೆ, ಈ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ಖಾಸಗಿ ಬಿಲ್ಡರ್‌ಗಳ ಹೆಸರಿನಲ್ಲಿ ಹೊಸ ಇ–ಖಾತಾಗಳನ್ನು ನೀಡಲಾಗಿದೆ. ಈ ಪ್ರಕ್ರಿಯೆಯಲ್ಲಿ ಬ್ಯಾಂಕ್‌ಗಳ ಯಾವುದೇ ಅನುಮತಿ ಅಥವಾ ಬ್ಯಾಂಕ್ ಪ್ರತಿನಿಧಿಗಳ ಉಪಸ್ಥಿತಿಯೂ ಇರಲಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪಿತೃಕಾರ್ಯದಲ್ಲಿ ಭಾಗವಹಿಸಲು ಸಾಕ್ಷಿದಾರ ಪ್ರದೋಶ್ ಗೆ ಜಾಮೀನು!

• ಉದಯವಾಹಿನಿ, ಬೆಂಗಳೂರು


ನಟ ದರ್ಶನ್ ಭಾಗಿಯಾಗಿರುವ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಅಪ್ರೂವರ್' (ಸಾಕ್ಷಿದಾರನಾಗಿ ಬದಲಾದ ಆರೋಪಿ) ಆಗಿರುವ ಪ್ರದೂಷ್ ಎಸ್. ರಾವ್ ಗೆ, ಆತನ ತಂದೆಯ ಮೊದಲ ಪುಣ್ಯತಿಥಿಯ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲು ನವೆಂಬರ್ 7 ರಿಂದ 12 ರವರೆಗೆ ಜಾಮೀನು ನೀಡುವಂತೆ ಕರ್ನಾಟಕ ಹೈಕೋರ್ಟ್ ಆದೇಶಿಸಿದೆ.

ತಮ್ಮ ತಂದೆ ಸುಬ್ಬರಾವ್ ಅವರ ಮೊದಲ ಪುಣ್ಯತಿಥಿಯ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲು 20 ದಿನಗಳ ಕಾಲ ಜಾಮೀನು ಕೋರಿ ಪ್ರದೂಷ್ ಎಸ್. ರಾವ್ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರು ಈ ಆದೇಶ ಹೊರಡಿಸಿದ್ದಾರೆ. ನವೆಂಬರ್ 7 ರಂದು ಬೆಳಿಗ್ಗೆ 8 ಗಂಟೆಗೆ ರಾವ್ ಅವರನ್ನು ಜೈಲಿನಿಂದ ಅವರ ನಿವಾಸಕ್ಕೆ ಕರೆತರಬೇಕು ಮತ್ತು ಧಾರ್ಮಿಕ ವಿಧಿವಿಧಾನಗಳು ಮುಗಿದ ತಕ್ಷಣ ಅವರನ್ನು ಮತ್ತೆ ಜೈಲಿಗೆ ಕರೆದೊಯ್ಯಬೇಕು ಎಂಬ ಷರತ್ತನ್ನು ನ್ಯಾಯಾಲಯ ವಿಧಿಸಿದೆ.

ನವೆಂಬರ್ 7 ರಿಂದ 12 ರವರೆಗೆ ಪ್ರತಿದಿನ ಸಂಜೆ 6 ಗಂಟೆಯೊಳಗೆ ರಾವ್ ಅವರನ್ನು ಜೈಲಿಗೆ ಮರಳಿ ಕರೆತರಬೇಕು ಎಂದು ನಿರ್ದೇಶನ ನೀಡಲಾಗಿದೆ.

ಅಲ್ಲದೆ, ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಕುಟುಂಬ ಸದಸ್ಯರು ಮತ್ತು ಪುರೋಹಿತರ ಪಟ್ಟಿಯನ್ನು ವಿಚಾರಣಾ ನ್ಯಾಯಾಲಯ ಜೈಲು ಅಧಿಕಾರಿಗಳು ಹಾಗೂ ಸಿಟಿ ಆರ್ಮ್ಡ್ ರಿಸರ್ವ್ ಪೊಲೀಸರಿಗೆ ಸಲ್ಲಿಸಬೇಕು ಎಂದು ನ್ಯಾಯಾಲಯ ನಿರ್ದೇಶಿಸಿದೆ.

ಅಭಿವೃದ್ಧಿಗಾಗಿ 20,000 ಕೋಟಿ ರೂ. ಪ್ಯಾಕೇಜ್‌ಗೆ ಅನುಮೋದನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸಚಿವ ಸಂಪುಟವು ಸುಮಾರು 20,000 ಕೋಟಿ ರೂಪಾಯಿಗಳ ಹೂಡಿಕೆಯನ್ನು ಒಳಗೊಂಡ ಮೂಲಸೌಕರ್ಯ ಅಭಿವೃದ್ಧಿ ಪ್ಯಾಕೇಜ್ ಅನುಮೋದನೆ ನೀಡಿದೆ. ಇದರಲ್ಲಿ ರಾಜ್ಯ ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳು , ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ನಡುವಿನ ಸಂಪರ್ಕ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಬಿ. ಖಂಡ್ರೆ, ಕರ್ನಾಟಕದಾದ್ಯಂತ ಮೂಲಸೌಕರ್ಯವನ್ನು ಬಲಪಡಿಸಲು, ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಅಭಿವೃದ್ಧಿಯನ್ನು ವೇಗಗೊಳಿಸುವ ಗುರಿಯೊಂದಿಗೆ ಸರ್ಕಾರವು ಹಲವಾರು ನಿರ್ಧಾರಗಳನ್ನು ತೆಗೆದುಕೊಂಡಿದೆ ಎಂದು ತಿಳಿಸಿದರು. ರಾಜ್ಯದ ಆರ್ಥಿಕ ಸ್ಥಿತಿಯು ಸದೃಢವಾಗಿದೆ. ಜಿಎಸ್‌ಟಿ ಸೇರಿದಂತೆ ವಿವಿಧ ಮೂಲಗಳಿಂದ ಬರುತ್ತಿರುವ ಆದಾಯವು ನಿರೀಕ್ಷೆಯಂತೆಯೇ ಇರುವುದರಿಂದ, ಸರ್ಕಾರವು ತನ್ನ ಬದ್ಧತೆಗಳನ್ನು ಈಡೇರಿಸಲು ಸಾಧ್ಯವಾಗಿದೆ, ಎಂದು ಅವರು ಹೇಳಿದರು. ಸುಮಾರು 20,000 ಕೋಟಿ ರೂಪಾಯಿ ವೆಚ್ಚದ ಬೃಹತ್ ರಸ್ತೆ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ. ರಾಜ್ಯದಾದ್ಯಂತ, ವಿಶೇಷವಾಗಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ನಡುವೆ ರಸ್ತೆ ಸಂಪರ್ಕವನ್ನು ಸುಧಾರಿಸುವುದು

ಮತ್ತು ಅಸ್ತಿತ್ವದಲ್ಲಿರುವ ರಸ್ತೆ ಜಾಲವನ್ನು ಬಲಪಡಿಸುವುದು ನಮ್ಮ ಉದ್ದೇಶವಾಗಿದೆ ಎಂದು ಖಂಡ್ರೆ ತಿಳಿಸಿದರು. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ'ಯ 5ನೇ ಹಂತದ, 2ನೇ ಘಟ್ಟದ ಅಡಿಯಲ್ಲಿ 1,897 ಕಿ.ಮೀ ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಹಾಸನಾಂಬೆ ದರ್ಶನಕ್ಕೆ ಸಮಯ ನಿಗದಿ

• ಉದಯವಾಹಿನಿ, ಬೆಂಗಳೂರು

ಹಾಸನದಲ್ಲಿ ಪೂರ್ವನಿಗದಿತ ಕಾರ್ಯಕ್ರಮಗಳಿರುವ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸುವ ಸಾಧ್ಯತೆಯಿಲ್ಲ. ಹಾಸನದಲ್ಲಿ ಮೊದಲೇ ನಿಗದಿಯಾಗಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಿರುವುದರಿಂದ, ರಾಹುಲ್ ಗಾಂಧಿ ಸಭೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲ ಎಂದು ಸಿದ್ದರಾಮಯ್ಯ ಪಕ್ಷಕ್ಕೆ ತಿಳಿಸಿದ್ದಾರೆ. ಕಾಂಗ್ರೆಸ್ ನಾಯಕರು ಕರೆದಿರುವ ಈ ಸಭೆಯಲ್ಲಿ ಚಹಾ ಕೂಟದಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಮತ್ತು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಹಾಸನಕ್ಕೆ ಭೇಟಿ ನೀಡಿ, ವಾರ್ಷಿಕ ಹಾಸನಾಂಬ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಐತಿಹಾಸಿಕ ಹಾಸನಾಂಬ ದೇವಾಲಯದಲ್ಲಿ ದರ್ಶನ ಪಡೆಯಲಿದ್ದಾರೆ.

ಹಾಸನದಲ್ಲಿ ವಾರ್ಷಿಕ ಹಾಸನಾಂಬ ದೇವಾಲಯದ ಜಾತ್ರಾ ಮಹೋತ್ಸವ ಸದ್ಯ ನಡೆಯುತ್ತಿದೆ. ಹೊಯ್ಸಳ ಕಾಲದ ಈ ಐತಿಹಾಸಿಕ ದೇವಾಲಯದ ಬಾಗಿಲು ಅಕ್ಟೋಬರ್ 29 ರಂದು ತೆರೆದಿದ್ದು, ನವೆಂಬರ್ 11, ರಂದು ಮುಕ್ತಾಯಗೊಳ್ಳಲಿವೆ.

ಇಂದುಶೇಖರ್ ಕುಕೃತ್ಯಕ್ಕೆ ಸಹಾಯ: ಪೊಲೀಸ್ ಕಮಿಷನರ್ ಹೇಳಿಕೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಇಡೀ ಬೆಂಗಳೂರನ್ನು ಬೆಚ್ಚಿಬೀಳಿಸುವ ಕ್ಯಾಬ್ ಡ್ರೈವರ್ ತನ್ನ ಪತ್ನಿ ಮತ್ತು ಆಕೆಯ ಕುಟುಂಬದ ಆರು ಮಂದಿಯನ್ನು ಹತ್ಯೆ ಮಾಡಿರುವ ಘಟನೆಗೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಪ್ರತಿಕ್ರಿಯೆ ನೀಡಿದ್ದಾರೆ.

ಆರೋಪಿ ಇಂದುಶೇಖರ್ ಮನೆಯಲ್ಲಿ ಮಸಾಲೆ ರುಬ್ಬಲು ಬಳಸುವ ರುಬ್ಬುಗುಂಡಿನಿಂದ ಇಡೀ ಕುಟುಂಬವನ್ನೇ ಹತ್ಯೆ ಮಾಡಿದ್ದಾನೆ. ಪತ್ನಿ, ಪತ್ನಿಯ ತಾಯಿ, ಪತ್ನಿಯ ಅಣ್ಣಂದಿರು, ಅತ್ತಿಗೆಯರನ್ನು ಇಂದುಶೇಖರ್ ಮನೆಗೆ ಕರೆಸಿ ಪೂರ್ವನಿಯೋಜಿತವಾಗಿ ಸಂಚು ರೂಪಿಸಿ ಕೊಲೆಗೈದಿದ್ದಾನೆ. ಈ ಪ್ರಕರಣದ ಪ್ರಾಥಮಿಕ ತನಿಖೆಯ ಬಗ್ಗೆ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಮಾಹಿತಿ ನೀಡಿದ್ದಾರೆ. ರಾಜಾಜಿನಗರ ಪೊಲೀಸ್ ಠಾಣೆಗೆ ಭೇಟಿ ನೀಡಿದ ಪೊಲೀಸ್ ಆಯುಕ್ತರು ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದಾರೆ. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ತಮ್ಮ ಸಂಬಂಧಿಕರು ಕಾಣೆಯಾಗಿದ್ದಾರೆ ಎಂದು ಇಂದುಶೇಖರ್ ಪತ್ನಿಯ ಸಂಬಂಧಿಕರು ದೂರು ನೀಡಿದ್ದರು. ನಾಪತ್ತೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಬಳಿಕ ದೂರುದಾರರಿಗೆ ತಮ್ಮದೇ ಕೆಲವು ಸಂಬಂಧಿಕರ ಮೇಲೆ ಅನುಮಾನ ವ್ಯಕ್ತವಾಗಿತ್ತು. ಈ ಸಂಬಂಧ ಪೊಲೀಸರು ಇಂದುಶೇಖರ್ ನನ್ನು ಬಂಧಿಸಿದರು. ಆತ ಕಳೆದ 15 ರಿಂದ 20 ದಿನಗಳ ಅವಧಿಯಲ್ಲಿ ಏಳು ಮಂದಿಯನ್ನು ಕೊಲೆ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ.

ಚತುಷ್ಪಥ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಬಳ್ಳಾರಿ ರಸ್ತೆ ಬಂದ್!

ಸ್ಟಾಫ್ ಕ್ವಾರ್ಟರ್ಸ್‌ನಿಂದ ಮೆಖ್ರಿ ಸರ್ಕಲ್‌ವರೆಗೆ ನಾಲ್ಕು ಪಥದ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಕಾಮಗಾರಿಯು ಮುಂದಿನ 18 ತಿಂಗಳ ಕಾಲ ನಿರಂತರವಾಗಿ ನಡೆಯಲಿದೆ.

• ಉದಯವಾಹಿನಿ, ಬೆಂಗಳೂರು

1. 18 ತಿಂಗಳ ಕಾಲ ನಿರಂತರವಾಗಿ ನಡೆಯಲಿದೆ
2. ಕೇವಲ ಸರ್ವಿಸ್ ರಸ್ತೆಯಲ್ಲಿ ಮಾತ್ರವೇ ಸೀಮಿತ
3. ಪರ್ಯಾಯ ಮಾರ್ಗಗಳನ್ನು ಬಳಸುವಂತೆ ಸಲಹೆ

ಮೆಖ್ರಿ ಸರ್ಕಲ್‌ನಿಂದ ಹೆಬ್ಬಾಳದವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಲ್ಕು ಪಥದ ಬೃಹತ್ ಎಲಿವೇಟೆಡ್ ಕಾರಿಡಾರ್ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ನವೆಂಬರ್ 6 ರಿಂದ ಜಾರಿಗೆ ಬರುವಂತೆ ಬಳ್ಳಾರಿ ರಸ್ತೆಯಲ್ಲಿ ಭಾರಿ ಸಂಚಾರ ಮಾರ್ಗ ಬದಲಾವಣೆಗಳನ್ನು ಮಾಡಲಾಗಿದೆ.

ಬಳ್ಳಾರಿ ರಸ್ತೆಯ ಯುಎಎಸ್ ಸ್ಟಾಫ್ ಕ್ವಾರ್ಟರ್ಸ್‌ನಿಂದ ಮೆಖ್ರಿ ಸರ್ಕಲ್‌ವರೆಗೆ ನಾಲ್ಕು ಪಥದ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಕಾಮಗಾರಿಯು ಮುಂದಿನ 18 ತಿಂಗಳ ಕಾಲ ನಿರಂತರವಾಗಿ ನಡೆಯಲಿದೆ. ಕಾಮಗಾರಿಯ ಹಿನ್ನೆಲೆಯಲ್ಲಿ ಮೆಖ್ರಿ ಸರ್ಕಲ್‌ನಿಂದ ಹೆಬ್ಬಾಳದವರೆಗಿನ ಪ್ರಮುಖ ರಸ್ತೆಯನ್ನು (ಸಂಪೂರ್ಣವಾಗಿ ಮುಚ್ಚಲಾಗುತ್ತಿದ್ದು, ಕೇವಲ ಸರ್ವಿಸ್ ರಸ್ತೆಯಲ್ಲಿ ಮಾತ್ರವೇ ಸೀಮಿತ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗಿದೆ.

ನವೆಂಬರ್ 6, 2026 ರಂದು ಪ್ರಾರಂಭವಾಗಲಿರುವ ಈ ನಿರ್ಮಾಣ ಕಾಮಗಾರಿಯು 18 ತಿಂಗಳುಗಳ ಕಾಲ ಮುಂದುವರಿಯಲಿದೆ.

ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಸದಾಶಿವನಗರ ಮತ್ತು ಸಂಜಯನಗರ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಗೆ ಬರುವ ಈ ರಸ್ತೆಯಲ್ಲಿ ವಾಹನ ಸಂಚಾರದ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿದೆ. ಸಂಚಾರ ಸುಗಮವಾಗಿ ಸಾಗಲು ಅನುಕೂಲವಾಗುವಂತೆ, ಬಳ್ಳಾರಿ ರಸ್ತೆಯಲ್ಲಿ ಎಲ್ಲಾ ರೀತಿಯ ಸರಕು ಸಾಗಣೆ ವಾಹನಗಳು ಹಗುರ, ಮಧ್ಯಮ ಮತ್ತು ಭಾರೀ ಸರಕು ವಾಹನಗಳು ಹಾಗೂ ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದ್ದರಿಂದ, ಹೆಬ್ಬಾಳದ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಬೆಂಗಳೂರು ನಗರದ ಕಡೆಗೆ ಸಂಚರಿಸುವ ವಾಹನಗಳು (ತುರ್ತು ಸೇವಾ ವಾಹನಗಳು ಸೇರಿದಂತೆ), ಕೆಳಗೆ ಸೂಚಿಸಲಾದ ಪರ್ಯಾಯ ಮಾರ್ಗಗಳನ್ನು ಬಳಸುವಂತೆ ಸಲಹೆ ನೀಡಲಾಗಿದೆ.



ಉದಯವಾಹಿನಿ ಚಿತ್ರ

ವಿಮಾನ ನಿಲ್ದಾಣಕ್ಕೆ ತೆರಳುವ ಪ್ರಯಾಣಿಕರು ನಿಗದಿತ ಸಮಯಕ್ಕಿಂತ ಕನಿಷ್ಠ 1 ರಿಂದ 2 ಗಂಟೆಗಳ ಮುಂಚಿತವಾಗಿ ಹೊರಡುವುದು ಸೂಕ್ತ. ಟ್ರಾಫಿಕ್ ಅಡಚಣೆಯನ್ನು ತಪ್ಪಿಸಲು ಸಂಚಾರಿ ಪೊಲೀಸರು ಪ್ರಕಟಿಸಿರುವ ಪರ್ಯಾಯ ಮಾರ್ಗಗಳನ್ನೇ ಬಳಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿದೆ. –ಸಂಚಾರಿ ಪೊಲೀಸರು

ಹೆಬ್ಬಾಳ ಮೂಲಕ ಏರ್‌ಪೋರ್ಟ್‌ಗೆ ತೆರಳುವ ವಾಹನಗಳು

ಓಲ್ಡ್ ಹೈ ಗ್ರೌಂಡ್ಸ್ ಜಂಕ್ಷನ್ ಕಲ್ಪನಾ ಜಂಕ್ಷನ್ ಓಲ್ಡ್ ಉದಯ ಟಿವಿ ಜಂಕ್ಷನ್ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ ಟ್ಯಾನರಿ ರಸ್ತೆ ನಾಗವಾರ ರಸ್ತೆ ಮಾರ್ಗವಾಗಿ ರಿಂಗ್ ರೋಡ್ ತಲುಪಿ ವಿಮಾನ ನಿಲ್ದಾಣಕ್ಕೆ ಸಂಚರಿಸಬೇಕು.

ಯಶವಂತಪುರದಿಂದ ವಿಮಾನ ನಿಲ್ದಾಣದ ಕಡೆಗೆ ತೆರಳುವವರಿಗೆ

ಯಶವಂತಪುರ ಭಾಗದಿಂದ ಬರುವ ವಾಹನಗಳು: ಮತ್ತಿಕೆರೆ ರಸ್ತೆ ಬಿಇಎಲ್ ವೃತ್ತದಲ್ಲಿ ಬಲಕ್ಕೆ ತಿರುವು ಹೆಬ್ಬಾಳ/ನಾಗವಾರ ರಿಂಗ್ ರೋಡ್ ಮೂಲಕ ಸಂಚರಿಸಬೇಕು.ವಿಮಾನ ನಿಲ್ದಾಣದಿಂದ ನಗರದ ಕೇಂದ್ರ ಭಾಗಕ್ಕೆ ಬರುವವರಿಗೆ ಮಾರ್ಗ 1: ವಿಮಾನ ನಿಲ್ದಾಣದಿಂದ ಬರುವ ವಾಹನಗಳು ಹೆಬ್ಬಾಳದಲ್ಲಿ ಎಡಕ್ಕೆ ತಿರುಗಿ ನಾಗವಾರ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಬಂಬುಬಜಾರ್ ಕ್ವೀನ್ಸ್ ರಸ್ತೆ ಮಾರ್ಗವಾಗಿ ನಗರ ಪ್ರವೇಶಿಸಬಹುದು.

ಮಾರ್ಗ 2: ಹೆಬ್ಬಾಳದಲ್ಲಿ ಬಲಕ್ಕೆ ತಿರುಗಿ ಹೆಬ್ಬಾಳ್ ರಿಂಗ್ ರಸ್ತೆ ಕುವೆಂಪು ಸರ್ಕಲ್ ಗೊರಗುಂಟೆಪಾಳ್ಯ ಜಂಕ್ಷನ್ ಡಾ. ರಾಜ್‌ಕುಮಾರ್ ರಸ್ತೆ ಮಾರ್ಗವಾಗಿ ನಗರ ಪ್ರವೇಶಿಸಬಹುದುಯಶವಂತಪುರದಿಂದ ನಗರದ ಕೇಂದ್ರ ಭಾಗಕ್ಕೆ ಬರುವ ವಾಹನಗಳಿಗೆಯಶವಂತಪುರ ಕಡೆಯಿಂದ ಬರುವ ವಾಹನಗಳು: ಬಿಎಚ್‌ಇಎಲ್ ಜಂಕ್ಷನ್ ಮಾರಮ್ಮ ಸರ್ಕಲ್ ಬಳಿ ಬಲಕ್ಕೆ ತಿರುವು ಮಾರ್ಗೋಸಾ ರಸ್ತೆ ಮೂಲಕ ನಗರದ ಕೇಂದ್ರ ಭಾಗವನ್ನು ತಲುಪಬಹುದು.

ಹೆಬ್ಬಾಳದಿಂದ ನಗರದ ಕಡೆಗೆ ಬರುವ ಸಾಮಾನ್ಯ ವಾಹನಗಳಿಗೆ ಹೆಬ್ಬಾಳ ಫ್ಲೈಓವರ್ ಇಳಿದ ಬಳಿಕ ಬ್ಯಾಪ್ಟಿಸ್ಟ್ ಆಸ್ಪತ್ರೆ ಮುಂಭಾಗದ ಸರ್ವಿಸ್ ರಸ್ತೆಗೆ ತೆರಳಿ ಸಿಬಿಐ (ಜಂಕ್ಷನ್ ಮೂಲಕ ಮರಳಿ ಬಳ್ಳಾರಿ ಮುಖ್ಯ ರಸ್ತೆಗೆ ಸಂಪರ್ಕ ಪಡೆಯಬಹುದು.

ಅಮಾನತು ಆದೇಶಗಳ ವಿರುದ್ಧ ಅಧಿಕಾರಿಗಳ ಒಗ್ಗಟ್ಟಿನ ಹೋರಾಟಕ್ಕೆ ನಿರ್ಧಾರ

• ಉದಯವಾಹಿನಿ, ಕೆ.ಆರ್.ಪುರ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಅಧಿಕಾರಿಗಳು ಮತ್ತು ನೌಕರರು ಮೌನ ಪ್ರತಿಭಟನೆ ನಡೆಸಲಾವುದು ಎಂದು ಬೆಂಗಳೂರು ಪ್ರಾಧಿಕಾರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರ ಅಮೃತರಾಜ್ ತಿಳಿಸಿದ್ದಾರೆ.

ನಗರದ ಬೆಂಗಳೂರು ಪ್ರಾಧಿಕಾರ ಕ್ಷೇಮಾಭಿವೃದ್ಧಿ ಸಂಘದ ನೌಕರರ ಭವನದಲ್ಲಿ ಹಮ್ಮಿಕೊಂಡಿದ ಸಭೆಯಲ್ಲಿ ಮತನಾಡಿದ ಅವರು ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಹಗಲಿರುಳು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕಂದಾಯ ವಿಭಾಗದ ಕಂದಾಯ ಅಧಿಕಾರಿಗಳಾದ ಡಾ. ಬಸವರಾಜು ಮಾಗಿ ಹಾಗೂ ಲೋಕಮಾತಾ ಅವರನ್ನು ಯಾವುದೇ ಕಾರಣ ಕೇಳುವ ನೋಟಿಸ್ ನೀಡದೆ, ಯಾವುದೇ ವಿಚಾರಣೆ ನಡೆಸದೆ, ಅವೈಜ್ಞಾನಿಕವಾಗಿ ಏಕಪಕ್ಷೀಯವಾಗಿ ಅಮಾನತುಗೊಳಿಸಿರುವ ಕ್ರಮವನ್ನು ಖಂಡಿಸಲಾಗುದೆ ಎಂದರು.



ಉದಯವಾಹಿನಿ ಚಿತ್ರ

ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಅವೈಜ್ಞಾನಿಕ ಅಮಾನತು ಕ್ರಮದ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ಯಾವುದೇ ಮುನ್ಸೂಚನೆ ಅಥವಾ ಸಮಂಜಸವಾದ ಅವಕಾಶ ನೀಡದೆ ಕೈಗೊಂಡಿರುವ ಅಮಾನತು ಆದೇಶಗಳನ್ನು ಕೂಡಲೇ ಹಿಂಪಡೆಯಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ನ್ಯಾಯ ಒದಗಿಸಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಲಾಯಿತು.ಒಂದು ವೇಳೆ ಅಮಾನತು ಆದೇಶಗಳನ್ನು ಕೂಡಲೇ ಹಿಂಪಡೆಯದಿದ್ದಲ್ಲಿ, ಯಾವುದೇ ಮುನ್ಸೂಚನೆ ನೀಡದೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲಾ ಕೆಲಸಕಾರ್ಯಗಳನ್ನು ಸ್ಥಗಿತಗೊಳಿಸಿ, ಪ್ರಾಧಿಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ನೌಕರರು ಒಗ್ಗೂಡಿ ನ್ಯಾಯ ದೊರೆಯುವವರೆಗೂ ಮೌನ ಪ್ರತಿಭಟನೆ ನಡೆಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು.

ಈ ಸಭೆಯಲ್ಲಿ ಸುಮಾರು 80 ಸಹಾಯಕ ಕಂದಾಯ ಅಧಿಕಾರಿಗಳು, 30 ಕಂದಾಯ ಅಧಿಕಾರಿಗಳು ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಇಬ್ಬರು ಉಪ ಆಯುಕ್ತರು ಉಪಸ್ಥಿತರಿದ್ದರು.

ಮತಯಂತ್ರಗಳ ಬದಲು ಮತಪತ್ರಗಳ ಬಳಕೆ

ಮತಪತ್ರಗಳನ್ನು ಬಳಸುವ ಪ್ರಸ್ತಾವನೆಗೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಅನುಮೋದನೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ವಿದ್ಯುನ್ಮಾನ ಮತಯಂತ್ರಗಳ ಬದಲಿಗೆ ಮತಪತ್ರಗಳ ಮೂಲಕ ನಡೆಸಲಾಗುವುದು ಎಂದು ಸಚಿವ ಈಶ್ವರ್ ಖಂಡ್ರೆ, ಸಚಿವ ಸಂಪುಟ ಸಭೆಯ ಬಳಿಕ ತಿಳಿಸಿದ್ದಾರೆ. ಹೊಸ ಮತದಾರರ ಪಟ್ಟಿಯನ್ನು ಬಳಸಬೇಕೇ ಅಥವಾ ಹಳೆಯ ಪಟ್ಟಿಯನ್ನೇ ಮುಂದುವರಿಸಬೇಕೇ ಎಂಬುದನ್ನು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಲಿದೆ ಎಂದು ಹೇಳಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬದಲಿಗೆ ಮತ್ತೆ ಮತಪತ್ರಗಳನ್ನು ಬಳಸುವ ಪ್ರಸ್ತಾವನೆಗೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಅನುಮೋದನೆ ನೀಡಿದೆ. ವಿದ್ಯುನ್ಮಾನ ಮತದಾನದ ಬಗ್ಗೆ ಸಾರ್ವಜನಿಕರಲ್ಲಿ ಇರುವ ವಿಶ್ವಾಸ ಕೊರತೆಯ ಕುರಿತ ಕಳವಳಗಳನ್ನು ನಿವಾರಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸೇರಿದಂತೆ ಗ್ರಾಮೀಣ ಮತ್ತು ನಗರ ಪ್ರದೇಶಗಳ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಈ ಕ್ರಮ ಅನ್ವಯವಾಗಲಿದೆ ಎಂದು ಹೇಳಿದರು.

ಮುಖ್ಯವಾಗಿ, ಈ ಬದಲಾವಣೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಮಾತ್ರ ಅನ್ವಯಿಸುತ್ತದೆ. ಭಾರತ ಚುನಾವಣಾ ಆಯೋಗದ ನಿಯಮ ಪ್ರಕಾರ ಕರ್ನಾಟಕ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಇವಿಎಂಗಳ ಬಳಕೆ ಮುಂದುವರಿಯಲಿದೆ. ಕರ್ನಾಟಕದಲ್ಲಿ ಈ ಹಿಂದೆ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂಗಳನ್ನು ಬಳಸಲಾಗಿತ್ತು. 2014ರಲ್ಲಿ ಮಹಾನಗರ ಪಾಲಿಕೆಗಳು ಮತ್ತು ನಗರಸಭೆಗಳು ಸೇರಿದಂತೆ 155 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂಗಳನ್ನು ಬಳಸಲಾಗಿತ್ತು. 2015ರಲ್ಲಿ ನಡೆದ ಬೆಂಗಳೂರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿಯೂ ಇವಿಎಂಗಳನ್ನು ಬಳಸಲಾಗಿತ್ತು. ಆದರೆ, ಹಲವು ಗ್ರಾಮ ಪಂಚಾಯಿತಿ ಮತ್ತು ಸಹಕಾರ ಸಂಘಗಳ ಚುನಾವಣೆಗಳಲ್ಲಿ ಮತಪತ್ರಗಳ ಬಳಕೆ ಮುಂದುವರಿದಿತ್ತು.



ಉದಯವಾಹಿನಿ ಚಿತ್ರ

ಹಳೆಯ ಪಟ್ಟಿ ಬಳಸಬೇಕಾ, ಪರಿಷ್ಕೃತ ಪಟ್ಟಿ ಬಳಸಬೇಕಾ? ಸಂಪುಟದಲ್ಲಿ ಚರ್ಚೆ

• ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ಪ್ರಾಧಿಕಾರ ಸೇರಿದಂತೆ ಸ್ಥಳೀಯ ಸಂಸ್ಥೆಗಳು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಗಳನ್ನು ಹಳೆಯ ಮತದಾರರ ಪಟ್ಟಿಯ ಆಧಾರದ ಮೇಲೆ ನಡೆಸಬೇಕೇ ಅಥವಾ ವಿಶೇಷ ತೀವ್ರ ಪರಿಷ್ಕರಣೆ ಬಳಿಕ ಸಿದ್ಧಪಡಿಸಲಾದ ಪರಿಷ್ಕೃತ ಮತದಾರರ ಪಟ್ಟಿಯನ್ನು ಬಳಸಬೇಕೇ ಎಂಬ ಬಗ್ಗೆ ರಾಜ್ಯ ಸಚಿವ ಸಂಪುಟ ಸುದೀರ್ಘ ಚರ್ಚೆ ನಡೆಸಿತು. ಈ ವಿಚಾರದಲ್ಲಿ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳಲಾಗಿಲ್ಲ. ಇತರೆ ರಾಜ್ಯಗಳು ಯಾವ ಕ್ರಮ ಅನುಸರಿಸುತ್ತಿವೆ ಎಂಬುದನ್ನು ಪರಿಶೀಲಿಸಿದ ಬಳಿಕ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಗಿದೆ.

ಕರ್ನಾಟಕದಲ್ಲಿ ನಡೆದ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಯಾವುದೇ ಲೋಪದೋಷಗಳಿಲ್ಲದೆ ಪೂರ್ಣಗೊಂಡಿದೆ. ಹೀಗಾಗಿ, ಪರಿಷ್ಕೃತ ಮತದಾರರ ಪಟ್ಟಿಯನ್ನೇ ಚುನಾವಣೆಗಳಿಗೆ ಬಳಸಬಹುದು ಎಂದು ಕೆಲವು ಸಚಿವರು ಅಭಿಪ್ರಾಯಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಈಶ್ವರ್ ಬಿ. ಖಂಡ್ರೆ ಅವರು, ಇವಿಎಂಗಳ ಬದಲಿಗೆ ಮತಪತ್ರಗಳ ಮೂಲಕ ಚುನಾವಣೆ ನಡೆಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಪುನರುಚ್ಚರಿಸಿದರು. ಮತಪೆಟ್ಟಿಗೆಗಳ ಖರೀದಿಗಾಗಿ ನಾವು ಅನುದಾನ ಮಂಜೂರು ಮಾಡಿದ್ದೇವೆ ಎಂದರು.



ಉದಯವಾಹಿನಿ ಚಿತ್ರ

ಮಹಿಳೆಯ ಮೇಲೆ ಅತ್ಯಾಚಾರವೆಸಗಿದ ಆರೋಪ ವ್ಯಕ್ತಿ ಬಂಧನ

• ಉದಯವಾಹಿನಿ, ಬೆಂಗಳೂರು

ಕೋರಮಂಗಲದ ಪಬ್ ಒಂದರಲ್ಲಿ ಸಿಗರೇಟು ಹಚ್ಚಲು ಲೈಟರ್ ಕೇಳುವ ಮೂಲಕ ಆರಂಭವಾದ ಪರಿಚಯವೊಂದು, ಅತ್ಯಾಚಾರದಲ್ಲಿ ಅಂತ್ಯಗೊಂಡಿದೆ ಎಂದು ಆರೋಪಿಸಲಾಗಿದೆ. ಅಕ್ಟೋಬರ್ 24 ರಂದು ಹೊಸೂರು ರಸ್ತೆಯಲ್ಲಿರುವ ಹೋಟೆಲ್ ಒಂದರಲ್ಲಿ, ಕೇರಳ ಮೂಲದ 30 ವರ್ಷದ ವ್ಯಕ್ತಿಯೊಬ್ಬ ರಾಜಸ್ಥಾನದ ಜೈಪುರದ 27 ವರ್ಷದ ಬ್ಯೂಟಿಷಿಯನ್ (ಸೌಂದರ್ಯ ತಜ್ಞೆ) ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ. ಮಡಿವಾಳ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ.

ಆರೋಪಿ ಸಮೀರ್ ಎಂ.ವಿ. ಸೆಕೆಂಡ್ ಹ್ಯಾಂಡ್ ಕಾರು ಮಾರಾಟಗಾರನಾಗಿದ್ದು, ಮಡಿವಾಳದಲ್ಲಿರುವ ಪಿಜಿ ಒಂದರಲ್ಲಿ ವಾಸಿಸುತ್ತಿದ್ದಾನೆ. ಸಂತ್ರಸ್ತೆ ಕೂಡ ಮಡಿವಾಳದ ಸಮೀಪದಲ್ಲೇ ವಾಸಿಸುತ್ತಿದ್ದಾಳೆ. ಒಂದು ತಿಂಗಳ ಹಿಂದೆ ಕೋರಮಂಗಲದ ಪಬ್‌ಗೆ ಭೇಟಿ ನೀಡಿದ್ದಾಗ, ಸಿಗರೇಟು ಹಚ್ಚಲು ಲೈಟರ್ ಕೇಳುವ ಸಲುವಾಗಿ ಆಕೆ ಸಮೀರ್‌ನನ್ನು ಸಂಪರ್ಕಿಸಿದ್ದಳು. ಈ ಅವಕಾಶವನ್ನು ಬಳಸಿಕೊಂಡು ಸಮೀರ್ ಆಕೆಯೊಂದಿಗೆ ಮಾತುಕತೆ ಆರಂಭಿಸಿದನು. ನಂತರ ಇಬ್ಬರ ನಡುವೆ ಪರಿಚಯ ಬೆಳೆದು, ಮೊಬೈಲ್ ಸಂಖ್ಯೆಗಳನ್ನು ವಿನಿಮಯ ಮಾಡಿಕೊಂಡರು ಮತ್ತು ಸಂಪರ್ಕದಲ್ಲಿದ್ದರು. ತದನಂತರ, ಸಮೀರ್ ಆ ಮಹಿಳೆಯನ್ನು ಮಡಿವಾಳದಲ್ಲಿರುವ ಹೋಟೆಲ್ ಒಂದಕ್ಕೆ ಆಹ್ವಾನಿಸಿದನು.

ಪಶ್ಚಿಮ ಏಷ್ಯಾದ 17 ದೇಶಗಳಿಗೆ ಹಬ್ಬಿದ ಕಾಲುಬಾಯಿ ರೋಗ


ಭಾರತದಲ್ಲಿ ಈ ರೋಗದ ಸಂಭಾವ್ಯ ಏಕಾಏಕಿ ಹರಡುವಿಕೆಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳುವುದು ಈ ಅಣಕು ಕಾರ್ಯಾಚರಣೆಯ ಮುಖ್ಯ ಉದ್ದೇಶವಾಗಿದೆ.

• ಉದಯವಾಹಿನಿ, ಬೆಂಗಳೂರು

1. 17 ದೇಶಗಳಿಗೆ ಹರಡಿರುವ ಹಿನ್ನೆಲೆಯಲ್ಲಿ
2. ಈವರೆಗೆ ಸೋಂಕು ವರದಿಯಾಗಿಲ್ಲ
3. ಗಂಭೀರ ಅಪಾಯ ಅವನ್ನುಂಟುಮಾಡಬಹುದುಅಪಾಯವನ್ನುಂಟುಮಾಡಬಹುದು

ಗಡಿಯಾಚೆ ಹರಡುವ ಹೊಸ ಪ್ರಾಣಿಜನ್ಯ ರೋಗಗಳ ವಿರುದ್ಧ ಸನ್ನದ್ಧತೆಯನ್ನು ಬಲಪಡಿಸುವ ಮಹತ್ವದ ಉಪಕ್ರಮವಾಗಿ, ಕೇಂದ್ರ ಸರ್ಕಾರದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ , ಬೆಂಗಳೂರಿನ–ರಾಷ್ಟ್ರೀಯ ಪಶುವೈದ್ಯಕೀಯ ಸಾಂಕ್ರಾಮಿಕ ರೋಗಶಾಸ್ತ್ರ ಮತ್ತು ರೋಗ ಮಾಹಿತಿ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ಎರಡು ದಿನಗಳ ರಾಷ್ಟ್ರೀಯ ಮಟ್ಟದ ಅಣಕು ಸಮಾಲೋಚನಾ ಅಭ್ಯಾಸ ವಜ್ರ–ಸ್ಯಾಟ್ ಚಾಲನೆ ನೀಡಿತು.

ಆಫ್ರಿಕಾ ಖಂಡಕ್ಕೆ ಸೀಮಿತವಾಗಿದ್ದ ಕಾಲುಬಾಯಿ ರೋಗದ ಸೀರೋಟೈಪ್ ಇತ್ತೀಚೆಗೆ ಪಶ್ಚಿಮ ಏಷ್ಯಾದ 17 ದೇಶಗಳಿಗೆ ಹರಡಿರುವ ಹಿನ್ನೆಲೆಯಲ್ಲಿ, ಭಾರತದಲ್ಲಿ ಈ ರೋಗದ ಸಂಭಾವ್ಯ ಏಕಾಏಕಿ ಹರಡುವಿಕೆಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳುವುದು ಈ ಅಣಕು ಕಾರ್ಯಾಚರಣೆಯ ಮುಖ್ಯ ಉದ್ದೇಶವಾಗಿದೆ. ದೇಶದಲ್ಲಿ ಈವರೆಗೆ ಸೋಂಕು ವರದಿಯಾಗಿಲ್ಲ. ಆದರೆ, ಈ ರೋಗ ದೇಶದೊಳಗೆ ಪ್ರವೇಶಿಸುವ ಸಾಧ್ಯತೆಯು 530 ದಶಲಕ್ಷಕ್ಕೂ ಅಧಿಕ ಜಾನುವಾರುಗಳಿರುವ ಪಶುಸಂಪತ್ತಿಗೆ, ಹೈನುಗಾರಿಕೆ ಆಧಾರಿತ ಜೀವನೋಪಾಯಕ್ಕೆ, ಜಾನುವಾರು ವ್ಯಾಪಾರಕ್ಕೆ ಹಾಗೂ ರಾಷ್ಟ್ರೀಯ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಸಾಧಿಸಿರುವ ಪ್ರಗತಿಗೆ ಗಂಭೀರ ಅಪಾಯವನ್ನುಂಟುಮಾಡಬಹುದು ಎಂದು ಮೂಲಗಳು ತಿಳಿಸಿವೆ.



ಉದಯವಾಹಿನಿ ಚಿತ್ರ

ಇದಲ್ಲದೆ, ದೇಶದಲ್ಲಿ ವಿರುದ್ಧ ಲಸಿಕೆ ಉತ್ಪಾದನೆಯ ಸೌಲಭ್ಯ ಇಲ್ಲದಿರುವುದು ಮುಂಚಿತವಾಗಿಯೇ ಸಿದ್ಧತೆ ಮಾಡಿಕೊಳ್ಳುವ ಅಗತ್ಯವನ್ನು ಮತ್ತಷ್ಟು ಒತ್ತಿಹೇಳುತ್ತದೆ ಎಂದು ಹೇಳಿವೆ. ಆರಂಭದಲ್ಲೇ ಪತ್ತೆಹಚ್ಚಿ, ತ್ವರಿತವಾಗಿ ದೃಢಪಡಿಸಿ, ಒಗ್ಗಟ್ಟಿನಿಂದ ನಿಯಂತ್ರಿಸಿ ಎಂಬ ಧ್ಯೇಯವಾಕ್ಯದಡಿ ಆಯೋಜಿಸಲಾದ ಈ ಅಣಕು ಕಾರ್ಯಾಚರಣೆಯಲ್ಲಿ ನೀತಿ ನಿರೂಪಕರು, ಪಶುವೈದ್ಯಕೀಯ ಸಾಂಕ್ರಾಮಿಕ ರೋಗಶಾಸ್ತ್ರಜ್ಞರು, ರೋಗ ನಿಯಂತ್ರಣ ತಜ್ಞರು, ರೋಗನಿರ್ಣಯ ಪ್ರಯೋಗಾಲಯಗಳು, ಭದ್ರತಾ ಸಂಸ್ಥೆಗಳು ಹಾಗೂ ಲಸಿಕೆ ತಯಾರಕರು ಪಾಲ್ಗೊಂಡಿದ್ದರು.

ವಿದೇಶಿ ಕಾಲುಬಾಯಿ ರೋಗಸೀರೋಟೈಪ್‌ಗಳು ದೇಶವನ್ನು ಪ್ರವೇಶಿಸುವ ಸಂಭಾವ್ಯ ಅಪಾಯವನ್ನು ಎದುರಿಸಲು ಸಮನ್ವಯದ, ಪ್ರಾಯೋಗಿಕ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದಾದ ರಾಷ್ಟ್ರೀಯ ಕಾರ್ಯತಂತ್ರದ ಅಗತ್ಯವನ್ನು ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯ ಪಶುಸಂಗೋಪನಾ ಆಯುಕ್ತೆ ಡಾ ನವೀನಾ ಬಿ ಎಂ ಹೇಳಿದರು. ದೇಶದ ಪಶುಸಂಗೋಪನಾ ವಲಯದ ರಕ್ಷಣೆಯಲ್ಲಿ ಪ್ರಾಣಿ ರೋಗಗಳ ಕುರಿತ ಪ್ರಸ್ತುತ ಬಿಕ್ಕಟ್ಟು ನಿರ್ವಹಣಾ ಯೋಜನೆಯ ಮಹತ್ವವನ್ನೂ ಅವರು ವಿವರಿಸಿದರು.

ಕಾಲುಬಾಯಿ ರೋಗ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಬದಲಾಗುತ್ತಿರುವ ಸಾಂಕ್ರಾಮಿಕ ರೋಗಶಾಸ್ತ್ರೀಯ ಪರಿಸ್ಥಿತಿ ಹಾಗೂ ಅಪಾಯ ಆಧಾರಿತ ಕಣ್ಗಾವಲು, ಸಾಂಕ್ರಾಮಿಕ ರೋಗಶಾಸ್ತ್ರೀಯ ಮಾಹಿತಿ ಮತ್ತು ಮುನ್ನೆಚ್ಚರಿಕೆ ವ್ಯವಸ್ಥೆಗಳ ಮಹತ್ವವನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ರಾಷ್ಟ್ರೀಯ ಪಶುವೈದ್ಯಕೀಯ ಸಾಂಕ್ರಾಮಿಕ ರೋಗಶಾಸ್ತ್ರ ಮತ್ತು ರೋಗ ಮಾಹಿತಿ ವಿಜ್ಞಾನ ಸಂಸ್ಥೆ ನಿರ್ದೇಶಕ ಡಾ. ಬಲದೇವ್ ಆರ್. ಗುಲಾಟಿ ವಿವರಿಸಿದರು.

ವಿದೇಶಿ ಕಾಲುಬಾಯಿರೋಗ ಸೀರೋಟೈಪ್‌ನಿಂದ ಎದುರಾಗಬಹುದಾದ ಸವಾಲುಗಳನ್ನು ನಿಭಾಯಿಸುವಲ್ಲಿ ಪ್ರಯೋಗಾಲಯಗಳ ಸನ್ನದ್ಧತೆ, ತ್ವರಿತ ರೋಗನಿರ್ಣಯ ಮತ್ತು ಲಸಿಕೆ ಅಭಿವೃದ್ಧಿ ಸಾಮರ್ಥ್ಯಗಳ ಮಹತ್ವವನ್ನು ಒತ್ತಿ ಹೇಳಿದರು. –ನಿರ್ದೇಶಕ ಡಾ. ಜೆ.ಕೆ. ಮೊಹಾಪಾತ್ರ

ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವುದು, ತ್ವರಿತವಾಗಿ ಪ್ರತಿಕ್ರಿಯಿಸುವುದು ಮತ್ತು ಸಮನ್ವಯದೊಂದಿಗೆ ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸಾಮರ್ಥ್ಯವನ್ನು ಬಲಪಡಿಸುವುದು ಇದರ ಉದ್ದೇಶವಾಗಿತ್ತು. –ರೋಗ ನಿಯಂತ್ರಣ ತಜ್ಞರು

ಫ್ರೀ ಕೊಟ್ಟು ವಸೂಲಿ ಮಾಡುತ್ತಿದೆ ಸರ್ಕಾರ: ಗೃಹಿಣಿ ಯಮುನ ಆಕ್ರೋಶ

• ಉದಯವಾಹಿನಿ, ಕನಕಪುರ

ಸರ್ಕಾರವು ಜನರಿಗೆ ಬೇಡವಾದುದನ್ನು ಕೊಟ್ಟು, ಬೇಕಾದದ್ದನ್ನು ಜನರಿಂದ ಕಿತ್ತುಕೊಳ್ಳುತ್ತಿದೆ. ಯಾರು ಸರ್ಕಾರವನ್ನು ಉಚಿತವಾಗಿ ಗ್ಯಾರಂಟಿ ಯೋಜನೆಗಳನ್ನು ಕೊಡಿ ಎಂದು ಕೇಳಿರಲಿಲ್ಲ. ಇವರಿಗೆ ಇವರೇ ಘೋಷಣೆ ಮಾಡಿಕೊಂಡು, ಈಗ ಅದರ ನೆಪದಲ್ಲಿ ಜನರಿಗೆ ಬೆಲೆ ಏರಿಕೆಯ ಬರೆ ಹಾಕುತ್ತಿದ್ದಾರೆ.

ಶಾಲಾ ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ವಯೋವೃದ್ಧರಿಗೆ ಮಾತ್ರ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸುವ ಅವಕಾಶ ನೀಡಬೇಕಿತ್ತು. ಉಚಿತ ಎಂಬ ಕಾರಣಕ್ಕೆ ಮನೆಯಲ್ಲಿರುವ ಹೆಂಗಸರೆಲ್ಲಾ ಅನವಶ್ಯಕವಾಗಿ


ಉದಯವಾಹಿನಿ ಚಿತ್ರ

ಬಸ್‌ನಲ್ಲಿ ಓಡಾಡುತ್ತಿದ್ದಾರೆ. ಹಣ ಕೊಟ್ಟು ಓಡಾಡುವ ಗಂಡಸರು ಕುಳಿತುಕೊಳ್ಳಲು ಜಾಗವಿಲ್ಲದೆ ಪರದಾಡುತ್ತಿದ್ದಾರೆ.

ಈಗ ದರ ಏರಿಕೆಯ ಹೊರೆಯನ್ನು ಗಂಡಸರ ಮೇಲೆ ಹಾಕುತ್ತಿರುವುದು ಖಂಡನೀಯ.

ಅಂಗಡಿಗಳಲ್ಲಿ ಒಂದು ಫ್ರೀ ಕೊಟ್ಟು, ಉಳಿದವುಗಳಲ್ಲಿ ಹೆಚ್ಚಿನ ಹಣ ವಸೂಲಿ ಮಾಡಿದಂತೆ ಸರ್ಕಾರ ಮಾಡುತ್ತಿದೆ.

ಕೂಡಿಗೆ ಕ್ರೀಡಾ ಶಾಲೆ ಮಕ್ಕಳು ರಾಷ್ಟ್ರ ಮಟ್ಟಕ್ಕೆ ಆಯ್ಕೆ

• ಉದಯವಾಹಿನಿ, ಮಡಿಕೇರಿ

ಬೆಂಗಳೂರಿನಲ್ಲಿ ರಾಜ್ಯ ಶಿಕ್ಷಣ ಇಲಾಖೆ ನಡೆಸಿದ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಕುಶಾಲನಗರ ಸಮೀಪದ ಸರ್ಕಾರಿ ಕೂಡಿಗೆ ಕ್ರೀಡಾ ಪ್ರೌಢಶಾಲೆಯ ಮಕ್ಕಳು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

17ರ ವಯೋಮಾನದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ 400ಮೀ ಹರ್ಡಲ್ಸ್‌ರನಲ್ಲಿ ಮನೋಜ್ ಕುಮಾರ್ ಚಿನ್ನದ ಪದಕ ಪಡೆದರು. 400ಮೀ ಓಟದಲ್ಲಿ ನವೀನ್ ಕುಮಾರ್ ದ್ವಿತೀಯ ಸ್ಥಾನ ಪಡೆದು ಬೆಳ್ಳಿ ಪದಕ ಪಡೆದರು.

ಬಾಲಕಿಯರ 800ಮೀ ಓಟದಲ್ಲಿ ಭಾಗ್ಯ, ಬಸಪ್ಪ ಜಾಡಿ ಚಿನ್ನದ ಪದಕ ಹಾಗೂ 1,500 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. 4-400ಮೀ ರಿಲೇಯಲ್ಲಿ ಕೂಡಿಗೆ ಕ್ರೀಡಾಶಾಲೆಯ ನವೀನ್ ಕುಮಾರ್, ಮನೋಜ್ ಕುಮಾರ್,



ಉದಯವಾಹಿನಿ ಚಿತ್ರ

ಮನೀಶ್, ಸುಹಾಸ್ ಅವರ ತಂಡ ದ್ವಿತೀಯ ಸ್ಥಾನ, ಬೆಳ್ಳಿಯ ಪದಕ ಪಡೆದರು. ಅದೇ ಶಾಲೆಯ ಬಾಲಕಿಯರಾದ ಬಿಮ್ಮಿತಾ, ಲಕ್ಕವ್ವ, ಭಾಗ್ಯ, ಚಿಂತನಾ ಅವರ ತಂಡ ಬೆಳ್ಳಿಯ ಪದಕ ಪಡೆಯಿತು.

ಕ್ರೀಡಾಪಟುಗಳು ಮಧ್ಯ ಪ್ರದೇಶದ ಶಿವಪುರಿಯಲ್ಲಿ ನಡೆಯಲಿರುವ ಶಾಲಾ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಕ್ರೀಡಾ ಶಾಲೆಯ ತರಬೇತುದಾರ ಎಂ.ಎನ್.ಪ್ರದೀಪ್ ಕುಮಾರ್ ತಿಳಿಸಿದ್ದಾರೆ

ದೀಪಾವಳಿ ಹಬ್ಬದ ಪ್ರಯುಕ್ತ ವಿಶೇಷ ರೈಲು ಸಂಚಾರ

ಈ ವಿಶೇಷ ಟಿಕೆಟ್ ತಪಾಸಣಾ ಅಭಿಯಾನವನ್ನು ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ವಾಣಿಜ್ಯ ಇಲಾಖೆಯು ಮೇಲ್ವಿಚಾರಣೆ ಮಾಡುತ್ತಿದೆ

• ಉದಯವಾಹಿನಿ, ಮೈಸೂರು

1 ರೈಲು ಸಂಖ್ಯೆ 06551 ಬೆಂಗಳೂರು
2 ರೈಲು ಸಂಖ್ಯೆ 06552 ಬೆಳಗಾವಿ
3 ನಿಗದಿತ ತಪಾಸಣಾ ತಂಡಗಳು

ಜಿಲ್ಲೆಯಲ್ಲಿ ಹೆಚ್ಚು ಜನ ಸಂಚಾರವಿರುವ 50 ಗ್ರಾಮಗಳನ್ನು ಗುರುತಿಸಿ, ವಿಬಿಜಿ ರಾಮ್ ಜಿ ಯೋಜನೆಯಡಿ ಸುಸಜ್ಜಿತ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ, ಸೂಚಿಸಿದರು.

ಮೈಸೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗೆ ತೆರಳುವ ಮಾರ್ಗದಲ್ಲಿ ಮಂಡ್ಯ ಜಿಲ್ಲೆಯ ಗಡಿಯಿಂದ ಮೈಸೂರು ಗಡಿಯವರೆಗೆ ಕಾರಿನಲ್ಲೇ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ಅವರೊಂದಿಗೆ ಚರ್ಚೆ ನಡೆಸಿದ ಸಚಿವರು.

ಜಿಲ್ಲೆಯ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಸೂಚನೆಗಳನ್ನು ನೀಡಿದರು.

ಮಹಿಳೆಯರಿಗೆ ಜೀವನೋಪಾಯ ಕಲ್ಪಿಸುತ್ತಿರುವ ಅಕ್ಕ ಕೆಫೆಗಳು ಲಾಭದಾಯಕವಾಗಿರುವುದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಇವುಗಳನ್ನು ಆರಂಭಿಸಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ನಿರ್ವಹಣೆ ಜವಾಬ್ದಾರಿ ನೀಡಬೇಕು ಎಂದು ಸೂಚಿಸಿದರು. ಗ್ರಾಮೀಣಾಭಿವೃದ್ಧಿ ಇಲಾಖೆಯ ಅನುದಾನ ಹಾಗೂ ತೆರಿಗೆ ರೂಪದಲ್ಲಿ ಸಂಗ್ರಹವಾಗುವ ಹಣ ಸೇರಿದಂತೆ ಎಲ್ಲಾ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ವಿಬಿಜಿ ರಾಮ್ ಜಿ ಯೋಜನೆಯಡಿ ಅವಕಾಶವಿರುವ 375 ಕಾಮಗಾರಿಗಳನ್ನು ಕೈಗೆತ್ತಿಕೊಂಡು ಗ್ರಾಮಗಳಲ್ಲಿ ಶಾಶ್ವತ ಹಾಗೂ ಉಪಯುಕ್ತ


ಉದಯವಾಹಿನಿ ಚಿತ್ರ

ಆಸ್ತಿಗಳನ್ನು ಸೃಷ್ಟಿಸಬೇಕು ಎಂದರು.

ನೀರಿನ ಸಮಸ್ಯೆ ಪರಿಹರಿಸಿ: ವಿಬಿಜಿ ರಾಮ್ ಜಿ ಯೋಜನೆಯಡಿ ಗ್ರಾಮಸಭೆ ನಡೆಸಿ ಅರ್ಹರಿಗೆ ದನದ ಕೊಟ್ಟಿಗೆ, ಕುರಿ- ಮೇಕೆ ಕೊಟ್ಟಿಗೆ, ಕೊಳವೆಬಾವಿ ಮರುಪೂರಣ ಗುಂಡಿ ಹಾಗೂ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಎಲ್‌ನೊ ಪ್ರಭಾವದಿಂದ ಮಳೆ ಕೊರತೆಯಾಗಿರುವ ಹಿನ್ನೆಲೆಯಲ್ಲಿ ಮುಂದಿನ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ ಜಲ ಬಜೆಟ್ ಸಿದ್ದಪಡಿಸಿ.

ಸಮಸ್ಯೆ ಎದುರಾಗಬಹುದಾದ ಗ್ರಾಮಗಳನ್ನು ಗುರುತಿಸಿ ಮುನ್ನೆಚ್ಚರಿಕೆ ವಹಿಸಬೇಕು. ಜಲಮೂಲಗಳನ್ನೂ ಗುರುತಿಸಬೇಕು ಎಂದರು. ಜಿಲ್ಲಾ ಪಂಚಾಯಿತಿ ಸಿಇಒ ವಾರದಲ್ಲಿ ಎರಡು ದಿನ ಕನಿಷ್ಠ ನಾಲ್ಕು ಗ್ರಾಮಗಳಿಗೆ ಭೇಟಿ ನೀಡಿ ರಸ್ತೆ, ನೀರು, ಬೀದಿದೀಪ, ಇ-ಸ್ವತ್ತು. ನಕ್ಷೆ ಮಂಜೂರಾತಿ, ನೈರ್ಮಲ್ಯ, ಕೆರೆ ಅಭಿವೃದ್ಧಿ ಹಾಗೂ ಯೋಜನೆಗಳ ಪ್ರಗತಿ ಕುರಿತು ಸಾರ್ವಜನಿಕರ ಅಹವಾಲು ಆಲಿಸಿ ಸ್ಥಳದಲ್ಲೇ ಪರಿಹಾರ ಕಲ್ಪಿಸಬೇಕು. ಯೋಜನೆಯಡಿ ಕೆಲಸ ಮಾಡಿದ ಅಕುಶಲ ಕಾರ್ಮಿಕರಿಗೆ 15 ದಿನಗಳೊಳಗೆ ಕೂಲಿ ಪಾವತಿಯಾಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.


ಈ ವಿಶೇಷ ಟಿಕೆಟ್ ತಪಾಸಣಾ ಅಭಿಯಾನವನ್ನು ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ವಾಣಿಜ್ಯ ಇಲಾಖೆಯು ಮೇಲ್ವಿಚಾರಣೆ ಮಾಡುತ್ತಿದೆ. ಪ್ರಯಾಣಿಕರು ಪ್ರಯಾಣ ಆರಂಭಿಸುವ ಮೊದಲು ಮಾನ್ಯ ಟಿಕೆಟ್ಗಳನ್ನು ಖರೀದಿಸಿ, ಸೂಕ್ತ ಪ್ರಯಾಣದ ದಾಖಲೆಗಳೊಂದಿಗೆ ಪ್ರಯಾಣಿಸಬೇಕು.
-ಪಿಆರ್‌ಒ ಗಿರೀಶ್ ಧರ್ಮರಾಜ

ವಿಶೇಷ ಟಿಕೆಟ್ ತಪಾಸಣಾ

ಮೈಸೂರುವಿಶೇಷ ಟಿಕೆಟ್ ತಪಾಸಣಾ ಅಭಿಯಾನ-2.32 ಲಕ್ಷ ರೂ., ದಂಡ ಸಂಗ್ರಹ ನ.1ರಿಂದ 5ರವರೆಗೆ ನಡೆದ ವಿಶೇಷ ಟಿಕೆಟ್ ತಪಾಸಣಾ ಅಭಿಯಾನದಲ್ಲಿ ದಂಡದ ರೂಪದಲ್ಲಿ 2.32 ಲಕ್ಷ ರೂ.ವನ್ನು ಮೈಸೂರು ರೈಲ್ವೆ ವಿಭಾಗವು ಸಂಗ್ರಹಿಸಿದೆ.

ಸ್ಥಳೀಯ ಸಂಸ್ಥೆ ಚುನಾವಣೆ: ರೈತಸಂಘ ಸ್ಪರ್ಧೆ

• ಉದಯವಾಹಿನಿ, ಹುಣಸೂರು


ಉದಯವಾಹಿನಿ ಚಿತ್ರ

ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಮೂಲಕ ರೈತ ಸಂಘ ರಾಜಕೀಯ ಪಕ್ಷಗಳಿಗೆ ಪರ್ಯಾಯವಾಗಿ ಹೊರಹೊಮ್ಮಬೇಕು ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಹೊಸೂರು ಕುಮಾರ್ ಕರೆ ನೀಡಿದರು.

ನಗರದ ಎಪಿಎಂಸಿ ಆವರಣದಲ್ಲಿ ನಡೆದ ರೈತ ಸಂಘದ ಸಭೆಯಲ್ಲಿ ಮಾತನಾಡಿ, ರೈತ ಸಂಘ ಅನ್ನದಾತರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹೋರಾಟ ನಡೆಸುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಬಹುತೇಕ ರೈತ ಕುಟುಂಬದ ಮತದಾರರಿದ್ದು ರೈತ ಸಂಘ ಸ್ಥಳೀಯ ಆಡಳಿತವಾದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಗ್ರಾಮ ಪಂಚಾಯಿತಿಗಳಿಗೆ ಜನವರಿ ತಿಂಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಬೇಕು. ಇದಕ್ಕಾಗಿ ಎಲ್ಲಾ ರೈತರು ಒಗ್ಗೂಡಬೇಕು ಎಂದರು.

ಇ- ಹರಾಜು: ಸಾಲದ ಕಂತು ಪಾವತಿಸಿಲ್ಲ ಎಂಬ ಕಾರಣಕ್ಕೆ ರೈತನ ಭೂಮಿ ಹರಾಜು ಹಾಕಿರುವ ಘಟನೆ ತುಮಕೂರಿನಲ್ಲಿ ನಡೆದಿದ್ದು, ಇದು ಅನ್ನದಾತರ ಆಕ್ರೋಶಕ್ಕೆ ಕಾರಣವಾಗಿದೆ. ಬರದಲ್ಲಿ ಬ್ಯಾಂಕ್ ಸಾಲ ಮರುಪಾವತಿಸಲು ಸಾಧ್ಯವಾಗದ ರೈತನ 4 ಕೋಟಿ ಬೆಲೆ ಬಾಳುವ ಜಮೀನನ್ನು ಬ್ಯಾಂಕ್ ಇ ಹರಾಜು ಪ್ರಕ್ರಿಯೆಯಲ್ಲಿ ಕೇವಲ 34 ಲಕ್ಷಕ್ಕೆ ಮಾರಾಟ ಮಾಡಿದೆ. ಇದನ್ನು ರೈತ ಸಂಘ ತೀವ್ರವಾಗಿ ಖಂಡಿಸಿ ಪ್ರತಿಭಟಿಸಿದ ಕಾರಣ ರೈತನ ಭೂಮಿಯನ್ನು ಬ್ಯಾಂಕ್ ಹಿಂದಿರುಗಿಸಿದೆ ಎಂದರು.

ಮೈಸೂರು ಭಾಗದಲ್ಲಿ ಬ್ಯಾಂಕ್ ಇ ಹರಾಜು ಪ್ರಕ್ರಿಯೆಗೆ ಮುಂದಾದಲ್ಲಿ ರೈತರು ಆತಂಕ ಪಡದೆ ರೈತ ಸಂಘದ ಗಮನಕ್ಕೆ ತಂದು ಹೋರಾಟ ನಡೆಸಿ ಪ್ರಕ್ರಿಯೆ ತಡೆಯಲು ಒಗ್ಗಟ್ಟು ಪ್ರದರ್ಶಿಸುವ ಕೆಲಸ ಮಾಡಬೇಕಾಗಿದೆ ಎಂದು ಕರೆ ನೀಡಿದರು.

ನೈತಿಕ ಬೆಂಬಲ

ರಾಜ್ಯದಲ್ಲಿ ಕಬ್ಬು ಬೆಳೆಗಾರರು ಹೋರಾಟ ನಡೆಸುತ್ತಿದ್ದು ಅವರಿಗೆ ಬೆಂಬಲವಾಗಿ ಮೈಸೂರು ಭಾಗದ ರೈತ ಸಂಘಟನೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಹೋರಾಟದಲ್ಲಿ ಭಾಗವಹಿಸಿ ನೈತಿಕ ಬೆಂಬಲ ನೀಡಬೇಕಾಗಿದೆ. ರೈತ ಸಂಘದ ಸದಸ್ಯರು ಭಾಗವಹಿಸಿ ಎಂದರು.

ಶಾಸಕ ಅಸಮಾಧಾನ, 20 ಕೋಟಿ ರೂ. ವೆಚ್ಚದ ಯೋಜನೆ

• ಉದಯವಾಹಿನಿ, ಕುಶಾಲನಗರ

ತಾಲ್ಲೂಕಿನ ಕೂಡುಮಂಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವನತ್ತೂರು ಗ್ರಾಮದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ವತಿಯಿಂದ ಕೈಗೊಂಡಿರುವ 20 ಕೋಟಿ ವೆಚ್ಚದ 66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನು ಶಾಸಕ ಡಾ.ಮಂತರ್ ಗೌಡ ಪರಿಶೀಲನೆ ನಡೆಸಿದರು.

ವಿದ್ಯುತ್ ವಿತರಣಾ ಉಪ ಕೇಂದ್ರದ ಕಾಮಗಾರಿ ವಿಳಂಬವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಮುಂದಿನ 2027ನೇ ಸೆಪ್ಟೆಂಬರ್ ಒಳಗೆ ಕಾಮಗಾರಿ ಪೂರ್ಣಗೊಳಿಸಬೇಕು.

ಗುಣಮಟ್ಟದ ಕಾಮಗಾರಿಗೆ ಪ್ರಥಮ ಆದ್ಯತೆ ನೀಡಬೇಕು ಎಂದು ಗುತ್ತಿಗೆದಾರಿಗೆ ಸೂಚನೆ ನೀಡಿದರು.

ಶಾಸಕರಿಗೆ ಕೆಪಿಟಿಸಿಎಲ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಾಗೇಶ್ ಅವರು


ಉದಯವಾಹಿನಿ ಚಿತ್ರ

ವಿದ್ಯುತ್ ಪೂರೈಕೆ

ಕೊಡ್ಲಿಪೇಟೆ, ಮೂರ್ನಾಡು, ಮರಗೋಡು ಭಾಗದಲ್ಲೂ 66 ಕೆ.ವಿ ಕೇಂದ್ರ ನಿರ್ಮಿಸಲು ಉದ್ದೇಶಿಸಲಾಗಿದ್ದು, ಇದರಿಂದ ಇಡೀ ಜಿಲ್ಲೆಗೆ

ಕಾಮಗಾರಿಯ ಮಾಹಿತಿ ನೀಡಿ ತಾಂತ್ರಿಕ ಕಾರಣ ಹಾಗೂ ಕಾಮಗಾರಿ ಸ್ಥಳದಲ್ಲಿ ಬಂಡೆಕಲ್ಲುಗಳು ಇರುವ ಕಾರಣ ಕಾಮಗಾರಿ ಸ್ವಲ್ಪ ವಿಳಂಬವಾಗಿದೆ. ಕಾಮಗಾರಿ ವಿಳಂಬವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದಮುಂದಿನ ದಿನಗಳಲ್ಲಿ ಕಾಮಗಾರಿ ಚುರುಕುಗೊಳಿಸಲಾಗುತ್ತದೆ ಎಂದು ತಿಳಿಸಿದರು.

100 ಕೋಟಿ ವೆಚ್ಚದಲ್ಲಿ ಆಧುನೀಕರಣ: ವಿರಾಜಪೇಟೆ ಮತ್ತು ಮಡಿಕೇರಿ ತಾಲ್ಲೂಕಿನಲ್ಲಿ ಕೆಪಿಟಿಸಿಎಲ್ ವತಿಯಿಂದ ತಲಾ 100 ಕೋಟಿ ವೆಚ್ಚದಲ್ಲಿ ಆಧುನೀಕರಣ ಕಾಮಗಾರಿ ನಡೆಯುತ್ತಿದೆ ಎಂದು ಶಾಸಕ ಮಂತರ್ ಗೌಡ ಹೇಳಿದರು. ಕೊಡಗಿನ ಕೈಗಾರಿಕಾ ಪ್ರದೇಶ ಕೂಡೂರಿನಲ್ಲಿ ಹೆಚ್ಚಿನ ಕೈಗಾರಿಕೆಗಳಿದ್ದು, ಅತಿ ಹೆಚ್ಚು ವಿದ್ಯುತ್ ಬಳಕೆಯಾಗುತ್ತಿದೆ. ಜೊತೆಗೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡುವುದು ನಮ್ಮ ಗುರಿಯಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಸೆಸ್ಕ್ ಮತ್ತು ಕೆಪಿಟಿಸಿಎಲ್‌ಗೆ ಸಾಕಷ್ಟು ಅನುದಾನ ನೀಡಿದ್ದಾರೆ.

ಕಾವೇರಿ ವನ್ಯಧಾಮದಲ್ಲಿ ಮೂವರ ಶೂಟೌಟ್ ಕೇಸ್ ತನಿಖೆ ವಿಳಂಬವಿಲ್ಲ

• ಉದಯವಾಹಿನಿ, ಚಾಮರಾಜನಗರ

ಕಾವೇರಿ ವನ್ಯಧಾಮದಲ್ಲಿ ಮೂವರ ಶೂಟೌಟ್ ಪ್ರಕರಣ ತನಿಖೆ ವಿಳಂಬವಿಲ್ಲ. ಮಧ್ಯ ಪ್ರವೇಶ ಮಾಡಲ್ಲ ಎಂದು ಅರಣ್ಯ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಹನೂರು ತಾಲ್ಲೂಕಿನ ಕಾವೇರಿ ಅರಣ್ಯ ಪ್ರದೇಶದಲ್ಲಿ ನಡೆದ ಮೂವರು ಬೇಟೆಗಾರರ ಶೂಟೌಟ್ ಪ್ರಕರಣ ಸಂಬಂಧ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, ಸಿಐಡಿ ತನಿಖೆ ನಡೆಯುತ್ತಿದೆ. ನಾವು ಅದರಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ. ತನಿಖೆಯಲ್ಲಿ ಯಾವುದೇ ವಿಳಂಬವಾಗುತ್ತಿಲ್ಲ ಎಂದರು. ಧ್ವಂಸಗೊಂಡಿರುವ


ಉದಯವಾಹಿನಿ ಚಿತ್ರ

ಕಳ್ಳಬೇಟೆ ತಡೆ ಶಿಬಿರ, ಅರಣ್ಯ ವಸತಿ ಗೃಹಗಳ ದುರಸ್ತಿಗೆ ಕ್ರಮ ವಹಿಸಲಾಗಿದೆ. ಆದ್ದರಿಂದ ಅರಣ್ಯ ಸಿಬ್ಬಂದಿ ಭಯಪಡುವ ಅಗತ್ಯ ಇಲ್ಲ. ಧೈರ್ಯವಾಗಿ ಕರ್ತವ್ಯ ನಿರ್ವಹಿಸಬಹುದು ಎಂದು ಭರವಸೆ ನೀಡದರು.

ಕಣಿಯನಪುರ ಕಾರಿಡಾರ್ ವ್ಯಾಪ್ತಿಯಲ್ಲಿ ಖಾಸಗಿ ಜಮೀನುಗಳಿದ್ದರೆ ಸ್ವಾಧೀನಪಡಿಸಿಕೊಳ್ಳಲು ಕ್ರಮವಹಿಸಲಾಗಿದೆ. ಇನ್ನೂ ಕ್ರಮವಾಗಿ ಬಂದೂಕನ್ನು ಯಾರೂ ಇಟ್ಟುಕೊಳ್ಳುವಂತಿಲ್ಲ. ಪರವಾನಗಿ ಇಲ್ಲದಿದ್ದಲ್ಲಿ ಸರ್ಕಾರಕ್ಕೆ ಒಪ್ಪಿಸಬೇಕು. ಇಲ್ಲದಿದ್ದಲ್ಲಿ ಅಂತಹವರ ಮೇಲೆ ಕ್ರಮವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ: ಬಿ.ವೈ.ವಿಜಯೇಂದ್ರ

• ಉದಯವಾಹಿನಿ, ಮೈಸೂರು

ಕೆಲವರಿಗೆ ಹೇಗಾದರೂ ಮಾಡಿ ಒಂದು ಬಾರಿಯಾದರೂ ಪ್ರಧಾನಿ ಆಗುವ ಕನಸಿದೆ. ರಾಹುಲ್ ಗಾಂಧಿಗೆ ಮದುವೆಯೂ ಆಗಿಲ್ಲ, ಹುಚ್ಚು ಬಿಡುತ್ತಿಲ್ಲ. ಪ್ರಧಾನಿ ಆಗುವುದಂತೂ ಸಾಧ್ಯವೇ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು. ಶುಕ್ರವಾರ ನಡೆದ ಪ್ರಜಾಪ್ರಭುತ್ವ ಉಳಿಸಿ ಅರಾಜಕತೆ ಅಳಿಸಿ - ಪಾದಯಾತ್ರೆ ಸಂದರ್ಭದಲ್ಲಿ ಅವರು ಮಾತನಾಡಿದರು.


ಉದಯವಾಹಿನಿ ಚಿತ್ರ

ಪಾದಯಾತ್ರೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಉದ್ಘಾಟಿಸಲಾಯಿತು. ಕೇಂದ್ರದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ. ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ದೊಡ್ಡ ಶಕ್ತಿಯಾಗಿ ಪರಿವರ್ತನೆ ಹೊಂದಿದೆ.

ಇದನ್ನು ಸಹಿಸಿಕೊಳ್ಳಲು ರಾಹುಲ್ ಗಾಂಧಿಯವರಿಗೆ ಆಗುತ್ತಿಲ್ಲ ಎಂದು ವಿಜಯೇಂದ್ರ ದೂರಿದರು. ರಾಹುಲ್ ಗಾಂಧಿ ಅನಿವಾಸಿ ವಿರೋಧ ಪಕ್ಷದ ನಾಯಕ. ಇವರ ಮೂಲಕ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಎನ್‌ಡಿಎ ಸರ್ಕಾರವನ್ನು ಹೇಗಾದರೂ ಮಾಡಿ ಕೆಳಗಿಳಿಸಬೇಕು ಎನ್ನುವುದು ಇವರ ಉದ್ದೇಶ'' ಎಂದು ಕಿಡಿಕಾರಿದರು. ಮೋದಿಯವರು 4ನೇ ಬಾರಿಗೆ ಪ್ರಧಾನಿ ಆಗುವ ಆತಂಕ ಕಾಂಗ್ರೆಸ್‌ನವರದ್ದು. ಇದಕ್ಕಾಗಿ ದೆಹಲಿ ಸೇರಿದಂತೆ ದೇಶದ ಮತ್ತಿತರ ಕಡೆ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಮೂಲಕ ಅರಾಜಕತೆ ಸೃಷ್ಟಿಗೆ ಮುಂದಾಗಿದ್ದಾರೆ.

ಮಲೆ ಮಹದೇಶ್ವರ ಬೆಟ್ಟದಲ್ಲಿ ಇಂದಿನಿಂದ ದೀಪಾವಳಿ ಜಾತ್ರೆ

ಸಹಸ್ರಾರು ಭಕ್ತರು ಭಾಗಿ - 3 ಲಕ್ಷ ಲಾಡು ತಯಾರಿ ವಿಶೇಷ ಪೂಜೆ ಮೂಲಕ ಇಂದಿನಿಂದ ಪ್ರಾರಂಭ

• ಉದಯವಾಹಿನಿ, ಚಾಮರಾಜನಗರ

1 ದೀಪಾವಳಿ ಜಾತ್ರೆಯು ವಿಶೇಷ ಪೂಜೆ
2 ಬ್ರಹ್ಮೋತ್ಸವ ಮತ್ತು ಅನ್ನ ಬ್ರಹ್ಮೋತ್ಸವ, ರಾತ್ರಿ ಮಹಾ ನೈವೇದ್ಯದ ನಂತರ ತೆಪ್ಪೋತ್ಸವ
3 ಶ್ರೀ ಮಲೆ ಮಹದೇಶ್ವರ ಬೆಟ್ಟ ಕ್ಷೇತ್ರ, ಅಭಿವೃದ್ಧಿ ಪ್ರಾಧಿಕಾರವು ಮಾಹಿತಿ

ನಾಡಿನ ಪ್ರಸಿದ್ಧ ಯಾತ್ರಾಸ್ಥಳ ಹನೂರು ತಾಲಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಇಂದಿನಿಂದ ದೀಪಾವಳಿ ಜಾತ್ರಾ ಮಹೋತ್ಸವ ಆರಂಭಗೊಂಡಿದ್ದು, ದೇವಾಲಯದಲ್ಲಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ದೀಪಾವಳಿ ಜಾತ್ರೆಯು ವಿಶೇಷ ಪೂಜೆ ಮೂಲಕ ಪ್ರಾರಂಭಗೊಂಡಿದ್ದು, ನವೆಂಬರ್ 7ರಂದು ಶ್ರೀ ಸ್ವಾಮಿಗೆ ಎಣ್ಣೆ ಮಜ್ಜನ ಪೂಜೆ ಮತ್ತು ಉತ್ಸವ, ನವೆಂಬರ್ 8ರಂದು ನರಕ ಚತುರ್ದಶಿ ವಿಶೇಷ ಸೇವೆ ಮತ್ತು ಉತ್ಸವ, ನ.9ರಂದು ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಹಾಲರುವೆ ಉತ್ಸವ ಹಾಗೂ ನ.10ರಂದು ದೀಪಾವಳಿ ಮಹಾರಥೋತ್ಸವ ಬೆಳಗ್ಗೆ 7.30ರಿಂದ 8.40ರವರೆಗೆ ಜರುಗಲಿದೆ. ಮಹಾರಥೋತ್ಸವದ ನಂತರ ಗುರು ಬ್ರಹ್ಮೋತ್ಸವ ಮತ್ತು ಅನ್ನ ಬ್ರಹ್ಮೋತ್ಸವ, ರಾತ್ರಿ ಮಹಾ ನೈವೇದ್ಯದ ನಂತರ ತೆಪ್ಪೋತ್ಸವ ಜರುಗಲಿದೆ. ಪ್ರತಿನಿತ್ಯ ಬೆಳಗ್ಗೆ 6.30 ಗಂಟೆಯಿಂದ ಸಂಜೆ 6.30ರವರೆಗೆ, ರಾತ್ರಿ 8.30


ಉದಯವಾಹಿನಿ ಚಿತ್ರ

ಗಂಟೆಯಿಂದ ಬೀಗಮುದ್ರೆ ಹಾಕುವವರೆಗೂ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಶ್ರೀ ಮಲೆ ಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಮಾಹಿತಿ ನೀಡಿದೆ.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಪಾದಯಾತ್ರೆಯ ಮೂಲಕ ಆಗಮಿಸುವ ಭಕ್ತರಿಗೆ ತಾಳಬೆಟ್ಟದಿಂದ ಮಲೆಮಹದೇಶ್ವರ ಬೆಟ್ಟದವರೆಗಿನ ಮಾರ್ಗಮಧ್ಯದಲ್ಲಿ 15 ಕಡೆಗಳಲ್ಲಿ ಮಿನಿ ಟ್ಯಾಂಕ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಪಾದಯಾತ್ರೆಯ ಮೂಲಕ ಬೆಟ್ಟಕ್ಕೆ ತೆರಳುವ ಭಕ್ತರಿಹೆ, 60 ವರ್ಷ ಮೇಲ್ಪಟ್ಟವರಿಗೆ ರಾಜಗೋಪುರದ ಪ್ರವೇಶ ದ್ವಾರದಲ್ಲಿ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅತಿಥಿ ಗಣ್ಯರಿಗೆ, ಜನಪ್ರತಿನಿಧಿಗಳಿಂದ ಶಿಫಾರಸು ಪತ್ರ ಪಡೆದು ಬರುವವರಿಗೆ ದೇವಸ್ಥಾನದ ಕಾರ್ಯಾಲಯದಲ್ಲಿ ವಿಶೇಷ ಪಾಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಪಾಸ್ ಪಡೆದವರಿಗೆ ಅತಿಥಿ ಗಣ್ಯರ ಗೇಟ್ ಮೂಲಕ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಗೇಟ್ ನಂ.4ರಲ್ಲಿ ಅಂಗವಿಕಲರು, ಗರ್ಭಿಣಿಯರು ತೆರಳಿ ದರ್ಶನ ಪಡೆಯಬಹುದು ಎಂದು ಪ್ರಾಧಿಕಾರದ ಕಾರ್ಯದರ್ಶಿ ಪುರುಷೋತ್ತಮ್ ತಿಳಿಸಿದ್ದಾರೆ. ಐದು ದಿನಗಳ ಕಾಲ ನಡೆಯಲಿರುವ ಜಾತ್ರಾ ಮಹೋತ್ಸವಕ್ಕೆ ರಾಜ್ಯ ಹಾಗೂ ನೆರೆಯ ತಮಿಳುನಾಡು ರಾಜ್ಯದಿಂದ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಐದು ದಿನಗಳ ಕಾಲ ನಿರಂತರ ದಾಸೋಹ ವ್ಯವಸ್ಥೆ ಆರಂಭಗೊಂಡಿದೆ. ಭವನದ ಸಮೀಪವೇ ವಿಶೇಷ ದಾಸೋಹ ವ್ಯವಸ್ಥೆ ಕಲ್ಪಿಸಲಾಗಿದ್ದು, ಒಂದು ಬಾರಿಗೆ 2 ಸಾವಿರ ಜನರು ಪ್ರಸಾದ ಸ್ವೀಕರಿಸಬಹುದಾಗಿದೆ.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಐದು ದಿನಗಳ ಕಾಲ ನಡೆಯಲಿರುವ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಕೆಎಸ್‌ಆರ್‌ಟಿಸಿ ವತಿಯಿಂದ ಚಾಮರಾಜನಗರ, ಮೈಸೂರು ನಗರ, ಮೈಸೂರು ಗ್ರಾಮಾಂತರ, ಮಂಡ್ಯ, ಬೆಂಗಳೂರು, ರಾಮನಗರ ಘಟಕಗಳಿಂದ 350 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ವಾಹನಗಳು ಕೆಟ್ಟು ನಿಂತರೆ ದುರಸ್ತಿಪಡಿಸಲು 20 ಮಂದಿ ತಾಂತ್ರಿಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಚಾಮರಾಜನಗರ ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜು ತಿಳಿಸಿದ್ದಾರೆ.

ದ್ವಿಚಕ್ರ ವಾಹನಕ್ಕೆ ನಿರ್ಬಂಧ


ದೀಪಾವಳಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಟ್ರಾಫಿಕ್ ಜಾಮ್ ತಡೆಗಟ್ಟಲು ನ.6ರ ಬೆಳಗ್ಗೆ 6 ಗಂಟೆಯಿಂದ ನ.10ರ ಸಂಜೆ 6 ಗಂಟೆಯವರೆಗೆ ಬೆಟ್ಟಕ್ಕೆ ದ್ವಿಚಕ್ರ ವಾಹನದಲ್ಲಿ ಹೋಗುವುದನ್ನು ನಿರ್ಬಂಧಿಸಲಾಗಿದೆ. ದ್ವಿಚಕ್ರ ವಾಹನಗಳಲ್ಲಿ ಬರುವ ಭಕ್ತರಿಗೆ ಕೌದಳ್ಳಿಯಲ್ಲಿ ತಾತ್ಕಾಲಿಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಇಲ್ಲಿಂದ ಕೆಎಸ್‌ಆರ್‌ಟಿಸಿ ಬಸ್ ಮುಖಾಂತರ ಬೆಟ್ಟಕ್ಕೆ ತೆರಳಬಹುದು.

3 ಲಕ್ಷ ಲಾಡು ಸಂಗ್ರಹಣೆ

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ಚಿನ್ನದ ರಥೋತ್ಸವ, ಬೆಳ್ಳಿ ರಥೋತ್ಸವ, ಬಸವ ವಾಹನ, ಹುಲಿ ವಾಹನ, ರುದ್ರಾಕ್ಷಿ ಮಂಟಪ ಸೇರಿದಂತೆ ವಿವಿಧ ಸೇವೆಗಳಲ್ಲಿ ಪಾಲ್ಗೊಳ್ಳುವ ಭಕ್ತರಿಗೆ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಲಾಡು ಪ್ರಸಾದ ವಿತರಣೆ ಮಾಡಲಾಗುತ್ತದೆ.

ಮಿನಿ ನ್ಯೂಸ್

ಆದಿವಾಸಿ ನಿಗಮಕ್ಕೆ ಅನ್ಯರ ಸೇರ್ಪಡೆ ಬೇಡ'


ಉದಯವಾಹಿನಿ ಚಿತ್ರ

• ಉದಯವಾಹಿನಿ, ಹುಣಸೂರು

ರಾಜ್ಯದಲ್ಲಿ ಆದಿವಾಸಿ ನಿಗಮ ಮಂಡಳಿ ಸ್ಥಾಪಿಸಿ ಅದನ್ನು 12 ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸೀಮಿತಗೊಳಿಸಿದ್ದ ರಾಜ್ಯ ಸರ್ಕಾರ, ಈ ಮಂಡಳಿಗೆ ಇತರೆ ಸಮುದಾಯ ಸೇರಿಸುವ ಕಸರತ್ತು ನಡೆಸಿದೆ ಎಂದು ಆರೋಪಿಸಿ ಆದಿವಾಸಿ ಜನತಾ ಪಾರ್ಲಿಮೆಂಟ್ ಅಧ್ಯಕ್ಷ ಹರ್ಷ ನೇತೃತ್ವದಲ್ಲಿ ಪರಿಶಿಷ್ಟ ವರ್ಗಗಳ ಇಲಾಖೆ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರ ಆದಿವಾಸಿ ನಿಗಮ ಮಂಡಳಿ ಸ್ಥಾಪಿಸುವ ವೇಳೆ ಮಂಡಳಿ ಸಂಪೂರ್ಣ ಆದಿವಾಸಿ ಬುಡಕಟ್ಟು ಸಮುದಾಯದ ಅಭಿವೃದ್ಧಿಗೆ ಮೀಸಲಿದ್ದು, ಈ ಮಂಡಳಿ ಮೂಲಕ ಕೈಗೊಳ್ಳುವ ಕಾರ್ಯಕ್ರಮಗಳಿಗೆ ಅನುದಾನ ನೀಡುವ ಬಗ್ಗೆ ಪ್ರಸ್ತಾಪಿಸಿದ್ದರು.

ಈಗ ಏಕಾಏಕಿ ಸರ್ಕಾರ ಆದಿವಾಸಿ ನಿಗಮ ಮಂಡಳಿಗೆ ಕೆ.ಎಂ.ಮೇತ್ರಿ ಎಂಬುವರು ಗೊಂಡ ಮತ್ತು ರಾಜಗೊಂಡ ಎಂಬ ಎರಡು ಸಮುದಾಯವನ್ನು ಹೊಸದಾಗಿ ಸೇರ್ಪಡೆ ಮಾಡುವ ಬಗ್ಗೆ ಪ್ರಸ್ತಾಪಿಸಿದ್ದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಆದಿವಾಸಿಗಳಿಗೆ ಒಳಮೀಸಲಾತಿ ಕಲ್ಪಿಸಿ ರಾಜಕೀಯ ಶಕ್ತಿ ನೀಡಬೇಕು ಎಂಬ ಹೋರಾಟ ದಶಕದಿಂದ ನಡೆದಿದ್ದು ಈಗಲಾದರೂ ಗಿರಿಜನರಿಗೆ ಪ್ರತ್ಯೇಕ ನಿಗಮ ಮಂಡಳಿ ಆರಂಭಿಸಿ ಗಿರಿಜನರ ಅಭಿವೃದ್ಧಿಗೆ ಒತ್ತು ನೀಡಲು ಸರ್ಕಾರ ಮುಂದಾಗಿದೆ.

ಸುಂಟಿಕೊಪ್ಪ: ಭತ್ತದ ತೆನೆ ಕುಂಠಿತ, ರೈತ ಆತಂಕ


ಉದಯವಾಹಿನಿ ಚಿತ್ರ


• ಉದಯವಾಹಿನಿ, ಸುಂಟಿಕೊಪ್ಪ

ಪ್ರಗತಿಪರ ಕೃಷಿಕ ಪಟ್ಟೆಮನೆ ಉದಯಕುಮಾರ್ ನಾಟಿ ಮಾಡಿದ್ದ ಭತ್ತ ತೆನೆ ಬಿಡುವ ಹಂತದಲ್ಲಿ ಕುಂಠಿತಗೊಂಡಿದೆ. ಒಟ್ಟು ಇಳುವರಿಯ ಪೈಕಿ ಶೇ 5ರಿಂದ 10ರಷ್ಟು ಮಾತ್ರವೇ ಕೈ ಸೇರುವ ನಿರೀಕ್ಷೆ ಇದೆ ಎಂದು ಅವರು ಹೇಳುತ್ತಾರೆ. ಈ ವರ್ಷ ಸುಂಟಿಕೊಪ್ಪ ರೈತ ಸಂಪರ್ಕದಿಂದ ಆರ್ ಎನ್ ಆರ್ ಭತ್ತದ ತಳಿಯನ್ನು ತಂದು ನಾಟಿ ಮಾಡಿರುವ ಅವರಿಗೆ ಪೈರು ಬಾರದೇ ಇರಲು ಕಾರಣ ಏನು? ಎಂಬ ಯಕ್ಷ ಪ್ರಶ್ನೆಯಾಗಿದೆ. ಈ ಬಗ್ಗೆ ಅವರು ಕೃಷಿ ಇಲಾಖೆಯ ಅಧಿಕಾರಿಯನ್ನು ಸಂಪರ್ಕಿಸಿದ್ದು, ತಮ್ಮ ಭತ್ತದ ಗದ್ದೆಗೆ ಭೇಟಿ ನೀಡಿ ಬೆಳೆಯ ಸ್ಥಿತಿಗತಿಗಳ ಬಗ್ಗೆ ಅವಲೋಕಿಸಿ ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ. ಜೊತೆಗೆ, ಭತ್ತ ಈ ರೀತಿಯಾಗಲೂ ಕಾರಣ ಏನು? ಎಂಬುದರ ಬಗ್ಗೆ ಕೂಡ ಸೂಕ್ತ ಮಾಹಿತಿ ಒದಗಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಈ ಕುರಿತು ಕೃಷಿ ಇಲಾಖೆಯ ತಾಲ್ಲೂಕು ಉಪನಿರ್ದೇಶಕ ವೀರಣ್ಣ ಅವರನ್ನು ಸಂಪರ್ಕಿಸಿದಾಗ ಅವರು, ಇದೇ ರೈತ ಸಂಪರ್ಕ ಕೇಂದ್ರದಿಂದ ಸುಮಾರು 30ರಿಂದ 40 ಮಂದಿಗೆ ಭತ್ತದ ಬೀಜಗಳನ್ನು ವಿತರಿಸಲಾಗಿತ್ತು. ಆದರೆ, ಉದಯಕುಮಾರ್ ಅವರ ಗದ್ದೆಯಲ್ಲಿ ಮಾತ್ರವೇ ಸಮಸ್ಯೆ ಕಂಡು ಬಂದಿದೆ. ಇದನ್ನು ಪರಿಶೀಲಿಸಲು ಮಂಡ್ಯ ಕೃಷಿ ವಿಶ್ವವಿದ್ಯಾಲಯದಿಂದ ವಿಜ್ಞಾನಿಗಳನ್ನು ಕರೆಸಲಾಗುವುದು' ಎಂದು ಹೇಳಿದರು.

ಬಾಲಕೃಷ್ಣ ಪ್ರಮಾಣ ಮಾಡಲಿ; ಮಾಜಿ ಶಾಸಕ ಒತ್ತಾಯ


• ಉದಯವಾಹಿನಿ, ಬಿಡದಿ


ಉದಯವಾಹಿನಿ ಚಿತ್ರ

ಬೆಂಗಳೂರು ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಪುಟ್ಟಣ್ಣ ಪರವಾಗಿ ಕೆಲಸ ಮಾಡಿರುವುದಾಗಿ ಸಚಿವರು ಆಗಿರುವ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣದೇವರ ಮುಂದೆ ಪ್ರಮಾಣ ಮಾಡಲಿ' ಎಂದು ಮಾಜಿ ಶಾಸಕ ಎ.ಮಂಜುನಾಥ್ ಸವಾಲು ಹಾಕಿದರು. ಪುಟ್ಟಣ್ಣ ಅವರನ್ನು ಗೆಲ್ಲಿಸಿಕೊಳ್ಳಲು ಬಾಲಕೃಷ್ಣ ಪ್ರಾಮಾಣಿಕವಾಗಿ ಪ್ರಚಾರ ಮಾಡಲಿಲ್ಲ. ಮುಖ್ಯಮಂತ್ರಿ ತವರು ಜಿಲ್ಲೆಯವರಾದ ಬಾಲಕೃಷ್ಣ ಅವರು ಇದೇ ಜಿಲ್ಲೆಯ ಪುಟ್ಟಣ್ಣ ಅವರನ್ನು ಗೆಲ್ಲಿಸಿಕೊಳ್ಳಲಾಗಲಿಲ್ಲ. ಅವರ ಸೋಲಿಗೆ ಶ್ರಮಿಸದ ಬಾಲಕೃಷ್ಣ ಅವರ ಆತ್ಮಸಾಕ್ಷಿ ಈಗ ಪ್ರಶ್ನಿಸುತ್ತಿದೆ. ಪುಟ್ಟಣ್ಣ ಪರವಾಗಿ ಚುನಾವಣೆ ಮಾಡಿ ಸೋತಿದ್ದೇವೆ ಎಂಬುದನ್ನು ಆತ್ಮಸಾಕ್ಷಿಯಾಗಿ ಒಪ್ಪಿಕೊಳ್ಳಿ ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಒತ್ತಾಯಿಸಿದರು.

ಕಾಂಗ್ರೆಸ್ ಶಾಸಕ ರಾಜಣ್ಣ ಬೇಕಿದ್ದರೆ ಪಕ್ಷ ಬಿಟ್ಟು ಹೋಗಲಿ ಎಂದು ಹೇಳಿದ್ದಾರೆ. ಹೀಗೆ ಹೇಳಿದ್ದು ಯಾರ ಆದೇಶದ ಮೇರೆಗೆ ಎಂಬುದನ್ನು ಸ್ಪಷ್ಟಪಡಿಸಬೇಕು. ನಿಮ್ಮದೇ ಪಕ್ಷದ ಅಭ್ಯರ್ಥಿಯನ್ನು ಸೋಲಿಸಿ, ಈಗ ರಾಜಣ್ಣ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದಾರೆ. ನಿಮಗೇನು ಯಾವ ನೈತಿಕತೆ ಇದೆ ಎಂದು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಪಕ್ಷವನ್ನು ಬಾಲಕೃಷ್ಣ ಎಷ್ಟು ವರ್ಷದಿಂದ ಕಟ್ಟಿ ಬೆಳೆಸಿದ್ದಾರೆ. ಪಕ್ಷದಲ್ಲಿ ಅವರ ಹಿರಿತನ ಎನು? ಹಣ ಕೊಟ್ಟು ಮಾಗಡಿ ಕ್ಷೇತ್ರದಿಂದ ಗೆಲ್ಲಿಸಿಕೊಂಡ ಹಿಂದಿನ ಸಂಸದ ಡಿ.ಕೆ. ಸುರೇಶ್ ಅವರಿಗೆ ಲೋಕಸಭೆ ಚುನಾವಣೆಯಲ್ಲಿ ಮಾಗಡಿ ಕ್ಷೇತ್ರದಲ್ಲೇ ಹೆಚ್ಚಿನ ಸಂಖ್ಯೆಯ ಮತಗಳನ್ನು ಕೊಡಿಸಲು ಸಾಧ್ಯವಾಗಲಿಲ್ಲ ಎಂದು ಆರೋಪಿಸಿದರು.

ಹೊನವಳ್ಳಿ-ಸುಳಿಮಳೆಗೆ ಕಾಂಕ್ರಿಟ್ ರಸ್ತೆ ನಿರ್ಮಾಣ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಸೋಮವಾರಪೇಟೆ

ಗ್ರಾಮೀಣಾಭಿವೃದ್ಧಿಯೇ ದೇಶದ ಅಭಿವೃದ್ಧಿಗೆ ಭದ್ರ ಬುನಾದಿ. ಪ್ರತಿ ಗ್ರಾಮವೂ ಅಭಿವೃದ್ಧಿಯ ಪಥದಲ್ಲಿ ಸಾಗಿದಾಗ ಮಾತ್ರ ಸಮೃದ್ಧ ಸಮಾಜ ನಿರ್ಮಾಣ ಸಾಧ್ಯ ಎಂದು ಶಾಸಕ ಡಾ.ಮಂತರ್ ಗೌಡ ಅಭಿಪ್ರಾಯಪಟ್ಟರು. ತಾಲ್ಲೂಕಿನ ಹೊನವಳ್ಳಿ- ಸುಳಿಮಳೆ ಮಾರ್ಗದಲ್ಲಿ 50 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಕಾಂಕ್ರಿಟ್ ರಸ್ತೆಯನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ಜನರಿಗೆ ಉತ್ತಮ ರಸ್ತೆ, ಕುಡಿಯುವ ನೀರು, ವಿದ್ಯುತ್ ಸೇರಿ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ಜನಪ್ರತಿನಿಧಿಗಳ ಜವಾಬ್ದಾರಿ. ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಆದ್ಯತೆಯ ಮೇರೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು. ಗ್ರಾಮಸ್ಥರು ಕೂಡ ಗ್ರಾಮದ ಅಭಿವೃದ್ಧಿ ಕಾರ್ಯಗಳಲ್ಲಿ ಕೈಜೋಡಿಸಬೇಕು ಎಂದು ಹೇಳಿದರು. ವಿಧಾನಸಭಾ ಕ್ಷೇತ್ರದ ಪ್ರತಿ ಗ್ರಾಮದ ರಸ್ತೆಗಳೂ ಉತ್ತಮ ಗುಣಮಟ್ಟದಿಂದ ಕೂಡಿರಬೇಕು ಎಂಬ ಕನಸಿದೆ.

ಸುಳಿಮಳೆ ಗ್ರಾಮದಲ್ಲಿ ಉಳಿಕೆಯಾಗಿರುವ 200 ಮೀಟರ್ ರಸ್ತೆ ಕಾಮಗಾರಿಗೆ ಅನುದಾನ ಕಲ್ಪಿಸಲಾಗುವುದು. ಈ ರಸ್ತೆ ಸುಸಜ್ಜಿತವಾದರೆ, ದೊಡ್ಡಮಳೆ ಶ್ರೀ ಹೊನ್ನಮ್ಮ ಕೆರೆ ಕ್ಷೇತ್ರಕ್ಕೆ ತೆರಳುವುದಕ್ಕೆ ಉತ್ತಮ ರಸ್ತೆಯಾಗುತ್ತದೆ ಎಂದು ಹೇಳಿದರು. ಗ್ರಾಮಾಭಿವೃದ್ಧಿ ಮಂಡಳಿ ಕಾರ್ಯದರ್ಶಿ ಎಚ್.ಈ. ಪುಟ್ಟಸ್ವಾಮಿ ಮಾತನಾಡಿ, ಹೊನವಳ್ಳಿ, ಸುಳಿಮಳೆ ಗ್ರಾಮಗಳಲ್ಲಿ ಪ್ರಗತಿಪರ ಕೃಷಿಕರೆ ಹೆಚ್ಚಿದ್ದಾರೆ. ಗ್ರಾಮಸ್ಥರ ರಸ್ತೆ ಕನಸು ನನಸಾಗಿದೆ.

ಅಂತರಾಳದಿಂದ.. EDITORIAL

ಡೊನಾಲ್ಡ್ ಟ್ರಂಪ್ ಇನ್ನಾದರೂ ಮುತ್ಸದ್ದಿತನ ಪ್ರದರ್ಶಿಸಲಿ




ಅಮೆರಿಕದಲ್ಲಿ ನಡೆದ ಮಧ್ಯಾಂತರ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ರಿಪಬ್ಲಿಕನ್ ಪಕ್ಷ ಹೀನಾಯ ಸೋಲು ಕಂಡಿರುವುದು ಜಾಗತಿಕವಾಗಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಈ ಫಲಿತಾಂಶವನ್ನು ಡೊನಾಲ್ಡ್ ಟ್ರಂಪ್ ಆಡಳಿತದ ವಿರುದ್ಧದ ಜನರ ತೀರ್ಪು ಎಂದು ವಿಶ್ಲೇಷಿಸಲಾಗುತ್ತಿದ್ದರೆ, ಈ ಫಲಿತಾಂಶ ವಿಶ್ವ ರಾಷ್ಟ್ರಗಳಿಗೂ ಒಂದಿಷ್ಟು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದೆ. ಕಳೆದೆರಡು ವರ್ಷಗಳಿಂದ ಅಮೆರಿಕದ ಅಧ್ಯಕ್ಷರಾಗಿ 2ನೇ ಅವಧಿಗೆ ಅಧಿಕಾರ ನಿರ್ವಹಿಸುತ್ತಿರುವ ಟ್ರಂಪ್ ಅವರು ನಿರಂತರವಾಗಿ ತಮ್ಮ ವಿರೋಧಾಭಾಸದ ನಿರ್ಧಾರ, ನಡೆಗಳಿಂದ ವಿಶ್ವ ರಾಷ್ಟ್ರಗಳ ತೀವ್ರ ಆಕ್ರೋಶಕ್ಕೆ ಕಾರಣರಾಗುತ್ತಲೇ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಪದೇಪದೆ ತಮ್ಮ ನಿರ್ಧಾರವನ್ನು ಬದಲಾಯಿಸುವ ಮೂಲಕ ಟ್ರಂಪ್ ಜಾಗತಿಕವಾಗಿ ನಗೆಪಾಟಲಿಗೀಡಾದರು. ಇನ್ನು ಇರಾನ್ ಮೇಲೆ ಯುದ್ಧ ಘೋಷಿಸಿದ ಬಳಿಕವಂತೂ ಟ್ರಂಪ್ ಅವರ ಈ ಇಬ್ಬಗೆಯ ನೀತಿಗಳು ತಾರಕಕ್ಕೇರಿ ಮಧ್ಯಪ್ರಾಚ್ಯ ಮತ್ತು ಪಶ್ಚಿಮ ಏಷ್ಯಾ ದೇಶಗಳ ಮೇಲೆ ತೀವ್ರತೆರನಾದ ವ್ಯತಿರಿಕ್ತ ಪರಿಣಾಮ ಬೀರಿತು. ಟ್ರಂಪ್‌ರ ಈ ನಿರಂಕುಶ ಆಡಳಿತದ ವಿರುದ್ಧ ಸೇರಿಗೆ ಸವ್ವಾಸೇರು' ಎಂಬಂತೆ ಸೆಟೆದು ನಿಂತ ಇರಾನ್ ಕೂಡ ಕೊಲ್ಲಿ ರಾಷ್ಟ್ರಗಳಲ್ಲಿನ ಅಮೆರಿಕದ ನೆಲೆಗಳ ಮೇಲೆ ದಾಳಿ ಮಾಡಿ ಟ್ರಂಪ್ ಅವರ ಲೆಕ್ಕಾಚಾರಗಳನ್ನೆಲ್ಲ ಬುಡಮೇಲು ಮಾಡಿತು. ಇದರಿಂದಾಗಿ ತಿಂಗಳುಗಳ ಕಾಲ ಯುದ್ಧ ಮುಂದುವರಿದುದು ಇಡೀ ಜಾಗತಿಕ ಸಮುದಾಯವನ್ನು ಆತಂಕದ ಮಡುವಿಗೆ ತಳ್ಳುವಂತೆ ಮಾಡಿತು.

> ಅಮೆರಿಕವನ್ನು ಮತ್ತೆ ವಿಶ್ವದ ಮುಂಚೂಣಿಯ ರಾಷ್ಟ್ರವನ್ನಾಗಿಸುವುದಾಗಿ ದೇಶದ ಜನತೆಗೆ ಭರವಸೆ ನೀಡಿ ಚುನಾವಣೆಯನ್ನು ಎದುರಿಸಿದ್ದ ಅವರು ಬಹುಮತದಿಂದ ಅಧಿಕಾರದ ಗದ್ದುಗೆ ಏರಿದ್ದರು. ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆಯೇ ತಮ್ಮ ಭರವಸೆಯನ್ನು ಈಡೇರಿಸುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿದ್ದ ಟ್ರಂಪ್ ವಲಸಿಗರನ್ನು ಗಡೀಪಾರು ಮಾಡುವ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿದ್ದರು. ವೀಸಾ ನೀತಿಗಳನ್ನು ಬಿಗಿಗೊಳಿಸುವ ಮೂಲಕ ವಿದೇಶಿಗರಿಗೆ ಕಡಿವಾಣ ಹಾಕಿದ್ದರು. ಇದರ ಬೆನ್ನಲ್ಲೇ ಸುಂಕಾಸ್ತ್ರವನ್ನು ಪ್ರಯೋಗಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಅಸ್ಥಿರತೆಯ ವಾತಾವರಣ ಸೃಷ್ಟಿಯಾಗುವಂತೆ ಮಾಡಿದ್ದರು. ಟ್ರಂಪ್ ಅವರ ಈ ಏಕಪಕ್ಷೀಯ ನಿರ್ಧಾರಗಳು ವಿದೇಶಗಳ ವ್ಯಾಪಾರ, ಆರ್ಥಿಕತೆಯ ಮೇಲೆ ಮಾತ್ರವಲ್ಲದೆ ಸ್ವದೇಶಿ ಜನರ ಮೇಲೂ ಪ್ರತಿಕೂಲ ಪರಿಣಾಮ ಬೀರಿತು.

ಈ ಎಲ್ಲಾ ಬೆಳವಣಿಗೆಗಳ ನಡುವೆ ಅಮೆರಿಕದ ಆರ್ಥಿಕತೆ ಕುಸಿಯುತ್ತಿರುವ ವರದಿಗಳು ಬಹಿರಂಗಗೊಳ್ಳುತ್ತಿದ್ದಂತೆಯೇ ಅಲ್ಲಿನ ಜನರೂ ಟ್ರಂಪ್ ಆಡಳಿತದ ವಿರುದ್ಧ ಅಸಮಾಧಾನವನ್ನು ವ್ಯಕ್ತಪಡಿಸಲಾರಂಭಿಸಿದರು. ಮಧ್ಯಾಂತರ ಚುನಾವಣೆಗೂ ಮುನ್ನ ಜನರನ್ನು ಓಲೈಸುವ ನಿಟ್ಟಿನಲ್ಲಿ ಕೆಲವು ಮಹತ್ವದ ನಿರ್ಧಾರಗಳನ್ನು ಟ್ರಂಪ್ ಕೈಗೊಂಡರೂ ಇದು ದೇಶದ ಜನರನ್ನು ಸಮಾಧಾನಿಸುವಲ್ಲಿ ಸಫಲವಾಗಿಲ್ಲ ಎಂಬುದಕ್ಕೆ ಈ ಫಲಿತಾಂಶವೇ ಸಾಕ್ಷಿ. ಕಳೆದ ಎರಡು ದಿನಗಳಲ್ಲಿ ಜಾಗತಿಕ ಮಾರುಕಟ್ಟೆ ನಿರೀಕ್ಷೆಗೂ ಮೀರಿ ಜಿಗಿದಿರುವುದು ಟ್ರಂಪ್ ಅವರ ಆಡಳಿತದ ವಿರುದ್ಧದ ಅಮೆರಿಕನ್ನರ ಅಭಿಪ್ರಾಯಕ್ಕೆ ಜಾಗತಿಕ ಮನ್ನಣೆ ಲಭಿಸಿರುವುದರ ಸಂಕೇತ ಎಂಬ ವಿಶ್ಲೇಷಣೆಗಳೂ ನಡೆಯತೊಡಗಿವೆ.

ಅಮೆರಿಕದ ದೊಡ್ಡಣ್ಣನ ಗೌರವ ಉಳಿಸಲು ಅಧ್ಯಕ್ಷ ಟ್ರಂಪ್ ಇನ್ನಾದರೂ ತನ್ನೆಲ್ಲ ಬಾಲಿಶ ಮತ್ತು ಇಬ್ಬಗೆಯ ಧೋರಣೆಗಳನ್ನು ಬದಿಗಿರಿಸಿ ತನ್ನ ದೇಶ ಮತ್ತು ಜನರ ಹಿತಾಸಕ್ತಿಯ ರಕ್ಷಣೆಯ ಜತೆಜತೆಯಲ್ಲಿ ವಿಶ್ವರಾಷ್ಟ್ರಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ನಡೆಸುವ ರಾಜಕೀಯ ಮುತ್ಸದ್ದಿತನವನ್ನು ಪ್ರದರ್ಶಿಸಬೇಕು. ಇಲ್ಲವಾದಲ್ಲಿ ವಿಶ್ವದ ಹಲವು ರಾಷ್ಟ್ರಗಳಲ್ಲಿ ಈಗಾಗಲೇ ಭುಗಿಲೇಳುತ್ತಿರುವ ದಂಗೆಗಳ ಮಾದರಿಯಲ್ಲಿ ಅಮೆರಿಕದ ಜನರು ಟ್ರಂಪ್ ವಿರುದ್ಧ ಬೀದಿಗಿಳಿದರೆ ಅಚ್ಚರಿ ಪಡಬೇಕಾಗಿಲ್ಲ.

ಬೆಳಕಿನ ಹಬ್ಬ ದೀಪಾವಳಿ



ದೀಪಾವಳಿ ಹಿಂದೂಗಳಿಗೆಲ್ಲ ಸಡಗರ ಸಂಭ್ರಮದ ಹಬ್ಬ ವರ್ಷವಿಡೀ ಆಚರಿಸುವ ಹಬ್ಬಗಳಲ್ಲೆಲ್ಲಾ ದೀಪಾವಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಬೆಳಕಿನ ಹಬ್ಬ ದೀಪಾವಳಿ ಮತ್ತೆ ಬಂದಿದೆ. ಭಾರತದಾದ್ಯಂತ ಆಚರಿಸುವ ಹಬ್ಬವೆಂದರೆ ದೀಪಾವಳಿ ತಮಸೋಮ ಜ್ಯೋತಿಗಮಯ ಕತ್ತಲಿನಿಂದ ಬೆಳಕಿನ ಕಡೆಗೆ ದೀಪಾವಳಿ ಎಂದರೆ ಯಾರಿಗೂ ಖುಷಿಯಿಲ್ಲ ಹೇಳಿ. ದೀಪಗಳ ಹಬ್ಬದ ವೈಶಿಷ್ಟವೇ ಅಂಥಾದ್ದು.

ದೀಪಾವಳಿ ಎಲ್ಲಿ ಕತ್ತಲಿದೆಯೋ ಅಲ್ಲಿ ಬೆಳಕಿರಬೇಕು. ಕತ್ತಲೆಂದರೆ ಅಜ್ಞಾನ ಕತ್ತಲೆಂದರೆ ಅಂಧಕಾರ. ಕತ್ತಲೆಂದರೆ ಸೋಲು. ಬೆಳಕು ಎಂದರೆ ಯಶಸ್ಸು. ಕತ್ತಲೆಂದರೆ ಕಷ್ಟಗಳ ಸಂಕೋಲೆ ಬೆಳಕೆಂದರೆ ಬಿಡುಗಡೆ. ಅಂದರೆ ನಮ್ಮ ಅಜ್ಞಾನವನ್ನು ಬೆಳಕಿನ ಮೂಲಕ ತೊಡೆದು ಹಾಕೋ ಹಬ್ಬವೇ ದೀಪಾವಳಿ. ಈ ದೀಪಾವಳಿ ಅಮಾವಾಸ್ಯೆಗೂ ಇಲ್ಲಿ ಮಹತ್ವವಿದೆ. ಅಮಾವಾಸ್ಯೆಯ ದಿನ ಲಕ್ಷ್ಮೀ ಪೂಜೆಯೂ ನಡೆಯುತ್ತದೆ. ಲಕ್ಷ್ಮಿಯು ಕತ್ತಲನ್ನು ಕಳೆದು ಬೆಳಕು ತರುವ ಮಹಾ ತೇಜಸ್ವಿನಿ.

ಕತ್ತಲೆಯಿಂದ ಬೆಳಕಿನ ಕಡೆಗೆ ಸಾಗುವುದೇ ಬದುಕು. ಹೀಗಾಗಿ ದೀಪಾವಳಿಯಲ್ಲಿ ನಡೆಯುವ ಜ್ಯೋತಿ ಸ್ವರೂಪಿಣಿ ಲಕ್ಷ್ಮಿಯ ಪೂಜೆ ಭಯ ಭಕ್ತಿಯಿಂದ ಪೂಜೆ ಮಾಡುತ್ತಾರೆ.

ಹಬ್ಬದ ದಿನ ಬೆಳಗ್ಗೆ ಎದ್ದು ಮನೆಯಂಗಳದಲ್ಲಿ ಸಗಣಿ ಸಾರಿಸಿ, ದೀಪಗಳ ಚಿತ್ರಗಳ ರಂಗೋಲಿ ಬಿಡಿಸಿ, ಬಣ್ಣ ಮತ್ತು ಹೂವುಗಳಿಂದ ರಂಗೋಲಿಗೆ ಅಲಂಕಾರ ಮಾಡುತ್ತಾರೆ. ಮನೆಯ ಹೊಸ್ತಿಲು ಮತ್ತು ದೇವರ ಕೋಣೆಯನ್ನು ಮಾವಿನ ತಳಿರು ತೋರಣಗಳು ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ. ಹೊಸ ಬಟ್ಟೆ ತೊಟ್ಟು ಬಂಧು- ಮಿತ್ರರು ಮತ್ತು ಸ್ನೇಹಿತರಿಗೆ ದೀಪಾವಳಿಯ ಶುಭಾಷಯ ಹೇಳಿ, ಸ್ನೇಹಿತರೊಂದಿಗೆ ಪಟಾಕಿ ಧಾಂ, ಧೂಂ ಅಂತ ಹೊಡೆಯುತ್ತಾರೆ. ಮನೆಯಲ್ಲಿ ಪೂಜೆ ಪುನಸ್ಕಾರ ಮುಗಿಸಿ ಊಟ ಮಾಡುವ ಹೊತ್ತಿಗೆ ಮಧ್ಯಾಹ್ನ ಆಗುತ್ತದೆ. ಪಟಾಕಿಯು ಧಾಂ, ಧೂಂ ಶಬ್ದ ಕಿವಿ ಕೇಳಿಸುವ ಪಟಾಕಿ ಹೊಡೆಯುವುದನ್ನು ನೋಡಿ ಚಿಕ್ಕ ಮಕ್ಕಳು ಎಂಜಾಯ್ ಮಾಡುತ್ತಾರೆ. ಮನೆಯ ಮುಂದೆ ದೀಪ ಹಚ್ಚುತ್ತೇವೆ. ಮನೆ ಮುಂದೆ ಬೆಳಕಿನ ದೀಪದ ಸೀರಿಯಲ್ ದೀಪದ ಸೆಟ್ ಬಿಡುತ್ತೇವೆ. ಬೆಳಕಿನ ದೀಪಗಳು ಮನೆ ಮುಂದೆ ಬಂದಿವೆ.

ಕಷ್ಟದ ಕತ್ತಲನ್ನು ದೀಪದ ಜ್ಯೋತಿಯಿಂದ ದೂರವಾಗಿಸಿಕೊಂಡು ಹೊಸ ಬಾಳಿಗೆ ಹೊಸದೊಂದು ಮುನ್ನುಡಿ ಬರೆಯುವ ಪ್ರಯತ್ನವೇ ಈ ದೀಪಾವಳಿ. ದೀಪ ಹಚ್ಚಿ ಮನೆ ಒಳ ಹೊರಗೆ ದೀಪ ಬೆಳಗಿಸಿ ಈ ದೀಪದ ಬೆಳಕು ಮುಂದಿನ ದೀಪಾವಳಿಯವರೆಗೂ ನಮ್ಮ ಬದುಕಿನ ದಾರಿ ತೋರಿಸಲಿ. ಜೀವನದಲ್ಲಿ ಏಳು ಬೀಳುಗಳು ಸಹಜ. ಕಷ್ಟ ಸುಖಗಳು ಒಂದೇ ನಾಣ್ಯದ ಮುಖ ಬದಲಾಗುವವರೆಗೂ ಕಾಯುವವರಿಗೆ ಮಾತ್ರ ಸುಖದ ದರ್ಶನವಾಗುವುದು ಆ ತಾಳ್ಮೆ ನೆಮ್ಮದಿ ನಮ್ಮಲ್ಲಿರಬೇಕು. ಬನ್ನಿ ಎಲ್ಲರೂ ದೀಪ ಹಚ್ಚೋಣ. ದೀಪಾವಳಿ ತಂದಿರುವ ಈ ದಿವ್ಯ ಜ್ಯೋತಿಯ ದೀಪದಲ್ಲಿ ನಮ್ಮ ಮನೆ ಅಂಗಳದಲ್ಲಿ ದೀಪಗಳನ್ನು ಹಚ್ಚಿ, ಆ ದೀಪದ ಬೆಳಕಿನಲ್ಲಿ ನಾವು ಬದುಕಿನ ಭರವಸೆಗಳನ್ನು ಬೆಳೆಸಿಕೊಳ್ಳೋಣ. ದೀಪದ ಬೆಳಕಿನ ಹಬ್ಬ ಈ ದೀಪಾವಳಿ ಹಬ್ಬ. ಸಡಗರ ಸಂಭ್ರಮದಿಂದ ಆಚರಿಸೋಣ.



- ವಿ.ಎಂ. ಎಸ್.ಗೋಪಿ
ಲೇಖಕರು
ಬೆಂಗಳೂರು.



ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

31

ಪ್ರಶ್ನೆಪತ್ರಿಕೆ ನೋಡಿ ಮೈಂಡ್ ಬ್ಲಾಂಕ್ ಆದಾಗ...

ಬಳಿಕ ಪತ್ರಿಕೆಯನ್ನು ಕೊನೆಯಿಂದ ಓದಲು ಆರಂಭಿಸಿ. ಅತಿ ಸುಲಭ ಪ್ರಶ್ನೆಯನ್ನು ಮೊದಲು ಗುರುತಿಸಿ ಉತ್ತರಿಸಿ. ಒಂದು ಉತ್ತರ ಬರೆದೊಡನೆ ಆತ್ಮವಿಶ್ವಾಸ ಮರಳಿ ಬರುತ್ತದೆ. ಕಠಿಣ ಪ್ರಶ್ನೆಗಳನ್ನು ಸುತ್ತಿ ಗುರುತು ಹಾಕಿ ಮುಂದೆ ಸಾಗಿ. ಎಲ್ಲವೂ ಒಟ್ಟಿಗೆ ನೆನಪಾಗಬೇಕೆಂಬ ಒತ್ತಡ ಬೇಡ, ನೆನಪು ನಿಧಾನವಾಗಿ ಮರಳಿ ಬರುತ್ತದೆ.

ಪ್ರಶ್ನೆಪತ್ರಿಕೆ ಕೈಗೆ ಬಂದ ಕೂಡಲೇ ಓದಿದ್ದೆಲ್ಲ ಮರೆತಂತೆ ಭಾಸವಾಗುತ್ತದೆ, ಅಕ್ಷರಗಳು ಕಣ್ಣ ಮುಂದೆ ನರ್ತಿಸಿದಂತೆ ತೋರುತ್ತದೆ. ಏನೂ ನೆನಪಿಲ್ಲ ಎಂಬ ಆತಂಕ ಮನವನ್ನು ಆವರಿಸುತ್ತದೆ. ಇದಕ್ಕೆ 'ಬ್ಲಾಂಕ್' ಎನ್ನುತ್ತಾರೆ. ನೀವು ಅಸಮರ್ಥರೆಂದಲ್ಲ, ತೀವ್ರ ಒತ್ತಡದಲ್ಲಿ ಮೆದುಳು ಕ್ಷಣಕಾಲ ಸ್ತಬ್ಧವಾಗುವ ಸಹಜ ಸ್ಥಿತಿ ಇದು.

ಅಂಥ ಸಮಯದಲ್ಲಿ ಪತ್ರಿಕೆಯನ್ನು ಪದೇ ಪದೇ ಓದಲೇಬೇಡಿ. ಲೇಖನಿಯನ್ನು ಕೆಳಗಿಟ್ಟು, ಎರಡೂ ಕೈಗಳನ್ನು ತೊಡೆಯ ಮೇಲಿಟ್ಟು ಕಣ್ಣು ಮುಚ್ಚಿ. ಮೂರು ಬಾರಿ ಆಳವಾಗಿ ಉಸಿರಾಡಿ, ನಾನು ಶಾಂತವಾಗಿದ್ದೇನೆ ಎಂದು ಮನಸ್ಸಿಗೆ ಹೇಳಿಕೊಳ್ಳಿ.

ಮೂವತ್ತು ಸೆಕೆಂಡುಗಳ ಕಾಲ ಮೆದುಳಿಗೆ ಚೇತರಿಸಿಕೊಳ್ಳಲು ಅವಕಾಶ ನೀಡಿ. ಸ್ವಲ್ಪ ನೀರು ಕುಡಿದು ಮುಖಕ್ಕೆ ತಂಪು ಸ್ಪರ್ಶ ನೀಡಿ. ನೆನಪಿಡಿ, ಬ್ಲಾಂಕ್ ಆಗುವುದು ತಾತ್ಕಾಲಿಕ. ಗಾಬರಿಗೊಂಡರೆ ಅದು ಇನ್ನಷ್ಟು ಹೆಚ್ಚುತ್ತದೆ, ಶಾಂತವಾದರೆ ಮೆದುಳು ಬಾಗಿಲು ತೆರೆಯುತ್ತದೆ. ಪರೀಕ್ಷೆ ನೆನಪಿನ ಓಟವಲ್ಲ, ಜ್ಞಾನದ ಅಭಿವ್ಯಕ್ತಿ. ಒಂದು ಹೆಜ್ಜೆ ಇಟ್ಟರೆ ಸಾಕು, ಬರೆದಂತೆ ಮನಸ್ಸು ತಿಳಿಯಾಗುತ್ತದೆ.





ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಜೀವನದ ಬದುಕಿನಲ್ಲಿ ಸದಾ ಗಮನದಲ್ಲಿಡಬೇಕಾದ ಕೆಲವು ಉಪಯುಕ್ತ ಸಂದೇಶಗಳು


ಬಡತನ ಬರುವುದು ಶಾಪವಲ್ಲ ಅದು ನಮ್ಮ ಬದುಕುವ ದಾರಿಯನ್ನು ತೋರಿಸುವ ದಾರಿ ಮಾರ್ಗ

(1) ಪ್ರತಿಯೊಬ್ಬರ ಕುಟುಂಬದಲ್ಲಿರುವ ಹಿರಿಯರ ಮಾತು ಕೇಳಿ ಕಾರಣ ಅವರು ಅನುಭವಿಸಿ ಅನುಭವದ ಮೇಲೆ ಸರಿತಪ್ಪುಗಳ ಲೆಕ್ಕಾಚಾರದಲ್ಲಿ ತಿಳುವಳಿಕೆ ನೀಡುತ್ತಾರೆ. **ಉದಾಹರಣೆಗೆ:** ಅರಿವಿಲ್ಲದೇ ಬಾಲ್ಯ, ಯೌವನ, ಮಧ್ಯವಯಸ್ಸು ಕೆಲವು ಸಲ ಜಾರಿದೆ. ಒಟ್ಟಾರೆ ನಾನು ಮಾಡಿದ ಹಾಗೆ ನೀವು ಮಾಡಬೇಡಿ, ಆದರೆ ನಾನು ಹೇಳಿದಾಗೆ ನೀವು ಮಾಡಿ ಆಗ ನಿಮ್ಮಗಳ ಭವಿಷ್ಯ ಪ್ರಕಾಶಮಾನವಾಗಿ ಉಜ್ವಲವಾಗುತ್ತದೆ.

(2) ಯಾವುದೇ ಸ್ಥಾನ, ಅಧಿಕಾರ, ಪದವಿ, ಶ್ರೀಮಂತಿಕೆ ಬಂದಾಗ ಹಿಗ್ಗಬೇಡ ಕಾರಣ ಯಾವ ಶರವೇಗದಲ್ಲಿ ಶ್ರೀಮಂತಿಕೆ ಬರುತ್ತದೆಯೋ ಒಂದು ಕಾಲಕ್ಕೆ ಅದೇ ಶ್ರೀಮಂತಿಕೆ ಕರಗಿ ಹೋಗುತ್ತದೆ ಇದು ಕಟ್ಟಿಟ್ಟ ಬುತ್ತಿ ಯಾವುದೂ ಶಾಶ್ವತವಲ್ಲ ಇದೇ ಕಾಲಚಕ್ರ. (3) ಬಡತನ ಬರುವುದು ಶಾಪವಲ್ಲ ಅದು ನಮ್ಮ ಬದುಕುವ ದಾರಿಯನ್ನು ತೋರಿಸುವ ದಾರಿ ಮಾರ್ಗ. ಬಡತನ ಬಂದರೆ ಕುಗ್ಗುವುದು ಮನುಷ್ಯನ ಧರ್ಮವಲ್ಲ, ಬಡತನ, ಸಿರಿತನ ಯಾವುದೂ ಕೂಡ ಶಾಶ್ವತವಲ್ಲ, **ಉದಾಹರಣೆಗೆ:** ಪ್ರತಿಯೊಬ್ಬರಿಗೂ ಖಾಲಿ ಜೇಬು ,ಹಸಿದ ಹೊಟ್ಟೆ, ಒಡೆದ ಹೃದಯ ಇವುಗಳು ಪಾಠ ಕಲಿಸುತ್ತದೆ. (4) ನಮ್ಮ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯ ಹಾಗೂ ಆಧ್ಯಾತ್ಮಿಕ ಸಾಧ್ಯತೆಗಳು ಎಲ್ಲವೂ ನಾವು ಎಷ್ಟು ಸೌರಶಕ್ತಿಯನ್ನು ಮೈಗೂಡಿಸಿ ಕೊಳ್ಳುವುದರಿಂದ ನಿರ್ಧರಿತವಾಗುತ್ತದೆ. (5) ನಿನ್ನಿಂದ ಸಾಧ್ಯವಾಗದ ಕೆಲಸಗಳನ್ನು ನಾನು ಮಾಡಬಹುದು ,ನನ್ನಿಂದ ಸಾಧ್ಯವಾಗದ ಕೆಲಸಗಳನ್ನು ನೀನು ಮಾಡಬಹುದು, ಆದರೆ ನಾವಿಬ್ಬರೂ ಒಟ್ಟಿಗೆ ಸೇರಿದರೆ ಎಂತಹ ಮಹತ್ತರವಾದ ಕೆಲಸಗಳನ್ನಾದರೂ ಮಾಡಬಹುದು.(6) ಹೊಗಳುವವರು ಸ್ನೇಹಿತರಲ್ಲ, ತೆಗಳುವವರು ಶತ್ರುಗಳಲ್ಲ. ಆದರೆ ನಮ್ಮ ಬದುಕಿನಲ್ಲಿ ಒದಗಿಬರುವ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮಾಡಬೇಕು ಆದರೆ ಫಲಾಪೇಕ್ಷೆಯನ್ನು ಎಂದಿಗೂ ಇಷ್ಟಪಡಬಾರದು. ಅಲ್ಲಿ ಇಷ್ಟಪಟ್ಟರೆ ಸ್ವಾರ್ಥ ಎನಿಸುತ್ತದೆ.

(7) ಜೀವನ ಸಂಪನ್ನವಾದ ನಂತರ ಸಂದರ್ಭೋಚಿತ ತಾಳ್ಮೆ ಮತ್ತು ಮೌನವನ್ನ ರೂಢಿಸಿಕೊಳ್ಳಿ. ಕೆಲವು ಸಲ ತಾಳ್ಮೆ ಮತ್ತು ಮೌನದಿಂದ ಕೆಲಸ ಆಗುವುದಿಲ್ಲ. ಆದಾಗ್ಯೂ ಸಾಧ್ಯವಾದಷ್ಟು ತಮ್ಮ ಜ್ಞಾನಕ್ಕೆ,ಬುದ್ಧಿಗೆ ಕೆಲಸಕೊಟ್ಟು ಆತ್ಮಸಾಕ್ಷಿ,ಹೃದಯ ಸಾಕ್ಷಿ ಮತ್ತು ಮನ:ಸಾಕ್ಷಿಯಾಗಿ ರೂಢಿಸಿಕೊಳ್ಳುವುದು ಸರ್ವರ ದೃಷ್ಟಿಯಲ್ಲಿಯೂ ಒಳ್ಳೆಯದು.(8) ಕೋಪ ವಿದ್ದಾಗ ಶಕ್ತಿ ಹಿಗ್ಗುತ್ತದೆ ಅದೇ ನಕ್ಕಾಗ ಶಕ್ತಿ ಕುಗ್ಗುತ್ತದೆ. ಕೋಪ ಇರುವವನಿಗೆ ಆಯಸ್ಸು ಮತ್ತು ಆರೋಗ್ಯ ಕಡಿಮೆ. ಅದೇ ಸದಾ ನಗುವಿನೊಂದಿಗೆ ಜೀವನ ಸಾಗಿಸುವವನಿಗೆ ಆಯಸ್ಸು ಮತ್ತು ಆರೋಗ್ಯ ವೃದ್ಧಿಯಾಗುತ್ತದೆ.(9) ಕಳೆದುಕೊಂಡ ಜಾಗದಲ್ಲೇ ಹುಡುಕಬೇಕು,ಸೋತ ಜಾಗದಲ್ಲೇ ಗೆಲ್ಲಬೇಕು, ಅವಮಾನಿಸಿದ ಜಾಗದಲ್ಲೇ ಬೆಳೆಯಬೇಕು, ತಿರಸ್ಕರಿಸಿದವರಿಂದಲೇ ಪುರಸ್ಕರಿಸಿಕೊಳ್ಳಬೇಕು.(10) ಒಬ್ಬ ವ್ಯಕ್ತಿಯನ್ನ ದ್ವೇಷಿಸಲಾರಂಭಿಸಿದರೆ ಅದರಿಂದ ಸಮಯ, ನೆಮ್ಮದಿ, ಶಾಂತಿ, ಸಂತೋಷ ಹೊರಟು ಹೋಗುತ್ತದೆ. ಅದರ ಬದಲು ಅವರನ್ನ ಕ್ಷಮಿಸಿಬಿಡಿ. ಕ್ಷಮಿಸುವುದು ಉತ್ತಮ ಅದನ್ನೇ ಮರೆತು ಬಿಡುವುದೇ ಸರ್ವೋತ್ತಮ. ಕಾರಣ ಅವರು ಅರ್ಹರು ಎಂಬ ಕಾರಣಕ್ಕಲ್ಲ ನೀವು ಅವರಿಗಿಂತ ಉತ್ತಮರು ಎಂಬ ಕಾರಣಕ್ಕೆ. ಇದೇ ಸೃಷ್ಟಿಯ ನಿಯಮ,ಕಾಲದ ನಿಯಮ ಹಾಗೂ ಪ್ರಕೃತಿಯ ನಿಯಮ.

ರಾಮಾಯಣ



25. ರಾವಣನು ಪ್ರಯಾಸಪಟ್ಟು ಕುಂಭಕರ್ಣನನ್ನು ಎಬ್ಬಿಸಿ ಯುದ್ಧಕ್ಕೆ ಕಳುಹಿಸಿದು

• ಹಿಂದಿನ 121ನೆಯ ಅಧ್ಯಾಯ

ಅವನು ಎಚ್ಚರುಗೊಂಡಾಗ ಅರ್ಪಿಸಲೆಂದು ಗಂಧ ಹೂಹಣ್ಣು ಮುಂತಾದುವನ್ನು ತಮ್ಮೊಡನೆ ಒಯ್ದರು. ಜೊತೆಗೆ ಎದ್ದೊಡನೆ ಅವನ ಭೋಜನಕ್ಕಾಗಿ ಅಪಾರ ಪ್ರಮಾಣದ ರಕ್ತಮಾಂಸಗಳನ್ನು ತಂದು ಮನೆಯ ಹೊರಗಿರಿಸಿದರು. ಕುಂಭಕರ್ಣನದು ಒಂದು ಯೋಜನ ವಿಸ್ತಾರವಾದ ದೊಡ್ಡ ಅರಮನೆ; ಒಳಗೆ ನಾನಾ ಚಿತ್ತಾಪಹಾರ ಮಾಡುವ ವೈಭವದಿಂದ ಕೂಡಿದ ಆ ಮನೆಯನ್ನು ಕಂಡು ಬೆರಗುವಟ್ಟರು. ಹೇಗೆ ಹೇಗೆಯೋ ಕೈಕಾಲುಗಳನ್ನು ಚಾಚಿಕೊಂಡು ದೊಡ್ಡ ಬೆಟ್ಟದಂತೆ ಮಲಗಿರುವ ಅವನ ಭೀಮಾಕಾರವಾದ ಮೂಗಿನ ಹೊಳ್ಳೆಗಳು ದೊಡ್ಡ ಗುಹೆಗಳಂತೆ ಕಾಣುತ್ತಿದ್ದವು ಅವನ ಉಸಿರಾಟವು ಕಾಳೋರಗನ ಬುಸುಗುಟ್ಟುವಿಕೆಯನ್ನು ನೆನಪಿಗೆ ತರುತ್ತಿತ್ತು. ಅವನನ್ನು ಕಂಡು ಬೆದರಿ, ಹೇಗೆ ಎಚ್ಚರಿಸುವುದು ಎಂದು ಚಿಂತಿಸಿದರು. ಆನಂತರ ಅವನು ಎಚ್ಚರಗೊಂಡರೆ ತೃಪ್ತಿಪಡಿಸಲೆಂದು ವಿವಿಧ ಪ್ರಾಣಿಗಳ ದೊಡ್ಡ ಮಾಂಸದ ರಾಶಿಯನ್ನು ತಂದು ಸುರುವಿದರು, ಜೊತೆಗೆ ಅನ್ನವನ್ನು ಬೆಟ್ಟದಂತೆ ಸುರಿದು, ನಾನಾ ಬಗೆಯ ಮದ್ಯಗಳನ್ನಿಟ್ಟರು. ಆನಂತರ ''ಕುಂಭಕರ್ಣ ಮಹಾದೈತ್ಯೇಂದರಿಗೆ ಜಯವಾಗಲಿ'' ಎಂದು ಕೂಗಿ ಎಚ್ಚರಿಸಲು ಪ್ರಯತ್ನಿಸಿದರು. ಎಲ್ಲಾ ಒಟ್ಟಾಗಿ ಸೇರಿ ಕಿರುಚಿದರು. ಆದರೆ ರಾಕ್ಷಸನು ಮೇಲೇಳಲಿಲ್ಲ. ಅವನ ಕೈಕಾಲುಗಳನ್ನು ಹಿಡಿದು ಅಲುಗಾಡಿಸಿದರು, ಉಹ್ಞೂ ಇಲ್ಲ ಭಟರು ಸೇರಿ ಒಟ್ಟಾಗಿ ಶಂಖಗಳನ್ನೂ ದಿ ಜಾಗಟೆಗಳನ್ನು ಬಾರಿಸಿ ಭೇರಿಗಳನ್ನು ಮೊಳಗಿಸಿ ದೊಡ್ಡ ಸದ್ದು ಮಾಡಿದರು. ಆ ಕೋಲಾಹಲದ ದನಿ ಕೇಳಿ ಹಕ್ಕಿಗಳು ಬೆದರಿದುವೇ ಹೊರತು ರಕ್ಕಸನು ನಿದ್ದೆ ತಿಳಿದೇಳಲಿಲ್ಲ. ಆ ಶಬ್ದವು ಆಗಸವನ್ನೆಲ್ಲ ವ್ಯಾಪಿಸಿ ಅಷ್ಟದಿಗ್ಗಜಗಳ ಕಿವಿಗಳನ್ನು ತಿವಿಯಿತು; ಮೃಗಗಳು ಬೆದರಿದುವು. ಆಗ ಮುಸಲ ಮುದ್ಗರ ಪಿಡಿವಾಳ ತೋಮರಗಳಿಂದ ಹೊಡೆದು, ಹೊಸೆದಾಗಿ ಹರಿತಗೊಳಿಸಿದ ಶೂಲ ಪರಶು ಖಡ್ಗಗಳಿಂದ ತಿವಿದರು. ಇಷ್ಟಾದರೂ ದೈತ್ಯನ ನಿದ್ದೆ ತಿಳಿಯದಾಯಿತು. ಆಗ ಆನೆಗಳನ್ನು ಅಂಕುಶದಿಂದ ತಿವಿದು, ಕುದುರೆಗಳಿಗೆ ಹೊಡೆದು, ಕತ್ತೆ ಒಂಟೆಗಳಿಗೆ ದೊಣ್ಣೆಗಳಿಂದ ಪ್ರಹರಿಸಿ ಕೂಗಿಸಿದರು. ಹತ್ತು ಸಾವಿರ ಭೇರಿಗಳನ್ನು ಒಟ್ಟಿಗೇ ಬಾರಿಸಿದರು, ಎಲ್ಲರೂ ಒಟ್ಟಿಗೆ ಸೇರಿ ಬೊಬ್ಬಿಟ್ಟರು. ರಾಕ್ಷಸನ ಕೈಕಾಲುಗಳನ್ನು ಬಂಧಿಸಿ ಹಗ್ಗಗಳ ಮತ್ತೊಂದು ತುದಿಯನ್ನು ಆನೆಗಳಿಗೆ ಕಟ್ಟಿ ಎಳೆಸಿದರೂ ಪ್ರಯೋಜನವಾಗಲಿಲ್ಲ. ಯಾವ ಪ್ರಯತ್ನಗಳನ್ನು ಮಾಡಿದರೂ ದಾನವನಿಗೆ ಎಚ್ಚರಾಗದಿರುವಷ್ಟು ಶಾಪವು ಅವನನ್ನು ನಿದ್ರೆಗೆ ಒಳಪಡಿಸಿತ್ತು. ಆ ಬಳಿಕ ಸಾವಿರ ಆನೆಗಳನ್ನು ತಂದು ಅವನ ಮೈಮೇಲೆ ಓಡಾಡಿಸಿದಾಗ ಅವನಿಗೆ ಯಾರೋ ತನ್ನ ಮೈಯನ್ನು ಮುಟ್ಟುವ ಅನುಭವವಾಗಿ -ಭೀಕರವಾಗಿ ಆಕಳಿಸಲು ನೆರೆದಿದ್ದ ದೈತ್ಯಸಮೂಹ ಹೆದರಿ ಕಂಗೆಟ್ಟಿತು. ಆನಂತರ ದೈತ್ಯನು ತನ್ನ ಮಹಾಬಾಹುಗಳನ್ನು ಕೊಡವಿಕೊಂಡು ಮತ್ತೆ ಆಕಳಿಸಿದ. ಹೀಗೆ ನಿಧಾನವಾಗಿ ನಿದ್ದೆ ತಿಳಿದೆದ್ದ ಕುಂಭಕರ್ಣನಿಗೆ ನೆರೆದಿದ್ದ ರಾಕ್ಷಸರು ತಂದೊಟ್ಟಿದ್ದ ಭೋಜನಸಾಮಗ್ರಿಯನ್ನು ತೋರಿಸಿದರು. ಕುರಿ ಮೇಕೆ ಹಂದಿ ಕೋಣ ಮುಂತಾದ ಪ್ರಾಣಿಗಳ ಮಾಂಸವನ್ನು ತಿಂದು, ಕೊಡಗಟ್ಟಳೆ ರಕ್ತವನ್ನು ಕುಡಿದ ಮೇಲೆ ಅವನ ಸ್ಥಿತಿ ತಹಬಂದಿಗೆ ಬಂದಂತಾಯಿತು. ಆಗ ಕಣ್ಣುಗಳನ್ನರಳಿಸಿ, ''ನನ್ನನ್ನೇಕೆ ಇಷ್ಟು ಬೇಗ ಎಬ್ಬಿಸಿದಿರಿ? ಅಣ್ಣನು ಕ್ಷೇಮದಿಂದಿರುವನೇ? ಇಂದಜಿತುವು ಸುಖವಾಗಿದ್ದಾನೆ ತಾನೇ? ನೀವು ಇಷ್ಟೊಂದು ಜನ ಬಂದಿರುವ ಕಾರಣವೇನು? ಅಡಸಿದ ಆಪತ್ತನ್ನು ನಾನು ನಿವಾರಿಸುತ್ತೇನೆ, ಹೇಳಿ ದೇವತೆಗಳೂ ದಿಕ್ಪಾಲಕರನ್ನೂ ಭೂಮಿಗೆ ತಂದು ನಿಲ್ಲಿಸುತ್ತೇನೆ, ಸಮುದ್ರಗಳ ನೀರನ್ನು ಪೂರ್ತಿ ಹೀರಿಬಿಡುತ್ತೇನೆ, ಕಾಡುಗಿಚ್ಚನ್ನು ನುಂಗಿಬಿಡುತ್ತೇನೆ, ಹರವಿರಿಂಚಿಗಳಾಗಲೀ ಬೇರಾವನಾಗಲೀ ಯುದ್ದದಲ್ಲಿ ನನ್ನನ್ನು ಎದುರಿಸುವವನು ಯಾರಿದ್ದಾರೆ? ಬೇಗ ಹೇಳಿ, ಒದಗಿರುವ ಆಪತ್ತಾದರೂ ಯಾವುದು?'' ಎಂದು ಬೆಸಗೊಂಡ. ಆಗ ಬಂದಿದ್ದ ದಾನವರು ಕೈಕಟ್ಟಿಕೊಂಡು ಬಾಗಿ, 'ಮಹಾಪ್ರಭುಗಳೇ, ನಮಗೆ ದೇವತೆಗಳಿಂದ ಎಂದಿಗೂ ವಿಪತ್ತು ಒದಗಲಾರದು, ಆದರೆ ಈಗ ಮನುಷ್ಯನೊಬ್ಬನಿಂದ ನಮ್ಮ ಸಂಕಟ ಆರಂಭವಾಗಿದೆ. ವಾನರಸೈನ್ಯ ವು ಲಂಕೆಯನ್ನು ಸುತ್ತುಗಟ್ಟಿದೆ. ರಾವಣ ಮಹಾಪಭುಗಳು ಸೀತೆಯನ್ನು ಕರೆದು ತಂದುದರಿಂದ ಕು ಕೋಧಗೊಂಡಿದ್ದಾನೆ. ಕಪಿಸೈನ್ಯವು ನಮ್ಮ ಕಡೆಯ ಧೂಮಾಕ್ಷ ಅಕಂಪನ ಪ್ರಹಸ್ತ ಮುಂತಾದ ವೀರಭಟರನ್ನು ಸು ಹಾಕಿದ್ದಾರೆ. ಕೊನೆಗೆ ಮಹಾ ಕೋಪದಿಂದ ದೈತ್ಯೇಶ್ವರರೇ ಯುದ್ಧಕ್ಕೆ ಹೋಗಲು ರಾಮನ ಅಸ್ತಗಳನ್ನೆ ದುರಿಸಲಾರದೆ ಜೀವಮಾತ್ರವನ್ನು ''ಮನೆಗೆ ವಾಪಸಾಗಿದ್ದಾರೆ. ನ ನುದೇವತೆಗಂದೆ ಪೂಜಿತನಾಗಿ 'ದಿಕ್ಪಾಲಕರನ್ನು ತನ್ನ ಹತೋಟಿಯಲ್ಲಿರಿಸಿಕೊಂಡು ಮೂರು ಲೋಕಗಳಲ್ಲಿಯೂ ಮಹಾ ಪರಾಕ್ರಮಿಯೆಂದು ಹೆಸರಾದ ರಾವಣೇಶ್ವರರು ಈಗ ಹುಲುಮನುಜನೊಬ್ಬನ ಏಟಿನಿಂದ ಮೂರ್ಛಿತರಾಗಿ, ಕೊನೆಗೆ ಅವನ ಕೃಪೆಗೊಳಗಾಗಿ ಜೀವವನ್ನುಳಿಸಿಕೊಂಡು ಬಂದಿದ್ದಾರೆ'' ಎಂದು ನಡುಗುತ್ತ ಇದ್ದ ವಿಷಯವನ್ನು ಅರುಹಿಸಿದರು.

ಮುಂದುವರೆಯುವುದು


ವಿಶ್ವಪ್ರಸಿದ್ಧ ಭೌತವಿಜ್ಞಾನಿ, ಭಾರತರತ್ನ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತರು ಸರ್ ಸಿ ವಿ ರಾಮನ್ ರವರ 138 ನೇ ವರ್ಷದ ಜನ್ಮಜಯಂತಿ

ವಿಶ್ವಪ್ರಸಿದ್ಧ ಭೌತವಿಜ್ಞಾನಿ ಸರ್ ಸಿವಿ ರಾಮನ್ ರವರು 1888 ನವಂಬರ್ 07 ರಂದು ಜನಿಸಿ,ತಂದೆ ತಾಯಿಗಳಿಂದ ಉತ್ತಮ ಸಂಸ್ಕಾರ,ಶಿಸ್ತು,ಸನ್ಮಾರ್ಗ ಜೊತೆಗೆ ಗುರುಹಿರಿಯರಿಂದ ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು, ಒಳ್ಳೆಯ ವಾತಾವರಣ ಮತ್ತು ಉತ್ತಮ ಪರಿಸರದಲ್ಲಿ ಬೆಳೆದು ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ವಿಸ್ಮಯ ಮೂಡಿಸಿದರು.

ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ವಿಜ್ಞಾನ ವಿಷಯಗಳ ಬಗ್ಗೆ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸುತ್ತಾ ಬೆಳಕು ಮತ್ತು ಕ್ಷಕಿರಣಗಳನ್ನು ಕುರಿತು ಹೆಚ್ಚಿನ ಸಂಶೋಧನೆ ನಡೆಸಿದರು. ಇವರ ಅನನ್ಯವಾದ ವೈಜ್ಞಾನಿಕ ಸಂಶೋಧನೆಗಳಿಗೆ ವಿಶ್ವಮಾನ್ಯತೆ ಪಡೆದು ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ದೊರೆಯಿತು. ನಂತರ ಭಾರತೀಯ ವಿಜ್ಞಾನ ಸಂಸ್ಥೆಗೆ ನಿರ್ದೇಶಕರಾಗಿ ನೇಮಕವಾದರು.

ಭೌತಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಮಹತ್ವಪೂರ್ಣ ಕೃತಿಗಳನ್ನು ಬರೆದರು. ಬೆಂಗಳೂರಿನಲ್ಲಿ ರಾಮನ್ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿದರು. ಅನೇಕ ಪ್ರತಿಷ್ಠಿತ ಪ್ರಶಸ್ತಿಗಳೊಂದಿಗೆ ಭಾರತ ಸರ್ಕಾರವೂ ಕೂಡ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಇವರು ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ ಹಾಗೂ ಒಂದು ಮೈಲಿಗಲ್ಲು.

ಸರ್ ಸಿ ವಿ ರಾಮನ್ ಅವರು 1970 ನವಂಬರ್ 21 ರಂದು ಇಹಲೋಕ ಯಾತ್ರೆಯನ್ನು ಮುಗಿಸಿ ಚಿರಸ್ಮರಣೀಯರಾದರು ಹಾಗೂ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ಅಮರರಾದರು ಅದರಲ್ಲೂ ಯುವ ವಿಜ್ಞಾನಿಗಳಿಗೆ ಸ್ಫೂರ್ತಿದಾಯಕರಾದರು. ಇಂತಹ ಮಹನೀಯರನ್ನು ಸ್ಮರಿಸಿ, ನೆನೆದು ಅವರ



ಆತ್ಮಕ್ಕೆ ಶಾಂತಿ ಕೋರುತ್ತಾ ಇಂದು ಅವರ 138 ನೇ ವರ್ಷದ ಜನ್ಮದಿನವನ್ನು ಆಚರಿಸುವುದು ನಮ್ಮ-ನಿಮ್ಮೆಲ್ಲರ ಹಾಗೂ ಅದರಲ್ಲೂ ವಿಜ್ಞಾನ ಕ್ಷೇತ್ರದಲ್ಲಿ ಇರುವವರ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿ.

ಮೊಡವೆಗೆ ಚಿಕಿತ್ಸೆಯಿಂದ ಹಿಡಿದು ವಯಸ್ಸಾಗುವಿಕೆ ಚಿಹ್ನೆಗಳನ್ನು ತಗ್ಗಿಸುತ್ತೆ ಅರಿಶಿನದ ಎಣ್ಣೆ

ಭಾರತೀಯ ಮನೆಗಳಲ್ಲಿ ಕಡ್ಡಾಯವಾಗಿ ಅರಿಶಿನ ಇದ್ದೇ ಇರುತ್ತದೆ. ದೇಶದ ಸಂಸ್ಕೃತಿಯಲ್ಲಿ ಅರಿಶಿನವು ವಿಶೇಷ ಸ್ಥಾನ ಹೊಂದಿದೆ. ಆರೋಗ್ಯ ಪ್ರಯೋಜನಗಳು ನಿಜವಾಗಿಯು ಅಪಾರವಾಗಿದೆ. ಅರಿಶಿನವು ಕೇವಲ ಆರೋಗ್ಯದ ವಿಷಯದಲ್ಲಷ್ಟೇ ಅಲ್ಲದೆ, ತ್ವಚೆಯ ಆರೈಕೆ ಹಾಗೂ ಸೌಂದರ್ಯವರ್ಧನೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಅರಿಶಿನ ಗಿಡದ ಬೇರುಗಳಿಂದ ತೆಗೆಯಲಾದ ಸಾರಭೂತ ತೈಲವು ಅತ್ಯಂತ ಪ್ರಯೋಜನಕಾರಿ ಎಂದು ಸೌಂದರ್ಯ ತಜ್ಞರು ಹೇಳುತ್ತಾರೆ. ಅರಿಶಿನದ ಸಾರಭೂತ ತೈಲ ಪ್ರಯೋಜನಗಳೇನು? ನಿಮ್ಮ ಸೌಂದರ್ಯ ದಿನಚರಿಯಲ್ಲಿ ಈ ಎಣ್ಣೆಯನ್ನು ಹೇಗೆ ಸೇರಿಸಿಕೊಳ್ಳಬಹುದು ಎಂಬುದನ್ನು ವಿವರವಾಗಿ ಅರಿತುಕೊಳ್ಳೋಣ. ಕೆಲವೊಮ್ಮೆ ತ್ವಚೆಯು ಮಂದವಾಗಿ ಹಾಗೂ ಜೀವಕಳೆ ಇಲ್ಲದಂತೆ ಕಾಣಬಹುದು. ಇಂತಹ ಸಂದರ್ಭಗಳಲ್ಲಿ ಒಂದೂವರೆ ಟೀಸ್ಪೂನ್ ಆಲಿವ್ ಎಣ್ಣೆಗೆ ಒಂದು ಹನಿ ಅರಿಶಿನದ ಸಾರಭೂತ ತೈಲವನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.

ಈ ಮಿಶ್ರಣವನ್ನು ನಿಮ್ಮ ತ್ವಚೆಯ ಮೇಲೆ ಹಚ್ಚಿ ನಿಧಾನವಾಗಿ ಮಸಾಜ್ ಮಾಡಲು ತಜ್ಞರು ಸಲಹೆ ನೀಡುತ್ತಾರೆ. ಪ್ರತಿದಿನ ರಾತ್ರಿ, ಮಲಗುವ ಮುನ್ನ ಹೀಗೆ ಮಾಡುವುದರಿಂದ ಬಳಲಿದಂತೆ ಕಾಣುವ ತ್ವಚೆಗೆ ಮತ್ತೆ ತಾಜಾತನ ನೀಡಲು ಸಹಾಯವಾಗುತ್ತದೆ. ಚರ್ಮದಲ್ಲಿ ಸೀಬಮ್ (ನೈಸರ್ಗಿಕ ಎಣ್ಣೆ) ಉತ್ಪಾದನೆ ಹೆಚ್ಚಾದಾಗ ತ್ವಚೆಯು ಅತಿಯಾಗಿ ಎಣ್ಣೆಯುಕ್ತವಾಗುತ್ತದೆ. ಇದು ಮುಖದ ಮೇಲೆ ಮೊಡವೆಗಳು ಹಾಗೂ ಕಲೆಗಳು ಉಂಟಾಗಲು ಕಾರಣವಾಗುತ್ತದೆ. ಅರಿಶಿನದ ಎಣ್ಣೆಯು ಸೀಬಮ್ ಉತ್ಪಾದನೆ ನಿಯಂತ್ರಿಸುವಲ್ಲಿ, ಹೆಚ್ಚುವರಿ ಎಣ್ಣೆಯನ್ನು ತೆಗೆದುಹಾಕುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮೊಡವೆಗಳನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ.

ಅರಿಶಿನದ ಬೇರುಗಳಿಂದ ತೆಗೆಯಲಾದ ಈ ಎಣ್ಣೆಯಲ್ಲಿ ಸೂಕ್ಷ್ಮಜೀವಿ ವಿರೋಧಿ ಹಾಗೂ ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳು, ಆ್ಯಂಟಿಆಕ್ಸಿಡೆಂಟ್‌ಗಳು ಸಮೃದ್ಧವಾಗಿದೆ. ಇವೆಲ್ಲವೂ ಮೊಡವೆಗಳು ಹಾಗೂ ಕಲೆಗಳನ್ನು ಹೋಗಲಾಡಿಸಲು ತುಂಬಾ ಸಹಾಯವಾಗುತ್ತದೆ. ಅರಿಶಿನದ ಎಣ್ಣೆಯಲ್ಲಿರುವ ಆ್ಯಂಟಿಆಕ್ಸಿಡೆಂಟ್



ಗಳು ತ್ವಚೆಯ ಆರೋಗ್ಯಕ್ಕೆ ಬಹಳ ಪ್ರಯೋಜನಕಾರಿಯಾಗಿದೆ. ಇದನ್ನು ಬಳಸಲು ನಾಲ್ಕು ಟೀಸ್ಪೂನ್ ಬಾದಾಮಿ ಎಣ್ಣೆಗೆ ನಾಲ್ಕು ಹನಿ ಅರಿಶಿನದ ಸಾರಭೂತ ತೈಲ ಮಿಶ್ರಣ ಮಾಡಬೇಕಾಗುತ್ತದೆ.

ಈ ಮಿಶ್ರಣವನ್ನು ನುಣ್ಣನೆಯ ಗೆರೆಗಳು ಅಥವಾ ಸುಕ್ಕುಗಳು ಇರುವ ಕಡೆಗಳಲ್ಲಿ ಹಚ್ಚಿ ನಿಧಾನವಾಗಿ ಮಸಾಜ್ ಮಾಡಬೇಕಾಗುತ್ತದೆ. ಪ್ರತಿದಿನ ರಾತ್ರಿ ಮಲಗುವ ಮುನ್ನ ಈ ಕ್ರಮವನ್ನು ಅನುಸರಿಸುವುದರಿಂದ ಉತ್ತಮ ಫಲಿತಾಂಶಗಳನ್ನು ಪಡೆಯಬಹುದು. ಅರಿಶಿನದ ಎಣ್ಣೆಯು ಕೇವಲ ತ್ವಚೆಗೆ ಮಾತ್ರವಲ್ಲದೆ, ಕೂದಲಿಗೆ ಗಮನಾರ್ಹ ಪ್ರಯೋಜನಗಳನ್ನು ನೀಡುತ್ತದೆ.

ತಲೆಹೊಟ್ಟು ಬರದಂತೆ ತಡೆಯಲು ಹಾಗೂ ಕೂದಲು ಉದುರುವಿಕೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದಲ್ಲದೆ, ಇದರಲ್ಲಿರುವ ಶಿಲೀಂಧ್ರ ವಿರೋಧಿ ಗುಣಲಕ್ಷಣಗಳು ನೆತ್ತಿಯನ್ನು ವಿವಿಧ ಸೋಂಕುಗಳಿಂದ ರಕ್ಷಿಸುತ್ತವೆ. ಅರಿಶಿನ ಎಣ್ಣೆಯು ಅನೇಕ ಪ್ರಯೋಜನಗಳನ್ನು ಹೊಂದಿದ್ದರೂ, ಅದನ್ನು ಬಳಸುವ ಮೊದಲು ಕೆಲವು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದೆ ಎಂದು ಸೌಂದರ್ಯ ತಜ್ಞರು ಒತ್ತಿಹೇಳುತ್ತಾರೆ.

ಅರಿಶಿನದ ಎಣ್ಣೆಯನ್ನು ನೇರವಾಗಿ ಚರ್ಮದ ಮೇಲೆ ಅಥವಾ ಕೂದಲಿಗೆ ಹಚ್ಚಬಾರದು. ಬದಲಾಗಿ ಇದನ್ನು ತೆಂಗಿನ ಎಣ್ಣೆ, ಬಾದಾಮಿ ಎಣ್ಣೆ ಅಥವಾ ಜೊಜೊಬಾ ಎಣ್ಣೆಯಂತಹ ಬೇರೆ ಯಾವುದಾದರೂ ಎಣ್ಣೆಯೊಂದಿಗೆ ಬೆರೆಸಿ ಬಳಸಬೇಕು. ಇದನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಮಾತ್ರ ಬಳಕೆ ಮಾಡಬೇಕಾಗುತ್ತದೆ. ಈ ಎಣ್ಣೆಯನ್ನು ಉಪಯೋಗಿಸಿದ ಬಳಿಕ ಚರ್ಮವು ಹೆಚ್ಚು ಸೂಕ್ಷ್ಮವಾಗಬಹುದು, ನೀವು ಬಿಸಿಲಿನಲ್ಲಿ ಹೊರಗೆ ಹೋಗುವುದಾದರೆ ಸನ್‌ಸ್ಕ್ರೀನ್ ಹಚ್ಚಿಕೊಳ್ಳುವುದು ಉತ್ತಮ.

ವೈರಲ್ ಗ್ಯಾಸ್ಟ್ರೋಎಂಟರೈಟಿಸ್‌ನ ಲಕ್ಷಣಗಳೇನು? ಯಾರಿಗೆ ಹೆಚ್ಚು ಅಪಾಯ ತಡೆಗಟ್ಟುವುದು ಹೇಗೆ?

ವೈರಲ್ ಗ್ಯಾಸ್ಟ್ರೋಎಂಟರೈಟಿಸ್ ಎಂಬುದು ಹೊಟ್ಟೆ ಹಾಗೂ ಕರುಳಿನ ಸೋಂಕು. ಇದನ್ನು 'ಸ್ಟೊಮಕ್ ಫ್ಲೂ' ಎಂದು ಕರೆಯಲಾಗುತ್ತದೆ. ಈ ಸ್ಥಿತಿಯಲ್ಲಿ ವಾಕರಿಕೆ, ವಾಂತಿ, ಭೇದಿ ಹಾಗೂ ಹೊಟ್ಟೆನೋವು ಹಾಗೂ ಸೆಳೆತದಂತಹ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ನೊರೋವೈರಸ್, ರೋಟಾವೈರಸ್‌ನಂತಹ ವೈರಸ್‌ಗಳಿಂದ ಉಂಟಾಗುತ್ತದೆ. ಬಹಿತೇ ಸಂದರ್ಭದಲ್ಲಿ ಸಾಕಷ್ಟು ದ್ರವಾಹಾರ ಸೇವನೆ, ವಿಶ್ರಾಂತಿಯಿಂದ ವೈರಲ್ ಗ್ಯಾಸ್ಟ್ರೋಎಂಟರೈಟಿಸ್ ತಾನಾಗಿಯೇ ಗುಣವಾಗುತ್ತದೆ. ಕೆಲವು ಲಕ್ಷಣಗಳು ಕಾಯಿಲೆಯ ತೀವ್ರತೆ ಹಾಗೂ ಬೇರೆ ಯಾವುದಾದರೂ ಗಂಭೀರ ಆರೋಗ್ಯ ಸಮಸ್ಯೆ ಸೂಚಿಸಬಹುದು. ತೊಡಕುಗಳನ್ನು ತಡೆಗಟ್ಟಲು, ಸಮಯಕ್ಕೆ ಸರಿಯಾಗಿ ವೈದ್ಯಕೀಯ ಸಲಹೆ ಪಡೆಯಬೇಕಾಗುತ್ತದೆ. ಸ್ಟೊಮಕ್ ಫ್ಲೂ ಕಾಣಿಸಿಕೊಂಡರೆ ಆರಂಭಿಕ ಲಕ್ಷಣಗಳನ್ನು ಗುರುತಿಸುವುದು ಬಹಳ ಮುಖ್ಯವಾಗುತ್ತದೆ.

ಮುಂಬೈನ ಸೈಫೀ ಆಸ್ಪತ್ರೆಯ ಕನ್ಸಲ್ಟೆಂಟ್ ಹೆಪಟಾಲಜಿಸ್ಟ್, ಲಿವರ್ ಟ್ರಾನ್ಸ್‌ಪ್ಲಾಂಟ್ ವೈದ್ಯ ಡಾ. ಚೇತನ್ ಕಲಾಲ್ ಅವರು ಮಾತನಾಡಿ, ವೈರಲ್ ಗ್ಯಾಸ್ಟ್ರೋಎಂಟರೈಟಿಸ್ ಸಾಮಾನ್ಯವಾಗಿ ಸೋಂಕಿತ ವ್ಯಕ್ತಿಯ ಸಂಪರ್ಕದಿಂದ ಹಾಗೂ ಕಲುಷಿತ ಆಹಾರ, ನೀರನ್ನು ಸೇವಿಸುವುದರಿಂದ ಹರಡುತ್ತದೆ. ಸಾಮಾನ್ಯವಾಗಿ ಆರೋಗ್ಯವಾಗಿದ್ದರೆ, ಯಾವುದೇ ಗಂಭೀರ ತೊಡಕುಗಳಿಲ್ಲದೆ ನೀವು ಚೇತರಿಸಿಕೊಳ್ಳಬಹುದು. ಚಿಕ್ಕ ಮಕ್ಕಳು, ವೃದ್ಧರು ಮತ್ತು ರೋಗನಿರೋಧಕ ಶಕ್ತಿ ದುರ್ಬಲವಾಗಿರುವ ವ್ಯಕ್ತಿಗಳಿಗೆ ವೈರಲ್ ಗ್ಯಾಸ್ಟ್ರೋಎಂಟರೈಟಿಸ್ ಜೀವಕ್ಕೆ ಅಪಾಯಕಾರಿಯಾಗಬಹುದು.

ವೈರಲ್ ಗ್ಯಾಸ್ಟ್ರೋಎಂಟರೈಟಿಸ್‌ಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲದಿರುವುದರಿಂದ ಇದನ್ನು ತಡೆಗಟ್ಟುವುದು ಅತ್ಯಂತ ಮುಖ್ಯವಾದ ಕ್ರಮವಾಗಿದೆ. ವೈರಲ್ ಗ್ಯಾಸ್ಟ್ರೋಎಂಟರೈಟಿಸ್‌ನ ಸಂದರ್ಭದಲ್ಲಿ ನಿರ್ಜಲೀಕರಣವು ಗಂಭೀರ ಸಮಸ್ಯೆಯಾಗಬಹುದು. ಪದೇ ಪದೇ ಭೇದಿ, ವಾಂತಿಯಾಗುವುದರಿಂದ ದೇಹದಲ್ಲಿ ದ್ರವಗಳು ಹಾಗೂ ಎಲೆಕ್ಟ್ರೋಲೈಟ್‌ಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗಬಹುದು. ನಿರ್ಜಲೀಕರಣದ ಸಾಮಾನ್ಯ ಲಕ್ಷಣಗಳೆಂದರೆ ಬಾಯಿ ಒಣಗುವುದು, ತಲೆತಿರುಗುವಿಕೆ, ಮೂತ್ರ ವಿಸರ್ಜನೆ ಕಡಿಮೆಯಾಗುವುದು ಹಾಗೂ ಕಣ್ಣುಗಳು ಒಳಗೆ ಕುಸಿದಂತೆ ಕಾಣುವುದು.

ಮಕ್ಕಳಲ್ಲಿ ಅಳುವಾಗ ಕಣ್ಣೀರು ಬಾರದಿರುವುದು, ಅಸಾಮಾನ್ಯವಾದ, ಅತಿಯಾದ ಸುಸ್ತು, ನಿಶಕ್ತಿ ಕಂಡುಬರುವುದು ನಿರ್ಜಲೀಕರಣದ ಲಕ್ಷಣಗಳಾಗಿರಬಹುದು. ಆರಂಭದಲ್ಲಿ ಈ ಲಕ್ಷಣಗಳು ಕಂಡುಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. ಮಲದಲ್ಲಿ ರಕ್ತ ಅಥವಾ ಲೋಳೆಯ ಅಂಶ ಕಂಡುಬರುವುದು ಕೂಡ ವೈದ್ಯಕೀಯ ತಪಾಸಣೆಯ ಅಗತ್ಯವನ್ನು ಸೂಚಿಸುವ ಲಕ್ಷಣವಾಗಿದೆ. ಗ್ಯಾಸ್ಟ್ರೋಎಂಟರೈಟಿಸ್‌ನಲ್ಲಿ ಭೇದಿ ಸಾಮಾನ್ಯವಾಗಿದ್ದರೂ ಮಲದಲ್ಲಿ ರಕ್ತ ಕಂಡುಬಂದರೆ ಅದು ಬ್ಯಾಕ್ಟೀರಿಯಾದ ಸೋಂಕು ಅಥವಾ ಕರುಳಿಗೆ ಸಂಬಂಧಿಸಿದ ಬೇರೆ ಯಾವುದಾದರೂ ಸಮಸ್ಯೆಯನ್ನು ಸೂಚಿಸಬಹುದು. ಇದಲ್ಲದೆ, ಹೆಚ್ಚಿನ ಜ್ವರವು 48ರಿಂದ 72 ಗಂಟೆಗಳಿಗಿಂತ ಹೆಚ್ಚು ಕಾಲ ಮುಂದುವರಿದರೆ, ನೀವು ವೈದ್ಯರನ್ನು ಸಂಪರ್ಕಿಸಬೇಕು.


ಏಕೆಂದರೆ ಇದು ಬ್ಯಾಕ್ಟೀರಿಯಾದ ಸೋಂಕು ಅಥವಾ ಬೇರೆ ಯಾವುದಾದರೂ ಆರೋಗ್ಯ ಸಮಸ್ಯೆಯ ಸಂಕೇತವಾಗಿರಬಹುದು. ನಿರಂತರ ವಾಂತಿ ವಿಶೇಷವಾಗಿ ವ್ಯಕ್ತಿಯು ದ್ರವಾಹಾರವನ್ನು ಹೊಟ್ಟೆಯಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗದಿದ್ದಾಗ ಇದರ ಬಗ್ಗೆ ಗಂಭೀರ ಗಮನ ಹರಿಸಬೇಕು. ವಾಂತಿ ನಿಂತ ನಂತರವೂ, ವಿಶೇಷವಾಗಿ ಚಿಕ್ಕ ಮಕ್ಕಳು ಮತ್ತು ವೃದ್ಧರಲ್ಲಿ ದೇಹದಲ್ಲಿ ನೀರಿನಂಶವು ಬಹಳ ವೇಗವಾಗಿ ಕಡಿಮೆಯಾಗಬಹುದು. ಹೊಟ್ಟೆಯಲ್ಲಿ ತೀವ್ರವಾದ ನೋವು ಕಾಣಿಸುತ್ತದೆ. ನಿಶಕ್ತಿ ಕಂಡುಬರುವುದು ನಿರ್ಜಲೀಕರಣದ ಲಕ್ಷಣಗಳಾಗಿರಬಹುದು. ಆರಂಭದಲ್ಲಿ ಈ ಲಕ್ಷಣಗಳು ಕಂಡುಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. ನಿರ್ದಿಷ್ಟವಾಗಿ ಒಂದು ಭಾಗದಲ್ಲಿ ಕೇಂದ್ರೀಕೃತವಾಗಿದ್ದರೆ ಅಥವಾ ಕಾಲಕ್ರಮೇಣ ಹೆಚ್ಚಾಗುತ್ತಿದ್ದರೆ, ಅದನ್ನು ಕೇವಲ ಸಾಮಾನ್ಯ ಹೊಟ್ಟೆನೋವು ಅಥವಾ ಸೆಳೆತ ಎಂದು ನಿರ್ಲಕ್ಷಿಸಬಾರದು.

ಆಹಾರ ಧಾನ್ಯ ಸಾಗಣೆಯಲ್ಲಿ ಬಾರಿ ಗೋಲಮಾಲ್ ಶಂಕೆ... ಚುರುಕಗೊಂಡ ತನಿಖೆ

ಕಾಣದಂತೆ ಮಾಯವಾಯಿತೇ ಅಕ್ಕಿ-ಗೋಧಿ..? ಯಾವ್ ಗೋದಾಮ್ ಸೇರಿಕೊಂಡಿತ್ತು....?

• ಇಲಿಯಾಸ್ ಪಟೇಲ್. ಬಳಗಾನೂರ ರಾಜ್ಯ ವಿಶೇಷ ವರದಿಗಾರರು

• ಉದಯವಾಹಿನಿ, ಯಾದಗಿರಿ:


ಉದಯವಾಹಿನಿ ಚಿತ್ರ

ಸರ್ಕಾರಿ ವಸತಿ ಶಾಲೆಗಳಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಒದಗಿಸಬೇಕೆಂಬ ಉದ್ದೇಶದಿಂದ ಸರ್ಕಾರ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಆದರೆ, ಅದೇ ವಿದ್ಯಾರ್ಥಿಗಳ ಊಟಕ್ಕಾಗಿ ಬಿಡುಗಡೆಯಾಗುವ ಪಡಿತರ ಧಾನ್ಯಗಳ ಸಾಗಣೆಯಲ್ಲೇ ಅನುಮಾನಾಸ್ಪದ ಬೆಳವಣಿಗೆಗಳು ಕಂಡುಬಂದರೆ ಹೊಣೆಗಾರರು ಯಾರು? ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಯಾದಗಿರಿ ಜಿಲ್ಲೆಯ ಕೆಂಭಾವಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಪೂರೈಕೆಯಾಗಬೇಕಿದ್ದ ಅಕ್ಕಿ ಮತ್ತು ಗೋಧಿ ಸಾಗಣೆಯಲ್ಲಿ ಕಂಡುಬಂದಿರುವ ವ್ಯತ್ಯಾಸಗಳು ಹಲವು ಅನುಮಾನಗಳಿಗೆ ಕಾರಣವಾಗಿವೆ. ಇದು ಕೇವಲ ಸಾಗಣೆ ವಿಳಂಬದ ಪ್ರಕರಣವೇ ಅಥವಾ ಇದರ ಹಿಂದೆ ವ್ಯವಸ್ಥಿತ ಲೋಪ ಅಡಗಿದೆಯೇ ಎಂಬುದನ್ನು ತನಿಖೆಯಿಂದಲೇ ಸ್ಪಷ್ಟಪಡಿಸಬೇಕಿದೆ.ಕೇವಲ 30 ಕಿಲೋಮೀಟರ್ ಅಂತರವಿರುವ ಎರಡು ಸ್ಥಳಗಳ ನಡುವೆ ಧಾನ್ಯ ಸಾಗಣೆಗೆ ಇಷ್ಟೊಂದು ವಿಳಂಬವಾಗಿದ್ದೇಕೆ? ನಿಗದಿತ ಸಮಯದಲ್ಲಿ ಧಾನ್ಯಗಳು ಶಾಲೆ ತಲುಪದಿರಲು ಕಾರಣವೇನು? ಸಾಗಣೆ ಮಾರ್ಗದಲ್ಲಿ ಏನಾದರೂ ಬದಲಾವಣೆ ನಡೆದಿದೆಯೇ? ಎಂಬ ಪ್ರಶ್ನೆಗಳು ಎದ್ದಿವೆ.

ದಾಖಲೆಯಲ್ಲೊಂದು ವಾಹನ, ವಾಸ್ತವದಲ್ಲಿ ಮತ್ತೊಂದು ವಾಹನ!

ಈ ಪ್ರಕರಣದಲ್ಲಿ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ಅಂಶವೆಂದರೆ ವಾಹನಗಳ ನೋಂದಣಿ ಸಂಖ್ಯೆಯಲ್ಲಿನ ವ್ಯತ್ಯಾಸ. ಗೋದಾಮಿನ ರಸೀದಿಯಲ್ಲಿ ನಮೂದಾಗಿರುವ ಮೂರು ವಾಹನಗಳ ಸಂಖ್ಯೆಗಳು ಮತ್ತು ವಸತಿ ಶಾಲೆಗೆ ಧಾನ್ಯ ತಂದು ಇಳಿಸಿದ ವಾಹನದ ನೋಂದಣಿ ಸಂಖ್ಯೆಯ ನಡುವೆ ಹೊಂದಾಣಿಕೆ ಇಲ್ಲ ಎಂಬ ಆರೋಪ ಕೇಳಿಬಂದಿದೆ.ಹಾಗಾದರೆ, ಗೋದಾಮಿನಿಂದ ಧಾನ್ಯಗಳನ್ನು ಸಾಗಿಸಿದ ವಾಹನಗಳು ಯಾವುವು?ಮಧ್ಯದಲ್ಲಿ ವಾಹನ ಬದಲಾವಣೆಯಾಗಿದ್ದರೆ ಅದಕ್ಕೆ ಅನುಮತಿ ಪಡೆದಿದ್ದರೇ? ವಾಹನ ಬದಲಾವಣೆಗೆ ಸಂಬಂಧಿಸಿದ ದಾಖಲೆಗಳು ಎಲ್ಲಿವೆ ಅಕ್ರಮವಾಗಿ ಮಾರಾಟ ಮಾಡಿ ನಂತರ ಬೇರೆ ವಾಹನದ ಮೂಲಕ ಶಾಲೆಗೆ ತಲುಪಿಸಲಾಗಿದೆಯೇ? ಎಂಬ ಶಂಕೆಗಳೂ ವ್ಯಕ್ತವಾಗಿವೆ.? ಧಾನ್ಯಗಳ ಪ್ರಮಾಣವನ್ನು ಮಧ್ಯಂತರದಲ್ಲಿ ಪರಿಶೀಲಿಸಲಾಗಿದೆಯೇ?

ಈ ಎಲ್ಲಾ ಪ್ರಶ್ನೆಗಳಿಗೆ ಸಂಬಂಧಿಸಿದ ದಾಖಲೆಗಳ ಸಮಗ್ರ ಪರಿಶೀಲನೆ ಅಗತ್ಯವಾಗಿದೆ.

ಆದರೆ, ಈ ಆರೋಪಗಳಿಗೆ ಇನ್ನೂ ಅಧಿಕೃತ ದೃಢೀಕರಣ ದೊರೆತಿಲ್ಲ. ಹೀಗಾಗಿ ಗೋದಾಮಿನ ದಾಖಲೆಗಳು, ವಾಹನಗಳ ಸಂಚಾರದ ವಿವರಗಳು, ತೂಕದ ಚೀಟಿಗಳು, ಶಾಲೆಯ ಸ್ವೀಕೃತಿ ದಾಖಲೆಗಳು , ಸಂಬಂಧಪಟ್ಟವರ ಹೇಳಿಕೆಗಳನ್ನು ಪರಿಶೀಲಿಸಿದಾಗ ಮಾತ್ರ ಸತ್ಯಾಂಶ ಹೊರಬರಲಿದೆ.

ಪೊಲೀಸ್ ಇಲಾಖೆಯ ತಪಾಸಣೆ ಎಲ್ಲಿಗೆ ಹೋಯಿತು?

ಇನ್ನೊಂದು ಪ್ರಮುಖ ವಿಚಾರವೆಂದರೆ, ಸಾರ್ವಜನಿಕ ರಸ್ತೆಗಳಲ್ಲಿ ಸಂಚರಿಸುವ ಸರಕು ಸಾಗಣೆ ವಾಹನಗಳ ಮೇಲೆ ಪೊಲೀಸ್ ಇಲಾಖೆಯ ತಪಾಸಣೆ ಇರುತ್ತದೆ. ಹಾಗಿದ್ದರೆ, ಈ ಸಾಗಣೆ ಪ್ರಕ್ರಿಯೆಯಲ್ಲಿ ವಾಹನಗಳ ಬದಲಾವಣೆ ಅಥವಾ ಅನುಮಾನಾಸ್ಪದ ಚಲನವಲನ ನಡೆದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೇ? ಎಂಬ ಪ್ರಶ್ನೆ ಸಾರ್ವಜನಿಕರಿಂದ ಕೇಳಿಬರುತ್ತಿದೆ. ಪೊಲೀಸರಿಗೆ ಈ ಕುರಿತು ಮಾಹಿತಿ ಲಭ್ಯವಿತ್ತು. ಸ್ಥಳಕ್ಕೆ 112 ವಾಹನ ಹಾಗೂ ಪೊಲೀಸ್ ಸಿಬ್ಬಂದಿ ಬಂದು ಹಾಗೇ ಹೋಗಿದ್ದಾರೆ. ಯಾವುದೇ ಪರಿಶೀಲನೆ ಒಳಪಡಿಸಿರುವುದಿಲ್ಲ ಎಂಬುವುದು ಮೇಲ ನೋಟಕ್ಕೆ ಕಂಡು ಬಂದಿದೆ.

ಪೊಲೀಸರ ನಿರ್ಲಕ್ಷ್ಯದ ಬಗ್ಗೆ ಕೇಳಿಬರುತ್ತಿರುವ ಆರೋಪಗಳಿಗೂ ಅಧಿಕೃತ ಉತ್ತರ ದೊರೆಯಬೇಕಿದೆ. ಸರ್ಕಾರಿ ವಸತಿ ಶಾಲೆಯ ವಿದ್ಯಾರ್ಥಿಗಳ ಆಹಾರದ ಹಕ್ಕು ಮತ್ತು ಸಾರ್ವಜನಿಕ ಹಣದ ಹೊಣೆಗಾರಿಕೆಯ ಪ್ರಶ್ನೆಯಾಗಿದೆ. ತನಿಖೆಯ ವರದಿ ಯಾವಾಗ ಹೊರಬರುತ್ತದೆ? ತಪ್ಪಿತಸ್ಥರು ಯಾರು? ಎಂಬುದನ್ನು ಕಾದು ನೋಡಬೇಕಿದೆ.

ಗೋದಾಮಿನಿಂದ ಹೊರಟದ್ದು ನವೆಂಬರ್ 3ಕ್ಕೆ; ಶಾಲೆ ತಲುಪಿದ್ದು ನವೆಂಬರ್ 4ರ ರಾತ್ರಿ!

ಲಭ್ಯವಿರುವ ದಾಖಲೆಗಳ ಪ್ರಕಾರ, ಸುರಪುರದ ಅಧಿಕೃತ ಗೋದಾಮಿನಿಂದ ಕೆಂಭಾವಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ 150 ಚೀಲ ಅಕ್ಕಿ ಹಾಗೂ 75 ಚೀಲ ಗೋಧಿ ಸಾಗಿಸಲು ನವೆಂಬರ್ 3ರಂದು ಮಧ್ಯಾಹ್ನ 12:35ಕ್ಕೆ ಧಾನ್ಯಗಳನ್ನು ಬಿಡುಗಡೆ ಮಾಡಲಾಗಿದೆ. ಆದರೆ, ಶಾಲೆಗೆ ಧಾನ್ಯಗಳು ತಲುಪಿರುವುದು ನವೆಂಬರ್ 4ರಂದು ರಾತ್ರಿ, ಸುಮಾರು 8 ಗಂಟೆಗೆ ಎನ್ನಲಾಗಿದೆ.

ಧಾನ್ಯ ಸಾಗಣೆಗೆ ಇಷ್ಟೊಂದು ವಿಳಂಬವಾಗಿದ್ದೇಕೆ?

ಲೋಪದೋಷ ಕಂಡುಬಂದರೆ ನಿರ್ದಾಕ್ಷಿಣ್ಯ ಕ್ರಮ

• ಉದಯವಾಹಿನಿ ಗದಗ,:


ಉದಯವಾಹಿನಿ ಚಿತ್ರ

ಸರ್ಕಾರಿ ನೌಕರರಿಗೆ ಸರಕಾರವು ಅನೇಕ ಸವಲತ್ತುಗಳನ್ನು ನೀಡಿದೆ ಅದರಲ್ಲಿ ಉತ್ತಮ ಜೀವನ ಸಾಗಿಸಬಹುದಾಗಿದೆ. ಆದರೆ ಕೆಲ ಅಧಿಕಾರಿಗಳು ಅತಿ ಆಸೆಗಾಗಿ ಭ್ರಷ್ಟಾಚಾರದಲ್ಲಿ ತೊಡಗುತ್ತಿರುವ ಕುರಿತು ದೂರಗಳು ಬಂದಿದ್ದು, ಭ್ರಷ್ಟಾಚಾರ ಸಾಬೀತಾದಲ್ಲಿ ಅಂತಹ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಣ್ಯವಾಗಿ ಕ್ರಮ ವಹಿಸಲಾಗುವುದು ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ತಿಳಿಸಿದರು. ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರತಿಯೊಬ್ಬ ಅಧಿಕಾರಿ, ಸಿಬ್ಬಂದಿಗೆ ಅವರದೇ ಆದಂತಹ ಕಾರ್ಯಗಳನ್ನು ವರ್ಗೀಕರಣ ಮಾಡಿ ಕೊಡಲಾಗಿರುತ್ತದೆ. ಈ ಕಾರ್ಯ ಪರಿಶೀಲನೆಗಾಗಿ ಮೇಲುಸ್ತುವಾರಿಯನ್ನು ನೇಮಿಸಲಾಗಿದ್ದರೂ ಸಹ ಸರಕಾರಿ ಕಾರ್ಯಗಳು ಸುಗಮವಾಗಿ ಸಾಗುತ್ತಿಲ್ಲ, ಸಾರ್ವಜನಿಕರು ಒಂದೇ ಕೆಲಸಕ್ಕಾಗಿ ಪದೇ ಪದೇ ಕಚೇರಿಗೆ ಆಗಮಿಸುತ್ತಾರೆ ಎಂದರೆ ಕಚೇರಿಯಲ್ಲಿ ಕೆಲಸಗಳು ಸುಗಮವಾಗಿ ಸಾಗುತ್ತಿಲ್ಲ ಎಂದರ್ಥವಾಗುತ್ತದೆ ಎಂದರು.

ನಗರವನ್ನು ಸ್ವಚ್ಛವಾಗಿ ಇಡುವದು ಮುಖ್ಯವಾಗಿದೆ. ಗ್ರಾಮ ಮಟ್ಟದಿಂದ ನಗರ ಪ್ರದೇಶಗಳಲ್ಲಿ ಶೌಚಾಲಯಗಳು ಇಲ್ಲದೇ ಇರುವುದು ಕಂಡು ಬಂದಿದ್ದು, ಶೌಚಾಲಯ ನಿರ್ಮಾಣಕ್ಕೆ ಅನುದಾನ ಪಡೆದರೂ ಸಹ ಶೌಚಾಲಯ ನಿರ್ಮಿಸದೆ ಇರುವ ಕುರಿತು ಪರಿಶೀಲಿಸಿ ಕ್ರಮ ಜರುಗಿಸಲಾಗುವುದು. ಜಿಲ್ಲೆಯಲ್ಲಿನ ತಹಶೀಲ್ದಾರ ಕಚೇರಿಗಳ ಆವರಣ ಸ್ವಚ್ಛತೆ, ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಇರುವುದು, ಅರ್ಜಿ ಸ್ವೀಕರಿಸುವ ಸಂಬಂಧ ರೆಜಿಸ್ಟರಗಳು ಇಲ್ಲದೆ ಇರುವುದು ಪರಿಶೀಲನೆಯಲ್ಲಿ ಕಂಡು ಬಂದಿದ್ದು ರೋಣ ತಹಶೀಲ್ದಾರ ಕಚೇರಿಯಲ್ಲಿ 219 ಆಡಿಟ್ ಆಕ್ಷೇಪಣೆಗಳಲ್ಲಿ 20 ಆಕ್ಷೇಪಣೆಗಳಿಗೆ ಮಾತ್ರ ಅನುಪಾಲನಾ ವರದಿ ಸಲ್ಲಿಸಿರುವುದು ಕಂಡು ಬಂದಿರುತ್ತದೆ. ರೋಣ ತಾಲ್ಲೂಕಿನ ಹತ್ತು ಗ್ರಾಮಗಳಲ್ಲಿ ಸ್ಮಶಾನ ಇಲ್ಲದೆ ಇರುವ ವಿಷಯಕ್ಕೆ ಸಂಬಂಧಿಸಿದಂತೆ ವಿವರಣೆ ಪಡೆದುಕೊಂಡರು.

ತಹಶೀಲ್ದಾರ ಕಚೇರಿಯಲ್ಲಿ ಗುರುತಿಸಲಾದ ತಪ್ಪುಗಳು ಕುರಿತು ವಿವರಣೆ ನೀಡಬೇಕು ಇಲ್ಲವಾದಲ್ಲಿ ಅಧಿಕಾರಿಗಳು ತೊಂದರೆಗಿಡಾಗುವುದು ನಿಶ್ಚಿತ ಎಂದು ಎಚ್ಚರಿಕೆ ನೀಡಿದರು.

ಕಾಡು ಹಂದಿ ಹಾಗೂ ಮಂಗಗಳಿಂದ ತೊಗರಿಬೆಳೆ ನಾಶ ಪರಿಹಾರಕ್ಕೆ ಒತ್ತಾಯ

• ಉದಯವಾಹಿನಿ ಚಿಂಚೋಳಿ:


ಉದಯವಾಹಿನಿ ಚಿತ್ರ

ವನ್ಯಜೀವಿಗಳು ಕಾಡು ಹಂದಿ ,ಮಂಗಗಳಿಂದ ತೊಗರಿ ಬೆಳೆ ಸಂಪೂರ್ಣ ನಾಶವಾಗಿದೆ ಪರಿಹಾರ ನೀಡುವಂತೆ ಗುಂಡಪ್ಪ ಖಿತಲಪ್ಪಾ ಗೋಖಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿದ್ದಾರೆ.

ತಾಲ್ಲೂಕಿನ ತುಮಕುಂಟಾ ಗ್ರಾಮದ ಸರ್ವೆ ನಂ.65/2 ವಿಸ್ತೀರ್ಣದ 4.20 ಏಕರೆ ಜಮೀನಿನಲ್ಲಿರುವ ತೊಗರಿಬೆಳೆಯು ಕಾಡು ಹಂದಿ ಹಾಗೂ ಮಂಗಗಳು ಸಂಪೂರ್ಣ ನಾಶಪಡಿಸಿವೆ ಈ ಜಮೀನು ಗುಂಡಪ್ಪ ಖಿತಲಪ್ಪ ಹಾಗೂ ಫಾಳಪ್ಪ ಖಿತಲಪ್ಪಾ ಗೋಖಲೆಗೆ ಸೇರಿದ ಜಮೀನಾಗಿದೆ. ವರ್ಷದ ಮುಂಗಾರು ಬಿತ್ತನೆಯಲ್ಲಿ ಸದರಿ ಜಮೀನಿನಲ್ಲಿ ತೊಗರಿ ಬೆಳೆ ಬೆಳೆದಿದ್ದು,ಫಸಲು ಕೈಗೆ ಬರುವ ಹೊತ್ತಿಗೆ ವನ್ಯಜೀವಿಗಳು ಕಾಡು ಹಂದಿ ಹಾಗೂ ಮಂಗಗಳು ಸಂಪೂಣದ ಬೆಳೆಗಳು ಹಾನಿ ಮಾಡಿ ಅಂದಾಜು 2 ಲಕ್ಷ ರೂಪಾಯಿಗಳವರೆಗೆ ನಷ್ಟವನ್ನುಂಟು ಮಾಡಿರುತ್ತವೆ,ತಾವುಗಳು ಸದರಿ ಜಮೀನನ್ನು ಪರಿಶೀಲಿಸಿ ವರದಿ ತಯ್ಯಾರಿಸಿ ಸರಕಾರದಿಂದ ನಷ್ಟ ಪರಿಹಾರ ನೀಡಬೇಕು ಎಂದು ಕೃಷಿ ಇಲಾಖೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

''ವೋಟ್ ಬಚಾವೋ, ದೇಶ ಬಚಾವೋ'' ಮತಗಳ್ಳತನ ಬಗ್ಗೆ ಜಾಗೃತಿ

• ಉದಯವಾಹಿನಿ ಕಾಗವಾಡ :


ಉದಯವಾಹಿನಿ ಚಿತ್ರ

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಂರಕ್ಷಿಸುವುದು ಹಾಗೂ ಮತದಾರರ ಹಕ್ಕುಗಳ ರಕ್ಷಣೆ ಮಾಡುವ ಉದ್ದೇಶದಿಂದ ಹಮ್ಮಿಕೊಳ್ಳಲಾಗುತ್ತಿರುವ 'ವೋಟ್ ಬಚಾವೋ, ದೇಶ ಬಚಾವೋ' ಆಂದೋಲನಕ್ಕೆ ಕಾಗವಾಡ ಮತಕ್ಷೇತ್ರದಲ್ಲಿ ಸಂಘಟಿತವಾಗಿ ಚಾಲನೆ ನೀಡಲು ಸಿದ್ಧತೆ ಕೈಗೊಳ್ಳಲಾಗುತ್ತಿದೆ. ಈ ಸಂದರ್ಭದಲ್ಲಿ ಕಾಂಗ್ರೇಸ್ ಮುಖಂಡ ಹಾಗೂ ವೋಟ್ ಬಚಾವೋ ದೇಶ ಬಚಾವೋ ಆಂದಲೋಲನದ ಕೆ.ಪಿ.ಸಿ.ಸಿ ಕಾಗವಾಡ ಮತಕ್ಷೇತ್ರದ ಪ್ರಭಾರಿ ಗಜಾನನ ಮಂಗಸೂಳಿ ಮಾತನಾಡಿ ಕಾಗವಾಡ ಮತ್ತು ಅನಂತಪುರ ಬ್ಲಾಕ್ ಮಟ್ಟದಲ್ಲಿ ಮುಖ್ಯ ಚುನಾವಣಾ ಆಯುಕ್ತರು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿ ಮತ್ತು ಮತಗಳ್ಳತನ ವಿರೋಧಿಸಿ ಇದೇ ನವೆಂಬರ 11 ರಿಂದ ಒಂದು ವಾರದೊಳಗಾಗಿ ಕಾಗವಾಡ ಶಾಸಕ ರಾಜು ಕಾಗೆ ನೇತೃತ್ವದಲ್ಲಿ ವೋಟ್ ಬಚಾವೋ ದೇಶ ಬಚಾವೋ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ಸಮಾನ ಮನಸ್ಕರು ಮತ್ತು ವಿವಿಧ ಜನಪರ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡು ಪ್ರಜಾಪ್ರಭುತ್ವ ಉಳಿಸಬೇಕು ಎಂದು ಮನವಿ ಮಾಡಿದರು. ಅವರು ಕಾಗವಾಡ ಶಾಸಕ ರಾಜು ಕಾಗೆಯವರ ಕಛೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಈಗಾಗಲೇ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ ವಿರುದ್ಧ ಮತಗಳ್ಳತನ ವಿರೋಧಿಸಿ ಇಡೀ ದೇಶದಲ್ಲಿ ಕಾಂಗ್ರೇಸ್ ನಾಯಕ ರಾಹುಲ ಗಾಂಧಿ ಮತ್ತು ಎ.ಐ.ಸಿ.ಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ನವೆಂಬರ 1 ರಂದು ದೆಹಲಿಯಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು ಈ ಹಿನ್ನೆಲೆಯಲ್ಲಿ ನಮ್ಮ ನಾಯಕರ ಹೋರಾಟವನ್ನು ಬೆಂಬಲಿಸಿ ಇದೇ ನವೆಂಬರ 5 ರಿಂದ ಜಿಲ್ಲಾ ಕೇಂದ್ರಗಳಲ್ಲಿ ನವೆಂಬರ 11 ರಿಂದ ಒಂದುವಾರದವರೆಗೆ ಬ್ಲಾಕ್ ಮಟ್ಟದಲ್ಲಿ ಮತ್ತು ನವೆಂಬರ್ 20 ರಿಂದ ಗ್ರಾಮ ಪಂಚಾಯತ ಮಟ್ಟದಲ್ಲಿ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದರು.

ದಿನ ಬಳಕೆ ವಸ್ತುಗಳ ದರ ಏರಿಕೆ ? ಕುಟುಂಬಗಳ ಬಜೆಟ್‌ಗೆ ಹೊರೆ

• ಉದಯವಾಹಿನಿ ಚಿತ್ತಾಪುರ:

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು, ಜನಸಾಮಾನ್ಯರು ಸಂಕಷ್ಟ ಎದುರಿಸುವಂತಾಗಿದೆ. ಅಕ್ಕಿ, ಬೇಳೆ, ಅಡುಗೆ ಎಣ್ಣೆ, ತರಕಾರಿ, ಹಾಲು ಸೇರಿದಂತೆ ದಿನನಿತ್ಯ ಬಳಕೆಯ ವಸ್ತುಗಳ ದರ ಏರಿಕೆಯಿಂದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಮೇಲೆ ಹೆಚ್ಚಿನ ಒತ್ತಡ ಉಂಟಾಗಿದ್ದು ಖಂಡನಿಯವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ತಾಲ್ಲೂಕ ಅಧ್ಯಕ್ಷ ರಾಜಕುಮಾರ ಯರಗೋಳ ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ದರ ಏರಿಕೆಯ ಜೊತೆಗೆ ಸಾರಿಗೆ ವೆಚ್ಚವೂ ಹೆಚ್ಚಾಗಿರುವುದು ಜನರ ಆತಂಕಕ್ಕೆ ಕಾರಣವಾಗಿದೆ. ಆಹಾರ ಪದಾರ್ಥಗಳ ಬೆಲೆ ಹೆಚ್ಚಳದಿಂದ ಕುಟುಂಬದ ಮಾಸಿಕ ಖರ್ಚು ಹೆಚ್ಚಾಗುತ್ತಿದ್ದು, ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೋಟೆಲ್‌ಗಳು, ಚಹಾ ಅಂಗಡಿಗಳು ಹಾಗೂ ಸಣ್ಣಪುಟ್ಟ ವ್ಯಾಪಾರಗಳ ಮೇಲೂ ಬೆಲೆ ಏರಿಕೆಯ ಪರಿಣಾಮ ಬೀರುತ್ತಿದೆ.

ಪುನಶ್ಚೇತನಕ್ಕಾಗಿ ಶೇ.10 ಬಜೆಟ್‌ಅನುದಾನಕ್ಕೆ ಆಗ್ರಹ

• ಉದಯವಾಹಿನಿ ಚಡಚಣ,:

ಕೃಷಿ ಸಂಸ್ಕೃತಿಯ ಉಳಿವು ಹಾಗೂ ಜೋಡೆತ್ತಿನ ಕೃಷಿ ಪದ್ಧತಿಯ ಪುನಶ್ಚೇತನಕ್ಕಾಗಿ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಶೇ.10ರಷ್ಟು ಅನುದಾನ ಮೀಸಲಿಡಬೇಕು ಎಂದು ಆಗ್ರಹಿಸಿ ತಾಲ್ಲೂಕಿನ ರೈತರು 60ಕ್ಕೂ ಹೆಚ್ಚು ಜೋಡೆತ್ತಿನ ಬಂಡಿಗಳೊಂದಿಗೆ ಚಡಚಣ ಪಟ್ಟಣದಲ್ಲಿ ಮೆರವಣಿಗೆ ನಡೆಸಿ ಸರ್ಕಾರಕ್ಕೆ ಹಕ್ಕೊತ್ತಾಯ ಸಲ್ಲಿಸಿದರು. ತಾಲ್ಲೂಕಿನ ಜೋಡೆತ್ತಿನ ರೈತರು ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ ರೈತರು ಸೇರಿದಂತೆ 60ಕ್ಕೂ ಹೆಚ್ಚು ಜೋಡೆತ್ತಿನ ಬಂಡಿಗಳೊಂದಿಗೆ ಪಟ್ಟಣದ ಕೆಇಬಿ ಕಚೇರಿಯಿಂದ ಬಸವೇಶ್ವರ ವೃತ್ತದ ಮಾರ್ಗವಾಗಿ ತಹಶೀಲ್ದಾರ್ ಕಚೇರಿವರೆಗೆ ಮೆರವಣಿಗೆ ನಡೆಸಿದರು. ಸಾಂಕೇತಿಕವಾಗಿ ಬಸವೇಶ್ವರ ವೃತ್ತದಲ್ಲಿ ರಾಜ್ಯ ಹೆದ್ದಾರಿ ತಡೆದು ಕೆಲಹೊತ್ತು ಧರಣಿ ಸತ್ಯಾಗ್ರಹ ಮಾಡಿದ ಬಳಿಕ ಉಪ ತಹಶೀಲ್ದಾರ್ ಕೆ.ವೈ. ಹೊಸಮನಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಹಕ್ಕೊತ್ತಾಯ ಪತ್ರ ಸಲ್ಲಿಸಿದರು.

ಹಿರಿಯ ರೈತ ಮುಖಂಡ ನಂದಿ ಸೇನೆ ವಿಜಯಪುರ ಜಿಲ್ಲಾಧ್ಯಕ್ಷ ಬಸವರಾಜ ಬಿರಾದಾರ ಮಾತನಾಡಿ, ಕೃಷಿ ಮತ್ತು ರೈತರ ಬದುಕಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಜೋಡೆತ್ತಿನ ಕೃಷಿ ಪದ್ಧತಿ ಹಾಗೂ ಗ್ರಾಮೀಣ ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಈ ನಿಟ್ಟಿನಲ್ಲಿ ರಾಜ್ಯದ ಒಟ್ಟು ಬಜೆಟ್‌ನಲ್ಲಿ ಶೇ.10ರಷ್ಟು ಅನುದಾನವನ್ನು ಕೃಷಿ ಸಂಸ್ಕೃತಿ ಪುನಶ್ಚೇತನಕ್ಕೆ ಮೀಸಲಿಡುವಂತೆ ಕಾನೂನು ರೂಪಿಸಬೇಕು. ಪ್ರತಿಯೊಬ್ಬ ಜೋಡೆತ್ತಿನ ಕೃಷಿಕರಿಗೆ ಮಾಸಿಕ ರೂ 11 ಸಾವಿರ ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಗೊಳಿಸಬೇಕು ಮತ್ತು ರಾಜ್ಯದ ಒಟ್ಟು ಬಜೆಟ್‌ನ ಶೇ.10ರಷ್ಟು ಅನುದಾನವನ್ನು ನಂದಿ ಕೃಷಿ ಸಂಸ್ಕೃತಿ ಪುನಶ್ಚೇತನಕ್ಕಾಗಿ ಮೀಸಲಿಡುವ ಕಾನೂನನ್ನು ಜ್ಞಾನಯೋಗಿ ಪೂಜ್ಯ ಸಿದ್ದೇಶ್ವರ ಸ್ವಾಮೀಜಿಯವರ ಹೆಸರಿನಲ್ಲಿ ಜಾರಿಗೆ ತರಬೇಕು.

ಈ ಕಾನೂನು ನಾಡಿನ ಪೂಜ್ಯರ ಮಾರ್ಗದರ್ಶನದಲ್ಲಿ ಅನುಷ್ಠಾನಗೊಳ್ಳಬೇಕು ಎಂಬುದು ಜೋಡೆತ್ತಿನ ರೈತರ ನಂದಿ ಸೇನೆಯ ಪ್ರಮುಖ ಬೇಡಿಕೆಯಾಗಿದೆ.

ಜಮಖಂಡಿ ಅಭಿವೃದ್ಧಿಗೆ ಹೊಸ ವೇಗ ನೀಡಿದ ಜ್ಯೋತಿ ಗಿರೀಶ್

• ಉದಯವಾಹಿನಿ ಜಮಖಂಡಿ:


ಉದಯವಾಹಿನಿ ಚಿತ್ರ

ನಗರದ ಅಭಿವೃದ್ಧಿ ಕಾರ್ಯಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದ ನಗರಸಭೆಯ ಪೌರಾಯುಕ್ತೆ ಜ್ಯೋತಿ ಗಿರೀಶ್ ಅವರಿಗೆ ಬೀಳ್ಕೊಡುಗೆ ಹಾಗೂ ನೂತನ ಪೌರಾಯುಕ್ತರಾಗಿ ಆಗಮಿಸಿದ ಜಗದೀಶ್ ಈಟಿ ಅವರಿಗೆ ಸ್ವಾಗತ ಸಮಾರಂಭವನ್ನು ನಗರದ ಪಿ.ಬಿ. ಹೈಸ್ಕೂಲ್‌ನ ರಾನಡೆ ಭವನದಲ್ಲ ಜರುಗಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ್ ಅವರು, ನಗರಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಾಗ ಅಧಿಕಾರಿಗಳ, ಸಾರ್ವಜನಿಕರ ಹಾಗೂ ತಾಂತ್ರಿಕ ಪರಿಣಿತರ ಸಲಹೆಗಳನ್ನು ಪಡೆದು ಯೋಜನಾಬದ್ಧವಾಗಿ ಕೆಲಸ ಮಾಡುವುದು ಮುಖ್ಯ. ಜಮಖಂಡಿ ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಟ್ರಾಫಿಕ್ ಸಿಗ್ನಲ್, ಸಿಸಿ ಕ್ಯಾಮೆರಾ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನೂತನ ಪೌರಾಯುಕ್ತರು ವಿಶೇಷ ಗಮನ ಹರಿಸಬೇಕು.

ಜ್ಯೋತಿ ಗಿರೀಶ್ ಅವರು ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಹೇಳಿದರು.

ಡಿವೈಎಸ್ಪಿ ಸಯ್ಯದ್ ರೋಷನ್ ಜಮೀರ್ ಮಾತನಾಡಿ, ಒಬ್ಬ ಅಧಿಕಾರಿ ವರ್ಗಾವಣೆಯಾಗಿ ತೆರಳುವಾಗ ಅವರು ಮಾಡಿದ ಕೆಲಸಗಳು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಬೇಕು.ಅಧಿಕಾರಿಗಳು ತಮ್ಮ ಸೇವಾವಧಿಯಲ್ಲಿ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು.

ಜ್ಯೋತಿ ಗಿರೀಶ್ ಅವರು ತಮ್ಮ ಸೇವಾವಧಿಯಲ್ಲಿ ನಗರದ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡಿದ್ದಾರೆ. ಶಿವಾಜಿ ವೃತ್ತ ಸೇರಿದಂತೆ ವಿವಿಧ ವೃತ್ತಗಳ ಅಭಿವೃದ್ಧಿ ಹಾಗೂ ಸೌಂದರ್ಯೀಕರಣದಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ಪೊಲೀಸ್ ಇಲಾಖೆಗೆ ಅಗತ್ಯವಿರುವ ಟ್ರಾಫಿಕ್ ಸಿಗ್ನಲ್ ಸೇರಿದಂತೆ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ನೂತನ ಪೌರಾಯುಕ್ತರು ಮುಂದುವರಿಸಬೇಕು ಎಂದು ಮನವಿ ಮಾಡಿದರು.

ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು

• ಉದಯವಾಹಿನಿ ಕಲಬುರಗಿ:

ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಸಾಧಿಸಲು ಹಾಗೂ ಅಂತರಾಷ್ಟ್ರೀಯ ಗುಣಮಟ್ಟದ ಶಿಕ್ಷಣದ ಮಾನದಂಡಗಳನ್ನು ತಲುಪಲು ಶಿಕ್ಷಣ ಸಂಸ್ಥೆಗಳು ಸಂಶೋಧನಾ ಚಟುವಟಿಕೆಗಳು ಮತ್ತು ಸಂಶೋಧನಾ ಫಲಿತಾಂಶಗಳಿಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ. ನಮೋಶಿ ಪ್ರತಿಪಾದಿಸಿದರು.

ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ಆಯೋಜಿಸಿದ್ದ ಭಾರತೀಯ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಷನ್ಸ್ ಇಂಜಿನಿಯರಿಂಗ್ ಸಂಸ್ಥೆಯ 73ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ, ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ದಾಖಲೆಯ ಐದನೇ ಬಾರಿಗೆ ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಸನ್ಮಾನ ಸ್ವೀಕರಿಸಿ ನಮೋಶಿ ಮಾತನಾಡಿದರು. ಉನ್ನತ ಶಿಕ್ಷಣ ಸಂಸ್ಥೆಗಳು ಸಂಶೋಧನಾ ಚಟುವಟಿಕೆಗಳಿಗೆ ನೀಡುವ ಆದ್ಯತೆ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಆಗಿರುವ ನಮೋಶಿ, ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜಿನ 35 ಸಾವಿರ ಚದುರ ಅಡಿ ಪ್ರದೇಶದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಉದ್ಯಾನವನ ಸ್ಥಾಪಿಸುವ ಪ್ರಸ್ತಾವನೆಗೆ ಅನುಮೋದನೆ ದೊರೆತಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಿದರು.

ಉಡುಪಿ ಕೃಷ್ಣಮಠದಲ್ಲಿ 3 ದಿನ 'ಕದಳೀ ವಿಶ್ವದರ್ಶನ' ಬಾಳೆ ಮೇಳ

ಮೇಳದಲ್ಲಿ ವಿವಿಧ ತಳಿಗಳ ಬಾಳೆ ಗೊನೆಗಳ ಪ್ರದರ್ಶನ, ಸಸಿಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ.

• ಉದಯವಾಹಿನಿ,ಉಡುಪಿ:

ಸೋದೆ ಶ್ರೀ ವಾದಿರಾಜ ಮಠದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರ 2028–30ನೇ ಸಾಲಿನ ಎರಡನೇ ಶ್ರೀಕೃಷ್ಣ ಪೂಜಾ ಪರ್ಯಾಯದ ಪೂರ್ವಭಾವಿ ಸಿದ್ಧತೆಗಳ ಅಂಗವಾಗಿ ನವೆಂಬರ್ 29ರಂದು ಬಾಳೆ ಮುಹೂರ್ತ ನೆರವೇರಲಿದೆ.

1 : 2,000 ರೈತರು, 2,000 ವಿದ್ಯಾರ್ಥಿಗಳು

2 : 10 ಸಾವಿರಕ್ಕೂ ಅಧಿಕ ಸಾರ್ವಜನಿಕರು

3 : ಆವರಣದಲ್ಲಿರುವ ತೋಟದಲ್ಲಿ ಬಾಳೆ

ಇದೇ ಸಂದರ್ಭದಲ್ಲಿ ಬಾಳೆ ಕೃಷಿಯ ಮಹತ್ವ, ವೈವಿಧ್ಯಮಯ ತಳಿಗಳು, ವೈಜ್ಞಾನಿಕ ಕೃಷಿ ಪದ್ಧತಿ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳನ್ನು ಪರಿಚಯಿಸುವ ಉದ್ದೇಶದಿಂದ ನವೆಂಬರ್ 29ರಿಂದ ಡಿಸೆಂಬರ್ 1ರವರೆಗೆ ಮೂರು ದಿನಗಳ ರಾಷ್ಟ್ರಮಟ್ಟದ 'ಕದಳೀ ವಿಶ್ವದರ್ಶನ' ಬಾಳೆ ಮೇಳವನ್ನು ಆಯೋಜಿಸಲಾಗಿದೆ. ಶ್ರೀಕೃಷ್ಣ ಮಠದ ಪಾರ್ಕಿಂಗ್ ಪ್ರದೇಶದ ಸಮೀಪ ನಡೆಯಲಿರುವ ಮೇಳದಲ್ಲಿ ದೇಶದ ವಿವಿಧ ರಾಜ್ಯಗಳ ರೈತರು, ಕೃಷಿ ತಜ್ಞರು, ಸಂಶೋಧಕರು ಹಾಗೂ ಕೃಷಿ ಉದ್ಯಮಿಗಳು ಭಾಗವಹಿಸಲಿದ್ದಾರೆ.



ಉದಯವಾಹಿನಿ ಚಿತ್ರ

ಸುಮಾರು 2,000 ರೈತರು, 2,000 ವಿದ್ಯಾರ್ಥಿಗಳು, ಸಂಶೋಧಕರು ಉದ್ಯಮಿಗಳು ಸೇರಿದಂತೆ 10 ಸಾವಿರಕ್ಕೂ ಅಧಿಕ ಸಾರ್ವಜನಿಕರು ಭೇಟಿ ನೀಡುವ ನಿರೀಕ್ಷೆಯಿದೆ ಎಂದು ಸೋದೆ ಶ್ರೀ ವಾದಿರಾಜ ಮಠದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ತಿಳಿಸಿದರು.

ನ.29ರಂದು ಬಾಳೆ ಮುಹೂರ್ತ: ನವೆಂಬರ್ 29ರಂದು ಬೆಳಿಗ್ಗೆ 6.30ಕ್ಕೆ ಸೋದೆ ಮಠದ ಪಟ್ಟದ ದೇವರ ಸನ್ನಿಧಿಯಲ್ಲಿ ದೇವತಾ ಪ್ರಾರ್ಥನೆ ನಡೆಯಲಿದೆ. ಬಳಿಕ ಶ್ರೀ ಚಂದ್ರೇಶ್ವರ, ಶ್ರೀ ಅನಂತೇಶ್ವರ ಹಾಗೂ ಶ್ರೀಕೃಷ್ಣ ಮುಖ್ಯಪ್ರಾಣ ದೇವರ ಸನ್ನಿಧಿಯಲ್ಲಿ ಫಲಾನ್ಯಾಸ ಪೂರ್ವಕ ಪ್ರಾರ್ಥನೆ ಸಲ್ಲಿಸಲಾಗುವುದು. ಬೆಳಿಗ್ಗೆ 7.45ರ ವೃಶ್ಚಿಕ ಲಗ್ನದ ಶುಭ ಮುಹೂರ್ತದಲ್ಲಿ ಸೋದೆ ಮಠದ ಆವರಣದಲ್ಲಿರುವ ತೋಟದಲ್ಲಿ ಬಾಳೆ, ಕಬ್ಬು ಹಾಗೂ ತುಳಸಿ ಗಿಡಗಳನ್ನು ನೆಡುವ ಮೂಲಕ ಬಾಳೆ ಮುಹೂರ್ತ ನೆರವೇರಲಿದೆ. ಶ್ರೀಪಾದರೊಂದಿಗೆ ಮಠದ ದಿವಾನರು, ಆಸ್ಥಾನ ವಿದ್ವಾಂಸರು, ಪಂಡಿತರು, ಭಕ್ತರು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ. ಮೇಳದ ಪ್ರಮುಖ ಆಕರ್ಷಣೆಯಾಗಿ 100ಕ್ಕೂ ಅಧಿಕ ವಿವಿಧ ತಳಿಗಳ ಬಾಳೆ ಗೊನೆಗಳ ಪ್ರದರ್ಶನ, ವಿವಿಧ ತಳಿಗಳ ಹಣ್ಣುಗಳ ಮಾರಾಟ ಹಾಗೂ 150ಕ್ಕೂ ಅಧಿಕ ಬಗೆಯ ಬಾಳೆ ತಳಿಗಳ ಪರಿಚಯ ಮತ್ತು ಸಸಿಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಭಾರತದಲ್ಲಿ ಸುಮಾರು 500ಕ್ಕೂ ಅಧಿಕ ಬಗೆಯ ಬಾಳೆ ತಳಿಗಳಿದ್ದು, ಕೆಲವು ತಳಿಗಳಿಗೆ ನಿರ್ದಿಷ್ಟ ಹೆಸರುಗಳಿಲ್ಲ. ಇಂತಹ ತಳಿಗಳ ಪೈಕಿ ವಿಶಿಷ್ಟವಾದ ಒಂದು ತಳಿಯನ್ನು ಆಯ್ಕೆ ಮಾಡಿ, ಮೇಳದ ಸಂದರ್ಭದಲ್ಲಿ ಸೋದೆ ಮಠದ ವತಿಯಿಂದ ನಾಮಕರಣ ಮಾಡಿ ಪರಿಚಯಿಸುವ ವಿಶೇಷ ಪ್ರಯತ್ನವೂ ನಡೆಯಲಿದೆ.

ಬಾಳೆಯಿಂದ ಮೌಲ್ಯವರ್ಧಿತ ಉತ್ಪನ್ನಗಳು: ಬಾಳೆಹಣ್ಣಿನಿಂದ ತಯಾರಿಸಿದ ವಿವಿಧ ಆಹಾರ ಮತ್ತು ಸಂಸ್ಕರಿತ ಉತ್ಪನ್ನಗಳು, ಬಾಳೆದಿಂಡು, ಎಲೆ ಹಾಗೂ ನಾರಿನಿಂದ ತಯಾರಿಸಿದ ಉಪಯುಕ್ತ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

40 ಮಳಿಗೆಗಳು, ಎಲ್ಲವೂ ಉಚಿತ: ಮೇಳದಲ್ಲಿ ಸುಮಾರು 40 ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ನಿರ್ಮಿಸಲಾಗುವುದು. ಬಾಳೆ ಹಣ್ಣು, ವಿವಿಧ ತಳಿಗಳು, ಕೃಷಿ ಉತ್ಪನ್ನಗಳು, ಮೌಲ್ಯವರ್ಧಿತ ವಸ್ತುಗಳು, ಕರಕುಶಲ ಉತ್ಪನ್ನಗಳು ಹಾಗೂ ಕೃಷಿ ತಂತ್ರಜ್ಞಾನಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಮಳಿಗೆದಾರರಿಗೆ ಮೂರು ದಿನಗಳ ಕಾಲ ಮಳಿಗೆಗಳ ಸ್ಥಳಾವಕಾಶ ಮತ್ತು ಅಗತ್ಯ ಮೂಲಸೌಕರ್ಯಗಳನ್ನು ಉಚಿತವಾಗಿ ಒದಗಿಸಲಾಗುವುದು.

ಈ ಪರಂಪರೆಯಲ್ಲಿ ಬಾಳೆ ಮುಹೂರ್ತವು ಧಾರ್ಮಿಕ ಹಾಗೂ ಸಾಂಪ್ರದಾಯಿಕ ಮಹತ್ವ ಹೊಂದಿದೆ. ಅದರ ಆಶಯವನ್ನು ಸಮಕಾಲೀನ ಕೃಷಿ ಅಭಿವೃದ್ಧಿಯೊಂದಿಗೆ ಬೆಸೆಯುವ ಉದ್ದೇಶದಿಂದ 'ಕದಳೀ ವಿಶ್ವದರ್ಶನ' ಮೇಳವನ್ನು ಆಯೋಜಿಸಲಾಗಿದೆ ಎಂದರು.

-ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರ

ಚಾಮರಾಜನಗರದ ಆಕೃತಿ ಇಕೋ ಫ್ರೆಂಡ್ಲಿ ಎಂಟರ್‌ಪ್ರೈಸಸ್‌ನ ಸ್ಥಾಪಕಿ ವರ್ಷಾ ಶ್ರೀಕಂಠಸ್ವಾಮಿ ಅವರು 'ಬಾಳೆಯ ಕಸಕ್ಕೆ ಹೊಸ ರೂಪ ಇದು ಮನೆ ಬೆಳಗಿಸುವ ಆದಾಯದ ದೀಪ' ವಿಷಯದಡಿ ಬಾಳೆ ನಾರಿನ ಕೈಕಸುಬು, ಪರಿಸರಸ್ನೇಹಿ ಕಲೆ ಮತ್ತು ಸುಸ್ಥಿರ ಭವಿಷ್ಯದ ಕುರಿತು ಉಪನ್ಯಾಸ ನೀಡಲಿದ್ದಾರೆ.

ಮಿನಿ ನ್ಯೂಸ್

ರಂಗಭೂಮಿ ಕಲೆಯಿಂದ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೀದರ್:

'ರಂಗಭೂಮಿ ಕೇವಲ ಮನರಂಜನೆಯ ಮಾಧ್ಯಮವಲ್ಲ. ಅಭಿನಯ ಕೌಶಲ, ಆತ್ಮವಿಶ್ವಾಸ, ವ್ಯಕ್ತಿತ್ವ ವಿಕಸನ ಹಾಗೂ ಸೃಜನಶೀಲತೆಯನ್ನು ಬೆಳೆಸುವ ಪರಿಣಾಮಕಾರಿ ಕಲಾಪ್ರಕಾರವಾಗಿದೆ. ವಿದ್ಯಾರ್ಥಿಗಳು ರಂಗಭೂಮಿ ತರಬೇತಿಯ ಸದುಪಯೋಗ ಪಡೆದುಕೊಂಡು ಕಲಾಕ್ಷೇತ್ರದಲ್ಲಿ ಸಾಧನೆ ಮಾಡಬೇಕು' ಎಂದು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅಭಿಪ್ರಾಯಪಟ್ಟರು.

ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ) ಹಾಗೂ ಕರ್ನಾಟಕ ಸಾಹಿತ್ಯ ಸಂಘದ ಸಹಯೋಗದಲ್ಲಿ, ಕರ್ನಾಟಕ ಕಾಲೇಜಿನ ಸಹಕಾರದೊಂದಿಗೆ ಆಯೋಜಿಸಿದ್ದ ರಂಗಭೂಮಿ ತರಬೇತಿ ಶಿಬಿರದ ಸಮಾರೋಪ ಹಾಗೂ ಪ್ರಮಾಣಪತ್ರ, ವಿತರಣಾ ಸಮಾರಂಭದಲ್ಲಿ ಮಾತನಾಡಿದರು. ಬೀದರ್ ಭಾಗದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮಟ್ಟದ ರಂಗಭೂಮಿ ತರಬೇತಿಯ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ. ಇಂತಹ ಶಿಬಿರಗಳಿಂದ ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ಪ್ರತಿಭೆಗಳಿಗೆ ಸೂಕ್ತ ವೇದಿಕೆ ದೊರೆಯುತ್ತದೆ. ವಿದ್ಯಾರ್ಥಿಗಳು ತರಬೇತಿಯಲ್ಲಿ ಕಲಿತ ಕೌಶಲಗಳನ್ನು ನಿರಂತರ ಅಭ್ಯಾಸದ ಮೂಲಕ ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕರ್ನಾಟಕ ಸಾಹಿತ್ಯ ಸಂಘದ ಅಧ್ಯಕ್ಷ ಪೂರ ಜಗನ್ನಾಥ ಹೆಬ್ಬಾಳೆ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಷ್ಟ್ರೀಯ ನಾಟಕ ಶಾಲೆಯು ದೇಶದ ಪ್ರತಿಷ್ಠಿತ ರಂಗಭೂಮಿ ತರಬೇತಿ ಸಂಸ್ಥೆಗಳಲ್ಲಿ ಒಂದಾಗಿದ್ದು, ಇಲ್ಲಿ ತರಬೇತಿ ಪಡೆದ ಅನೇಕ ಕಲಾವಿದರು ಕನ್ನಡ, ಹಿಂದಿ ಸೇರಿದಂತೆ ವಿವಿಧ ಭಾಷೆಗಳ ಚಲನಚಿತ್ರ, ಹಾಗೂ ರಂಗಭೂಮಿ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಅಭಿನಯ, ದೇಹಭಾಷೆ, ಸಂಭಾಷಣೆ, ಭಾವಾಭಿವ್ಯಕ್ತಿ ಮತ್ತು ಪಾತ್ರ ನಿರ್ವಹಣೆಯಂತಹ ವಿಷಯಗಳಲ್ಲಿ ಶಿಸ್ತುಬದ್ಧ ತರಬೇತಿ ನೀಡುವುದು ಈ ಸಂಸ್ಥೆಯ ವಿಶೇಷತೆಯಾಗಿದೆ ಎಂದು ತಿಳಿಸಿದರು.

ಸಾರಿಗೆ ಬಸ್ ಪ್ರಯಾಣ ದರ ಏರಿಕೆ ಹಿಂಪಡೆಯಿರಿ

• ಉದಯವಾಹಿನಿ ಕಾಳಗಿ :


ಉದಯವಾಹಿನಿ ಚಿತ್ರ

ಸಾರಿಗೆ ಸಂಸ್ಥೆಗಳ ನಷ್ಟದ ನೆಪವೊಡ್ಡಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಶೇ 23ರಷ್ಟು ಮತ್ತು ಬಿಎಂಟಿಸಿ ಪ್ರಯಾಣ ದರ ಶೇ 35ರಷ್ಟು ಹೆಚ್ಚಿಸಿರುವ ರಾಜ್ಯ ಸರ್ಕಾರದ ನಡೆ ಖಂಡನೀಯವಾಗಿದೆ ಅವೈಜ್ಞಾನಿಕವಾದ ದರ ಏರಿಕೆಯನ್ನು ಕೂಡಲೇ ಹಿಂಪಡೆಯಬೇಕು ಎಂದು ಬಿಜೆಪಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಜಗದೀಶ ಪಾಟೀಲ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿದ ಅವರು ಕೆಲ ದಿನಗಳ ಹಿಂದೆಯಷ್ಟೇ ಹಾಲು ಮತ್ತು ಮೊಸರುಗಳ ದರ ಹೆಚ್ಚಿಸಿ ಜನರ ಮೇಲೆ ಆರ್ಥಿಕ ಹೊರೆಯನ್ನು ಹೇರಿದ ಸರ್ಕಾರವು ಈಗ ಬೆಲೆ ಏರಿಕೆಯ ಮತ್ತೊಂದು ಬರೆ ಎಳೆದಿದೆ. ರಾಜ್ಯದಲ್ಲಿ ನಿರುದ್ಯೋಗ ತಾಂಡವವಾಡುತ್ತಿದ್ದು, ನಿರಂತರವಾಗಿ ಉದ್ಯೋಗಗಳ ಕಡಿತವಾಗುತ್ತಿವೆ. ಜನರು ಜೀವನ ನಿರ್ವಹಣೆಯ ಕನಿಷ್ಠ ಆದಾಯಕ್ಕಾಗಿ ಕೆಲಸಗಳಿಗೆ ಅಲೆಯುತ್ತಿದ್ದಾರೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ. ಕಳೆದ ಹತ್ತು ವರ್ಷಗಳ ನಂತರ ಪರಿಷ್ಕರಣೆ ಆಗಿರುವ ಕನಿಷ್ಠ ವೇತನದ ಜಾರಿಯನ್ನು ಸರ್ಕಾರವೇ ನೆನೆಗುದಿಗೆ ಹಾಕಿದ್ದು, ದುಡಿಯುವ ಜನರ ವೇತನ ಮತ್ತು ಆದಾಯ ಪಾತಾಳಕ್ಕೆ ಕುಸಿದಿದೆ. ಇದೇ ಸಮಯದಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ನಗರ ಮತ್ತು ಗ್ರಾಮೀಣ ದುಡಿಯುವ ಜನತೆ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಬರಗಾಲದ ಪರಿಣಾಮದಿಂದ ಗ್ರಾಮೀಣ ಪ್ರದೇಶದ ಜನರ ಬದುಕು ದುರ್ಬಲಗೊಂಡಿದೆ. ಇಂತಹ ಸಂದರ್ಭದಲ್ಲಿ ಬಸ್ ಪ್ರಯಾಣ ದರ ಏರಿಕೆ ಮಾಡುವ ಮೂಲಕ ಸರ್ಕಾರ ಜನಸಾಮಾನ್ಯರ ಮೇಲೆ ಮತ್ತೊಂದು ಆರ್ಥಿಕ ಹೊರೆಯನ್ನು ಹೇರಿರುವುದು ಖಂಡನೀಯ ಎಂದಿದ್ದಾರೆ.

ಯೋಜನೆಯಿಂದ ಗ್ರಾಮೀಣರ ಆರ್ಥಿಕ ಪ್ರಗತಿ



ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಳ್ತಂಗಡಿ:

ದೂರದ ಊರಿನಲ್ಲಿ ಕೆಲಸ ಮಾಡುತ್ತಿರುವ ಅನೇಕ ಮಂದಿ ಯೋಜನೆ ಪ್ರಾರಂಭವಾದ ಬಳಿಕ ಊರಿಗೆ ಬಂದು ಕೃಷಿ ಮಾಡಿ ಆರ್ಥಿಕ ಪ್ರಗತಿ ಕಂಡಿದ್ದಾರೆ. ಅನೇಕ ಕುಟುಂಬಗಳು ನೆಮ್ಮದಿಯ ಬದುಕನ್ನು ಕಾಣಲು ಯೋಜನೆಯೇ ಕಾರಣ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ ವೀರೇಂದ್ರ ಹೆಗ್ಗಡೆ ಹೇಳಿದರು.ಅವರು ಬೆಳ್ತಂಗಡಿ ಮಂಜುನಾಥ ಸ್ವಾಮಿ ಕಲಾಭವನದಲ್ಲಿ ಯೋಜನೆಯ ಹಿರಿಯ ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

44 ವರ್ಷಗಳ ಹಿಂದೆ ಗ್ರಾಮ ಗ್ರಾಮಗಳಿಗೆ, ಮನೆ ಮನೆಗೆ ಬೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಬೇಕಾದ ನೆರವು ನೀಡುವ ಮೂಲಕ ಯೋಜನೆ ಪ್ರಾರಂಬಿಸಲಾಯಿತು. ಅಗ ಯುವಕರಾಗಿದ್ದ ಯೋಜನೆಯ ಫಲಾನುಭವಿಗಳು ವಿವಿಧ ಸಾಧನೆಗಳನ್ನು ಮಾಡಿ ಆರ್ಥಿಕವಾಗಿ ಬಲಿಷ್ಠರಾಗಿದ್ದಾರೆ. ಅವರಿಗೂ ವಯಸ್ಸಾಗಿದೆ. ನಮಗೂ ವಯಸ್ಸಾಗಿದೆ. ಅದಕ್ಕಾಗಿ ಒಂದು ಕಡೆ ಸೇರಿ ಕ್ಷೇಮ ಸಮಚಾರ ಮಾತನಾಡಲು ಒಟ್ಟು ಸೇರುವ ಎಂದು ಆಲೋಚಿಸಿ ಇಂದು ಸೇರಿದ್ದೇವೆ. ಯೋಜನೆ ಇಷ್ಟೊಂದು ಬೆಳೆಯಲು ಕಾರ್ಯಕರ್ತರ ಶ್ರಮ ಕಾರಣ ಎಂದರು.

ಹೊರಜಿಲ್ಲೆಯ ಪೋಷಕರ ವಿಶ್ವಾಸ ಉಳಿಸಿಕೊಳ್ಳಲಿ

• ಉದಯವಾಹಿನಿ ಉಡುಪಿ :

ಉಡುಪಿ ಜಿಲ್ಲೆ ಶೈಕ್ಷಣಿಕವಾಗಿ ಮುಂದಿರುವುದರಿಂದ ಹೊರಜಿಲ್ಲೆಗಳ ಪೋಷಕರು ತಮ್ಮ ಮಕ್ಕಳನ್ನು ಇಲ್ಲಿನ ವಸತಿ ಶಾಲೆಗಳಲ್ಲಿ, ವಿದ್ಯಾರ್ಥಿನಿಲಯಗಳಿಗೆ ಕಳುಹಿಸುತಿದ್ದಾರೆ. ಅಧಿಕಾರಿಗಳು ಹಾಗೂ ಹಾಸ್ಟೆಲ್ ಸಿಬ್ಬಂದಿ ಆ ವಿಶ್ವಾಸವನ್ನು ಕಳೆದುಕೊಳ್ಳದೇ ಕೆಲಸ ಮಾಡಬೇಕು ಎಂದು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಅಧ್ಯಕ್ಷ ತನ್ವೀರ್ ಸೇಠ್ ಹೇಳಿದರು. ರಜತಾದ್ರಿಯ ಜಿಪಂ ಸಭಾಂಗಣದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಮುದಾಯಗಳ ಕಲ್ಯಾಣ ಯೋಜನೆ, ಕಾರ್ಯಕ್ರಮ, ಸೌಲಭ್ಯಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಾಗುತ್ತಿದ್ದು, ಹಾಸ್ಟೆಲ್‌ಗಳಲ್ಲಿ ಸೀಟು ಸಿಗುತ್ತಿಲ್ಲ ಎಂಬ ದೂರುಗಳು ಇವೆ.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	09:00 ರಿಂದ 10:30
ಗುಳಿಕ ಕಾಲ	ಬೆಳಿಗ್ಗೆ	06:00 ರಿಂದ 07:30
ಯಮಗಂಡ ಕಾಲ	ಮಧ್ಯಾಹ್ನ	01:30 ರಿಂದ 03:00

ಮೇಷ ಉತ್ತಮ ಆರೋಗ್ಯದ ಸಲುವಾಗಿ ದೀರ್ಘ ನಡಿಗೆಗೆ ಹೋಗಿ. ಜೀವನದ ಕೆಟ್ಟ ಕಾಲದಲ್ಲಿ ಹಣ ಕೆಲಸಕ್ಕೆ ಬರುತ್ತದೆ ಆದ್ದರಿಂದ ಇಂದಿನಿಂದಲೇ ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಯೋಚಿಸಿ ಇಲ್ಲದಿದ್ದರೆ ನೀವು ತೊಂದರೆಗೊಳಗಾಗಬಹುದು. ಮೊಮ್ಮಕ್ಕಳು ಅಪಾರ ಸಂತೋಷದ ಮೂಲವಾಗುತ್ತಾರೆ.

ವೃಷಭ ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ದೊಡ್ಡ ಯೋಜನೆಗಳನ್ನು ಮತ್ತು ಕಲ್ಪನೆಗಳಿರುವ ಯಾರಾದರೂ ನಿಮ್ಮ ಗಮನ ಸೆಳೆಯುತ್ತಾರೆ .

ಮಿಥುನ ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ. ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ. ಇಡೀ ಬ್ರಹ್ಮಾಂಡದ ಭಾವಪರವಶತೆ ಪ್ರೀತಿಯಲ್ಲಿರುವವರ ನಡುವೆ ನಡೆಯುತ್ತದೆ.

ಕಟಕ ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ನಿಮ್ಮ ಮಕ್ಕಳ ಜೊತೆ ಒಂದು ಆರೋಗ್ಯಕರ ಸಂಬಂಧವನ್ನು ಉತ್ತೇಜಿಸಿ. ಪ್ರಖರವಾದ ಹಾಗೂ ಸಂತಸದ ಸಮಯಗಳನ್ನು ಎದುರುನೋಡಿ.

ಸಿಂಹ ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಹಣ ನಿಮ್ಮ ಕೈಗಳ ಮೂಲಕ ಸುಲಭವಾಗಿ ಜಾರಿಹೋದರೂ – ನಿಮ್ಮ ಅದೃಷ್ಟದ ತಾರೆಗಳು ನಿಮಗೆ ಹಣಕಾಸು ಸುಲಭವಾಗಿ ದೊರಕುವಂತೆ ಮಾಡುತ್ತದೆ.

ಕನ್ಯಾ ನಿಮ್ಮ ನಿರಾಶಾದಾಯಕ ನಡವಳಿಕೆಯಿಂದಾಗಿ ನೀವು ಯಾವುದೇ ಪ್ರಗತಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ. ಚಿಂತೆ ನಿಮ್ಮ ಚಿಂತನಾ ಶಕ್ತಿಯನ್ನು ಕುಂಠಿತ ಗೊಳಿಸಿದೆಯಂದು ಕಂಡುಕೊಳ್ಳಲು ಇದು ಸಕಾಲ. ಸಕಾರಾತ್ಮಕವಾಗಿ ಆಲೋಚಿಸಿ ಮತ್ತು ನಿಮ್ಮ ವಿವೇಚನೆಯಲ್ಲಿ ಗಮನಾರ್ಹ ಬದಲಾವಣೆ ಕಾಣುತ್ತದೆ.

ತುಲಾ ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ. ಕೌಟುಂಬಿಕ ಅಗತ್ಯಗಳಿಗೆ ತಕ್ಷಣದ ಗಮನ ನೀಡಬೇಕು.

ವೃಶ್ಚಿಕ ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ನಿಮ್ಮ ಪ್ರಯತ್ನಗಳು ಹಾಗೂ ನಿಮ್ಮ ಕುಟುಂಬದ ಸದಸ್ಯರು ಒದಗಿಸಿದ ಬೆಂಬಲದ ಫಲವಾದ ಯಶಸ್ಸು ಮತ್ತು ಸಂತೋಷವನ್ನು ಆನಂದಿಸಲು ಈಗ ಒಂದು ಒಳ್ಳೆಯ ಸಮಯ.

ಧನಸ್ಸು ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ – ಮನೋಲ್ಲಾಸ ಮತ್ತು ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು

ಮಕರ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ. ಸಂಬಂಧಿಗಳು ನಿಮಗೆ ಸಹಾಯ ಹಸ್ತ ನೀಡಲು ಒಪ್ಪಿಕೊಳ್ಳುತ್ತಾರೆ. ದೀರ್ಘಕಾಲದ ನಂತರ ನಿಮ್ಮ ಸ್ನೇಹಿತರಿಗೆ ಸಂಧಿಸುವ ವಿಚಾರ ನಿಮ್ಮ ಮನಸ್ಸಿನೆಲ್ಲೆಡೆ ತುಂಬಿರುತ್ತದೆ.

ಕುಂಭ ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು. ಅತಿಥಿಗಳು ನಿಮ್ಮ ಮನೆಯನ್ನು ಒಂದು ಆಹ್ಲಾದಕರ ಮತ್ತು ಅದ್ಭುತ ಸಂಜೆಗಾಗಿ ಬಳಸಿಕೊಳ್ಳುತ್ತಾರೆ.

ಮೀನ ನಿಮ್ಮ ದೈಹಿಕ ಆರೋಗ್ಯವನ್ನು ಸುಧಾರಿಸಲು ಸಮತೋಲಿತ ಆಹಾರ ತೆಗೆದುಕೊಳ್ಳಿ ಹಿಂದೆ ತಮ್ಮ ಹಣವನ್ನು ಹೂಡಿಕೆ ಮಾಡಿದ ಜನರು ಆ ಹಣದಿಂದ ಲಾಭ ಪಡೆಯುವ ಸಾಧ್ಯತೆಯಿದೆ. ಕಲ್ಪನೆಗಳ ಹಿಂದೆ ಓಡಬೇಡಿ ಸಾಧ್ಯವಾದಷ್ಟೂ ವಾಸ್ತವವಾದಿಗಳಾಗಿರಿ. ನಿಮ್ಮ ಸ್ನೇಹಿತರ ಜೊತೆ ಸಮಯ ಕಳೆಯಿರಿ

ಕರ್ತವ್ಯನಿರತ ಪಿಡಿಒ ಮೇಲೆ ಹಲ್ಲೆ:ಸಂಘದಿಂದ ಖಂಡನೆ: ಜಿಲ್ಲಾಧಿಕಾರಿಗಳಿಗೆ ಮನವಿ

• **ಉದಯವಾಹಿನಿ ಚಿಂಚೋಳಿ:**

ತಾಲ್ಲೂಕಿನ ಮಿರಿಯಾಣ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಲೂರು ರೋಡ್ ಗ್ರಾಮದಲ್ಲಿ ಕರ್ತವ್ಯನಿರತ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಲ್ಲಿಕಾರ್ಜುನ ಗಿರಿ ಅವರ ಮೇಲೆ ನಡೆದ ಹಲ್ಲೆಯನ್ನು ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ತಾಲ್ಲೂಕಾ ಘಟಕ ತೀವ್ರವಾಗಿ ಖಂಡಿಸಿ ತಾಪಂ. ಇಓ ಸಂತೋಷ ಚವ್ಹಾಣ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿದರು.

ನ.02ರಂದು ಮಧ್ಯಾಹ್ನವೇಳೆ ಮಿರಿಯಾಣ ಗ್ರಾ.ಪಂ.ಪಿಡಿಒ ಮಲ್ಲಿಕಾರ್ಜುನ ಗಿರಿ ಅವರು ತಮ್ಮ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಅವರಿಗೆ ಸಂಬಂಧವಿಲ್ಲದ ವಿಷಯವೊಂದನ್ನು ಮುಂದಿಟ್ಟುಕೊಂಡು ಕೆಲವರು ಪ್ರತಿಭಟನೆ ನಡೆಸಿ,ಅವಾಚ್ಯ ಶಬ್ದಗಳಿಂದ ನಿಂದಿಸಿ,ಹಲ್ಲೆ ಮಾಡಿದ್ದಾರೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಆರೋಪಿಸಿ ಪದಾಧಿಕಾರಿಗಳು ತಾಪಂ.ಇಓ ಮೂಲಕ


ಉದಯವಾಹಿನಿ ಚಿತ್ರ

ಕಲಬುರಗಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ,ಘಟನೆಯ ಬಗ್ಗೆ ಗಂಭೀರ ತನಿಖೆ ನಡೆಸಿ,ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸರ್ಕಾರಿ ನೌಕರರು ನಿಯಮಾನುಸಾರ ಸಾರ್ವಜನಿಕ ಸೇವೆ ಮಾಡುತ್ತಾರೆ,ಸಮಸ್ಯೆ ಇದ್ದರೆ ಮೇಲಧಿಕಾರಿಗಳಿಗೆ ದೂರು ನೀಡಬೇಕು ಹೊರತು ಹಲ್ಲೆ ಮಾಡುವುದು ಸರಿಯಲ್ಲ ಇಂತಹ ಘಟನೆಗಳಿಂದ ನೌಕರರಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತದೆ ಹಾಗೂ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ನೌಕರರ ಸುರಕ್ಷತೆಗೆ ಪೊಲೀಸ್ ರಕ್ಷಣೆ ಒದಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ

ಸಂಘದ ಅಧ್ಯಕ್ಷ ಪವನಕುಮಾರ ಮೇತ್ರಿ,ಜಗನ್ನಾಥ ರೆಡ್ಡಿ ಚಟ್ನಳ್ಳಿ,ಸಂಘದ ಸದಸ್ಯರು ಗೋವಿಂದರೆಡ್ಡಿ,ಮಲ್ಲಿಕಾರ್ಜುನ ಗಿರಿ,ರಮೇಶ ತುಮಕುಂಟಾ,ಪ್ರತೀಕ್ಷಾ, ವಿಜಯಲಕ್ಷ್ಮಿ,ವಿನೋಧ ಚವ್ಹಾಣ,ಅನೀಲಕುಮಾರ,ರಾಜೇಶ್ವರಿ, ಜ್ಞಾನಜ್ಯೋತಿ,ಸಾವಿತ್ರಿ, ಎಸ್.ಎಂ.ಪತ್ತಾರ್,ಸುಧಾ ಭೀಮಶಾ,ರೀಯಾಜ್ ಅಮೀನ್,ರಾಜಾಶ್ರೀ, ಸೈಯದ್ ಫಾಯಾಜ್,ಎಂಡಿ ಫರೀಫ್,ಸಿದ್ದಣ್ಣ, ಪಾಂಡುರಂಗ, ರೇವಣಸಿದ್ದಪ್ಪ, ಚಂದ್ರಕಾಂತ, ಅಬ್ದುಲ್ ಅರ್ಷದ್,ವಾಸು,ಎಂಡಿ ಮೋಸೀನ್,ರವಿಕುಮಾರ ಅನೇಕರಿದ್ದರು.

ರೈತರ ಹೋರಾಟಕ್ಕೆ ತೆರೆ ಬೆನ್ನಲ್ಲೆ ಕಬ್ಬು ಕಟಾವು ಚುರುಕು

ಬೆಳಗಾವಿ ಜಿಲ್ಲೆಯಲ್ಲಿ ಎರಡು ತಿಂಗಳಿನಿಂದ ನಡೆಯುತ್ತಿದ್ದ ಕಬ್ಬಿನ ದರದ ಹೋರಾಟಕ್ಕೆ ವಿರಾಮ ಸಿಕ್ಕಿದ್ದು, ಕಬ್ಬು ಕಟಾವು ಆರಂಭಗೊಂಡಿದೆ.


• **ಉದಯವಾಹಿನಿ ಬೆಳಗಾವಿ:**

ಕಬ್ಬು ಬೆಳೆಗಾರರ ಹೋರಾಟಕ್ಕೆ ತೆರೆ ಬಿದ್ದ ಬೆನ್ನಲ್ಲೇ ಜಿಲ್ಲೆಯಾದ್ಯಂತ ಕಬ್ಬು ಕಟಾವು ಕಾರ್ಯ ಚುರುಕುಗೊಂಡಿದೆ. ರೈತರು ಹೊಲಗಳಲ್ಲಿ ಕಟಾವು ಕಾರ್ಯ ಆರಂಭಿಸಿದ್ದು, ಸಕ್ಕರೆ ಕಾರ್ಖಾನೆಗಳೂ ಕಾರ್ಯಾರಂಭ ಮಾಡಿವೆ. ಮತ್ತೊಂದೆಡೆ ಜಿಲ್ಲಾಡಳಿತ ಪ್ರಕಟಿಸಿರುವ ಕಬ್ಬಿನ ದರಪಟ್ಟಿಯನ್ನು ಜಿಲ್ಲೆಯ 29 ಸಕ್ಕರೆ ಕಾರ್ಖಾನೆಗಳು ತಮ್ಮ ಸೂಚನಾ ಫಲಕಗಳಲ್ಲಿ

1 : ಕಬ್ಬಿಗೆ 3,600 ರೂ. ದರ ಘೋಷಿಸಿದ್ದರು
2 : ಘೋಷಿತ ದರಕ್ಕೆ ಒಪ್ಪದ ಮುಖಂಡರು
3 : ಒಪ್ಪಿಗೆ ಸೂಚಿಸಿ ಹೋರಾಟಕ್ಕೆ ತೆರೆ ಎಳೆ

ಅಳವಡಿಸುವ ಮೂಲಕ ಅಧಿಕೃತವಾಗಿ ಪ್ರಕಟಿಸಿವೆ.

ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸುವಂತೆ ಆಗ್ರಹಿಸಿ ಕಳೆದ ಎರಡು ತಿಂಗಳಿಂದ ಜಿಲ್ಲೆಯಲ್ಲಿ ರೈತರ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಪ್ರತಿಭಟನೆ, ರಸ್ತೆ ತಡೆ ಹಾಗೂ ಪಾದಯಾತ್ರೆಗಳ ಮೂಲಕ ರೈತರು ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಅಂತಿಮವಾಗಿ ನವೆಂಬರ್ 4ರಂದು ರಾತ್ರಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಪ್ರತಿ ಟನ್


ಉದಯವಾಹಿನಿ ಚಿತ್ರ

ಕಬ್ಬಿಗೆ 3,600 ರೂ. ದರ ಘೋಷಿಸಿದ್ದರು.

ಆದರೆ, ಘೋಷಿತ ದರಕ್ಕೆ ಒಪ್ಪದ ರೈತ ಮುಖಂಡರು ಹೋರಾಟ ಮುಂದುವರೆಸಿದ್ದರು. ಬೆಳಗಾವಿ ನಗರದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಚೂನಪ್ಪ ಪೂಜಾರಿ ನೇತೃತ್ವದಲ್ಲಿ ರೈತರು ಪಾದಯಾತ್ರೆ ಮೂಲಕ ನಗರ ಪ್ರವೇಶಿಸಲು ಮುಂದಾಗಿದ್ದರು. ಈ ವೇಳೆ ಪೊಲೀಸರು ಅವರನ್ನು ತಡೆದು ವಶಕ್ಕೆ ಪಡೆದಿದ್ದರು. ಜಿಲ್ಲೆಯ ಹಲವು ಕಡೆ ಹೆದ್ದಾರಿ ತಡೆದು ರೈತರು ಪ್ರತಿಭಟನೆ ನಡೆಸಿದ್ದರು.

ನ.4ರ ಸಭೆಯ ದರವೇ ಅಂತಿಮ: ಕಬ್ಬು ಬೆಳೆಗಾರರು ಹಾಗೂ ಬೆಳಗಾವಿಯ ಸಕ್ಕರೆ ಕಾರ್ಖಾನೆಯ ಮಾಲೀಕರು ಜಿಲ್ಲಾ ಉಸ್ತುವಾರಿ

> ಚೂನಪ್ಪ ಪೂಜಾರಿ ಅವರು ಕೂಡ ಘೋಷಿತ ದರಕ್ಕೆ ಒಪ್ಪಿಗೆ ಸೂಚಿಸಿ ಹೋರಾಟಕ್ಕೆ ತೆರೆ ಎಳೆದಿದ್ದರು. ಶುಕ್ರವಾರದಿಂದ ಸಕ್ಕರೆ ಕಾರ್ಖಾನೆಗಳು ಆರಂಭವಾಗಲಿ ಎಂದು ಕರೆ ನೀಡಿದ್ದರು. ಈ ಬೆನ್ನಲ್ಲೇ ಜಿಲ್ಲೆಯ ವಿವಿಧೆಡೆ ಕಬ್ಬು ಕಟಾವು ಕಾರ್ಯ ಆರಂಭಗೊಂಡಿದ್ದು, ಕಾರ್ಖಾನೆಗಳತ್ತ ಕಬ್ಬು ಸಾಗಣೆಗೂ ಸಿದ್ದತೆ ನಡೆದಿದೆ. -ರೈತರು

ಸಚಿವ ಸತೀಶ ಜಾರಕಿಹೊಳಿ ಅವರ ಸಮ್ಮುಖದಲ್ಲಿ ಚರ್ಚಿಸಿ ದರವನ್ನು ಅಂತಿಮಗೊಳಿಸಲಾಗಿದೆ. ಮೊದಲ ಕಂತಿನಲ್ಲಿ ಪ್ರತಿ ಟನ್ ಕಬ್ಬಿಗೆ 3,500 ರೂ. ಪಾವತಿಸುವುದು. ಹಂಗಾಮು ಮುಕ್ತಾಯಗೊಂಡ ಬಳಿಕ ಎರಡನೇ ಕಂತಿನಲ್ಲಿ 100 ರೂ. ಹೆಚ್ಚುವರಿಯಾಗಿ ನೀಡುವುದು. ಅಲ್ಲದೇ, ಹೊಸ ಹಂಗಾಮು ಆರಂಭವಾಗುವ ಮೊದಲು ಪ್ರತಿ ಕೆ.ಜಿ. ಸಕ್ಕರೆಯ ಸರಾಸರಿ ಮಾರುಕಟ್ಟೆ ದರ 45 ರೂ. ಮೀರಿದರೆ, ಅದರ ಆಧಾರದ ಮೇಲೆ ಅಂತಿಮ ಕಂತಿನ ಹಣ ಪಾವತಿಸಲಾಗುತ್ತದೆ. ಸಕ್ಕರೆಯ ಸರಾಸರಿ ದರ 48 ರೂ. ಇದ್ದರೆ ಪ್ರತಿ ಟನ್ ಕಬ್ಬಿಗೆ 3,650 ರೂ., 49 ರೂ. ಇದ್ದರೆ 3,750 ರೂ., 50 ರೂ. ದರವಿದ್ದರೆ 3,850 ರೂ. ಹಾಗೂ 55 ರೂ. ದರವಿದ್ದರೆ 4,350 ರೂ. ದರ

> ಇದರೊಂದಿಗೆ ಜಿಲ್ಲಾಡಳಿತ ಪ್ರಕಟಿಸಿರುವ ದರಪಟ್ಟಿಯನ್ನು ಜಿಲ್ಲೆಯ 29 ಸಕ್ಕರೆ ಕಾರ್ಖಾನೆಗಳು ನ.4ರಂದೇ ಸೂಚನಾ ಫಲಕಗಳಲ್ಲಿ ಅಳವಡಿಸಿವೆ. ಎರಡು ತಿಂಗಳಿನಿಂದ ನಡೆಯುತ್ತಿದ್ದ ಕಬ್ಬಿನ ದರದ ಹೋರಾಟಕ್ಕೆ ವಿರಾಮ ದೊರೆತಿದ್ದು, ಇದೀಗ ಕಬ್ಬು ಕಟಾವು ಹಾಗೂ ಕಾರ್ಖಾನೆಗಳ ಕಾರ್ಯಚಟುವಟಿಕೆಗಳು ಪುನರಾರಂಭಗೊಂಡಿವೆ.

ನಿಗದಿಪಡಿಸಲಾಗಿದೆ. ಸಕ್ಕರೆ ಮಾರಾಟದ ಸರಾಸರಿ ಲಾಭದಲ್ಲಿ ಶೇ.75ರಷ್ಟು ರೈತರಿಗೆ ಹಾಗೂ ಶೇ.25ರಷ್ಟು ಸಕ್ಕರೆ ಕಾರ್ಖಾನೆಗಳಿಗೆ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ.

ಇದು ಅಧಿಕೃತ ಒಪ್ಪಂದವಾಗಿರುತ್ತದೆ. ಆದರೆ ಕೆಲ ಮಾಧ್ಯಮಗಳಲ್ಲಿ ಬೇರೆ ಬೇರೆ ಹೇಳಿಕೆ ಆಧರಿಸಿ ವಿಭಿನ್ನ ದರವನ್ನು ಪ್ರಕಟಿಸುತ್ತಿರುವುದು ಗಮನಿಸಲಾಗಿದೆ. ಸಭೆಯಲ್ಲಿ ಚರ್ಚಿಸಿದಂತೆ ಅಂತಿಮಗೊಳಿಸಲಾಗಿರುವ ದರವನ್ನು ಲಿಖಿತವಾಗಿ ನೀಡಲಾಗಿರುತ್ತದೆ. ಸಭೆಯ ಬಳಿಕ ದಿನಾಂಕ ನ.4ರಂದು ರಾತ್ರಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಗಿರುವ ದರಗಳೇ ಅಧಿಕೃತವಾಗಿವೆ. ಇದನ್ನು ಹೊರತುಪಡಿಸಿ ಬೇರೆ ರೀತಿಯ ದರವನ್ನು ಅಂತಿಮಗೊಳಿಸಿಲ್ಲ ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ಯೋಜನೆಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ವಹಿಸಿದರೆ ಸಹಿಸಲ್ಲ

• **ಉದಯವಾಹಿನಿ ಕಲಬುರಗಿ,:**

ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ವಹಿಸುವುದನ್ನು ಸಹಿಸಲು ಸಾಧ್ಯವಿಲ್ಲ ಎಂದು ಕಲಬುರಗಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ನಜಮ ಉಲ್ ಇಸ್ಲಾಂ ಹೇಳಿದರು. ಗುರುವಾರದಂದು ಕಲಬುರಗಿ ತಾಲ್ಲೂಕಿನ ಫರಹತಾಬಾದ ಹೋಬಳಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಆಯೋಜಿಸಲಾಗಿದ್ದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಕರ್ನಾಟಕ ರಾಜ್ಯ ಸರ್ಕಾರವು ಅತ್ಯಂತ ಕಾಳಜಿಯಿಂದ ಜಾರಿಗೆ ತಂದಿರುವ ಶಕ್ತಿ,ಅನ್ನಭಾಗ್ಯ, 'ಗೃಹ ಜ್ಯೋತಿ, ಗೃಹಲಕ್ಷ್ಮಿ ಹಾಗೂ ಯುವನಿಧಿ ಯೋಜನೆಗಳು ಅರ್ಹ ಹಾಗೂ ಅಗತ್ಯವಿರುವ ಪ್ರತಿಯೊಬ್ಬ ಫಲಾನುಭವಿಗೆ ನೇರವಾಗಿ ತಲುಪಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪರಸ್ಪರ ಸಮನ್ವಯತೆಯಿಂದ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಅಲ್ಲದೆ, ಅತ್ಯಂತ ಪ್ರಮುಖವಾದ ಈ ಪ್ರಗತಿ ಪರಿಶೀಲನಾ


ಉದಯವಾಹಿನಿ ಚಿತ್ರ

ಸಭೆಗೆ ಗೈರುಹಾಜರಾದ ವಿವಿಧ ಇಲಾಖೆಗಳ ಅಧಿಕಾರಿಗಳ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಗೈರಾದ ಅಧಿಕಾರಿಗಳಿಗೆ ಕೂಡಲೇ ಕಾರಣ ಕೇಳಿ ನೋಟಿಸ್ ಜಾರಿಗೊಳಿಸುವಂತೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಕಲಬುರಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಯ ಯೋಜನಾ ನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಇಲಾಖೆಯ ಸಹಾಯಕ ನಿರ್ದೇಶಕರು ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

ಜನಗಣತಿಯಿಂದ ಯಾರು ಹೊರಗುಳಿಯದಂತೆ ಎಚ್ಚರ ವಹಿಸಿ

• **ಉದಯವಾಹಿನಿ ಬೀದರ:**

2027ರ ಜನಗಣತಿಯಲ್ಲಿ ಯಾವುದೇ ಮನೆ ಅಥವಾ ವ್ಯಕ್ತಿ ಬಿಟ್ಟುಹೋಗದಂತೆ ಎಚ್ಚರಿಕೆ ವಹಿಸಬೇಕು. ಈಗಾಗಲೇ ಮುಂಬರುವ ಜನಗಣತಿ ಪ್ರಕ್ರಿಯೆಯ ಎರಡನೇ ಹಂತದ ಸಿದ್ಧತೆಗಳು ಮತ್ತು ಮೇಲ್ವಿಚಾರಣಾ ಮಾರ್ಗಸೂಚಿಗಳ ಕುರಿತು ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಸುರೇಖಾ ತಿಳಿಸಿದರು.

ಜಿಲ್ಲಾ ಪಂಚಾಯತ ಕಛೇರಿ ಸಭಾಂಗಣದಲ್ಲಿ ಭಾರತ ಜನಗಣತಿ 2027ರ ಎರಡನೇ ಹಂತದ ಕಾರ್ಯಚರಣೆಗಾಗಿ ಜನಗಣತಿ ಕಾರ್ಯನಿರ್ವಹಿಸಲಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಆಯೋಜಿಸಿದ ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು. ಜನಗಣತಿಯ ಮೊದಲ ಹಂತದಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿರುವ ಮನೆಗಳ ಪಟ್ಟಿ ಮಾಡುವಿಕೆಯ ಬ್ಲಾಕ್ ಈಗ ಜನಸಂಖ್ಯೆ ಜನಗಣತಿಗಾಗಿ ಎರಡನೇ ಹಂತಕ್ಕೆ ವರ್ಗಾಯಿಸಲ್ಪಡಲಿವೆ. ಮೊದಲ ಹಂತದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ ಎನ್ಯುಮರೇಟರ್‌ಗಳು ಮತ್ತು ಮೇಲ್ವಿಚಾರಕರು ತಮ್ಮ ಜವಾಬ್ದಾರಿಗಳನ್ನು ಮುಂದುವರಿಸಲಿದ್ದಾರೆ ಎಂದರು.



ಉದಯವಾಹಿನಿ ಚಿತ್ರ

ಪ್ರತಿ ಕುಟುಂಬದ ಪ್ರತಿಯೊಬ್ಬ ಸದಸ್ಯರ ಮಾಹಿತಿಯನ್ನು ಕವರ್ ಮಾಡುವುದು ಈ ಹಂತದ ಮುಖ್ಯ ಉದ್ದೇಶವಾಗಿದೆ. ಈ ಬಾರಿಯ ಜನಗಣತಿಯು ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಮೊಬೈಲ್ ಆಪ್ ಮತ್ತು ಸಿಎಂಎಸ್ ಪೋರ್ಟಲ್ ಮೂಲಕ ಮೇಲ್ವಿಚಾರಣೆ ಹಾಗೂ ಸ್ವಯಂ ಜನಗಣತಿ (ಸೌಲಭ್ಯವನ್ನು ಕಲ್ಪಿಸಲಾಗಿದೆ. ಜನಗಣತಿ ಉಸ್ತುವಾರಿ ಅಧಿಕಾರಿ ಹಾಗೂ ಮೇಲ್ವಿಚಾರಕರು ಕ್ಷೇತ್ರ ಮಟ್ಟದಲ್ಲಿ ನಿರಂತರವಾಗಿ ಪರಿಶೀಲನೆ ನಡೆಸಿ ಎಂದರು.ತರಬೇತಿ ಕಾರ್ಯಗಾರದಲ್ಲಿ ಜನಗಣತಿ-2027ರ ಎರಡನೇ ಹಂತದ ಜಿಲ್ಲಾ ನೋಡಲ್ ಅಧಿಕಾರಿ ಸತ್ಯೇಂದ್ರಕುಮಾರ ಅವರು ಜನಗಣತಿ ಕಾರ್ಯನಿರ್ವಹಿಸಲಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಿದರು.

ಮಗನ ಸಾವಿನ ನೋವಲ್ಲಿ ತಂದೆಯೂ ನಿಧನ!

• **ಉದಯವಾಹಿನಿ ಹಾಸನ:**

ಇತ್ತೀಚೆಗಷ್ಟೇ ಉತ್ತರಾಖಂಡದಲ್ಲಿ ಸಂಭವಿಸಿದ ಹೆಲಿಕಾಪ್ಟರ್ ಅಪಘಾತದಲ್ಲಿ ಉದ್ಯಮಿ ಪ್ರತಾಪ್ ಗೌಡ ಸಾವನ್ನಪ್ಪಿದ ಬೆನ್ನಲ್ಲೇ, ಅವರ ತಂದೆ ನಿಂಗರಾಜು ಅವರು ನಿನ್ನೆ (ನವೆಂಬರ್ 5) ರಾತ್ರಿ ನಿಧನರಾಗಿದ್ದಾರೆ. ತೀವ್ರ ಅನಾರೋಗ್ಯದ ಜೊತೆಗೆ ಮಗನನ್ನು ಕಳೆದುಕೊಂಡ ತೀವ್ರ ದುಃಖ ಹಾಗೂ ಚಿಂತೆಯಲ್ಲಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಹಾಸನ ತಾಲ್ಲೂಕಿನ ಜೋಡಿ ಕೃಷ್ಣಾಪುರದಲ್ಲಿ ಟೈಲರ್ ಆಗಿ ವೃತ್ತಿಜೀವನ ಆರಂಭಿಸಿದ್ದ ನಿಂಗರಾಜು, ನಂತರ ಸಕಲೇಶಪುರ ತಾಲ್ಲೂಕಿನ ಬಾಚಿಹಳ್ಳಿ ಗ್ರಾಮದಲ್ಲಿ ನೆಲೆಸಿದ್ದರು. ಅವರ ಪುತ್ರ ಪ್ರತಾಪ್ ಗೌಡ ಬೆಂಗಳೂರಿಗೆ ತೆರಳಿ ಕಂಟ್ರಾಕ್ಟರ್ ಹಾಗೂ ಯಶಸ್ವಿ ಉದ್ಯಮಿಯಾಗಿ ಬೆಳೆದಿದ್ದರು. ಮಗನ ಆಕಸ್ಮಿಕ ಸಾವಿನ ಆಘಾತದಿಂದ ಚೇತರಿಸಿಕೊಳ್ಳಲಾಗದ ನಿಂಗರಾಜು ಅವರ ಅಂತ್ಯಕ್ರಿಯೆಯು ಸ್ವಗ್ರಾಮ ಬಾಚಿಹಳ್ಳಿಯಲ್ಲಿ ನೆರವೇರಲಿದೆ.

ಬಡವರ ಬದುಕಿಗೆ ಕಾಂಗ್ರೆಸ್ ಬರೆ

• **ಉದಯವಾಹಿನಿ ಬೀದರ್:**


ಉದಯವಾಹಿನಿ ಚಿತ್ರ

ಹಾಲಿನ ದರ ಹೆಚ್ಚಿಸಿದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ಸರ್ಕಾರ ಬಸ್ ಪ್ರಯಾಣ ದರವನ್ನು ಗಣನೀಯವಾಗಿ ಹೆಚ್ಚಿಸುವ ಮುಖಾಂತರ ಬಡವರ ಬದುಕು ಮೂರಾಬಟ್ಟೆ ಮಾಡಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿಯಾದ ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಕಿಡಿಕಾರಿದ್ದಾರೆ.

ಕಾಂಗ್ರೆಸ್ ಸರ್ಕಾರ ಬಡ ಹಾಗೂ ಮಧ್ಯಮ ವರ್ಗದ ಪಕ್ಕಾ ವಿರೋಧಿಯಿದೆ ಎಂಬುದು ಅದರ ಆಡಳಿತವೇ ಸಾಬೀತುಪಡಿಸಿದೆ. ಜನಸಾಮಾನ್ಯರ ಬದುಕು ದುರ್ಬರ ಮಾಡಿರುವ ಈ ಸರ್ಕಾರಕ್ಕೆ ರಾಜ್ಯದ ಜನ ತಕ್ಕ ಪಾಠ ಕಲಿಸುವ ದಿನ ಹತ್ತಿರವಾಗಿವೆ ಎಂದು ಇಲ್ಲಿ ಹೊರಡಿಸಿರುವ ಜಂಟಿ ಪ್ರಕಟಣೆಯಲ್ಲಿ ಹೇಳಿದ್ದಾರೆ. ಕೆಎಸ್‌ಆರ್‌ಟಿಸಿಯ ನಾಲ್ಕು ವಿಭಾಗ, ಬಿಎಂಟಿಸಿಯ ಬಸ್ ಪ್ರಯಾಣ ದರ ಸುಮಾರು

> **ಎಸ್‌ಐಆರ್ ವಿರೋಧಿ ಹೋರಾಟಕ್ಕೆ ಕಾಂಗ್ರೆಸ್ ನಾಯಕರು ಸೀಮಿತರಾಗಿ ತಮ್ಮ ಹೊಣೆಯಿಂದ ವಿಮುಖರಾಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಶೇ.25ರಿಂದ 30ರಷ್ಟು ಹೆಚ್ಚಾಗಿದೆ. ಇದು ರಾಜ್ಯದ ಜನರಿಗೆ ದೀಪಾವಳಿಗೆ ನೀಡಿದ ಕರಾಳ ಉಡುಗೊರೆಯಾಗಿದೆ. ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ಎಡವಿರುವ ಈ ಸರ್ಕಾರ ಆರ್ಥಿಕ ದಿವಾಳಿಗೆ ಬಂದಿದೆ. ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಭಾಗ್ಯ ಕಲ್ಪಿಸಿದ್ದೇವೆ ಎನ್ನುವ ಸರ್ಕಾರ ಇತ್ತ ಅತ್ಯಧಿಕ ಬೆಲೆ ಹೆಚ್ಚಿಸಿ ಇನ್ನೊಂದು ಜೇಬಿನಿಂದ ದುಪ್ಪಟ್ಟು ಹಣ ವಸೂಲಿ ಮಾಡುತ್ತಿದೆ. ಇದು ರಾಜ್ಯದ ಜನರಿಗೆ ಕಾಂಗ್ರೆಸ್ ಕೊಟ್ಟ ದೌರ್ಭಾಗ್ಯವಾಗಿದೆ ಎಂದು ಟೀಕಿಸಿದ್ದಾರೆ. ಬರಗಾಲದಿಂದ ರೈತರು ಹೈರಾಣಾಗಿದ್ದಾರೆ. ಆದರೆ, ಈ ಕಾಂಗ್ರೆಸ್ ಸರ್ಕಾರದ ಮಂತ್ರಿಗಳು ಕೇವಲ ದಿಲ್ಲಿ ಹೈಕಮಾಂಡ್ ಸುತ್ತ ತಿರುಗುವ ಕೆಲಸ ಮಾಡುತ್ತಿದ್ದಾರೆ. ಸ್ಟಿಂಗ್ ಆಪರೇಷನ್ ಬಗ್ಗೆ ದಿನವೂ ಕಾಂಗ್ರೆಸ್ ಸಚಿವರು, ನಾಯಕರೇ ಹೇಳಿಕೆಗಳು ನೀಡುತ್ತ ಅಭಿವೃದ್ಧಿಯೇ ಮರೆತಿದ್ದಾರೆ.

ಗೋಪುರದ ಸ್ಥಳಾಂತರ, ಹೆಚ್ಚುವರಿ ಎತ್ತರ ಕಾರ್ಯ ಆರಂಭ

• **ಉದಯವಾಹಿನಿ ಮೂಲ್ಕಿ:**

ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸರ್ವಿಸ್ ರಸ್ತೆ ನಿರ್ಮಾಣವಾಗಲಿದ್ದು ಈ ಸಂದರ್ಭ ಮೂಲ್ಕಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಎದುರುಗಡೆಯಿದ್ದ ಸ್ವಾಗತ ಗೋಪುರವನ್ನು ಕೆಡಹುವ ಬದಲಿಗೆ ನೇರವಾಗಿ ಸುಮಾರು 51 ಅಡಿ ಸ್ಥಳಾಂತರಿಸಿದ್ದು , ಸ್ವಾಗತ ದ್ವಾರವನ್ನು ಅಂತಿಮವಾಗಿ ಪ್ರತಿಷ್ಠಾಪನೆಗೊಳ್ಳಬೇಕಾದ ನಿಗದಿತ ಸ್ಥಳಕ್ಕೆ ತಲುಪಿಸಲಾಗಿದೆ.

ಇದೀಗ ವಾರ್ಷಿಕ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ವಿಮಾನ ರಥವು ಈ ದ್ವಾರದ ಮೂಲಕ ಸುಗಮವಾಗಿ ಹಾಗೂ ಸುರಕ್ಷಿತವಾಗಿ ಸಾಗಲು ಅಗತ್ಯವಿರುವಷ್ಟು ಎತ್ತರದ ಅಂತರ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಈ ಹೆಚ್ಚುವರಿ ಎತ್ತರವನ್ನು ಸುರಕ್ಷತಾ ಕ್ರಮವಾಗಿ ಪರಿಗಣಿಸಲಾಗಿದೆ. ಮತ್ತೊಂದು ತಾಂತ್ರಿಕ ಸಲಹೆಯಂತೆ ಸಂಪೂರ್ಣ ದ್ವಾರವನ್ನು ಹೆಚ್ಚುವರಿಯಾಗಿ 1 ಅಡಿ (12 ಇಂಚು) ಎತ್ತರಕ್ಕೆ ಮೇಲಕ್ಕೆತ್ತಲು ಶಿಫಾರಸು ಮಾಡಲಾಗಿದೆ.

ವಾರ್ಡನ್ ನೇಮಕ: ವಿಧಾನ ಮಂಡಲ ಸಮಿತಿ ಸೂಚನೆ

• **ಉದಯವಾಹಿನಿ ಮಂಗಳೂರು–**

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಅಡಿಯಲ್ಲಿ ಬರುವ ಪ್ರತಿ ಹಾಸ್ಟೆಲ್‌ಗೆ ಒಬ್ಬರು ವಾರ್ಡನ್‌ನಂತೆ ಎಲ್ಲಾ ಹಾಸ್ಟೆಲ್‌ಗಳಿಗೆ ಮುಂದಿನ 15 ದಿನಗಳೊಳಗೆ ವಾರ್ಡನ್‌ಗಳನ್ನು ನೇಮಿಸುವಂತೆ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ನಿರ್ದೇಶಿಸಿದೆ.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಸಭೆ ನಡೆಯಿತು.

ಜಿಲ್ಲೆಯ ಹಾಸ್ಟೆಲ್‌ಗಳಲ್ಲಿ ಪೂರ್ಣ ಪ್ರಮಾಣದ ವಾರ್ಡನ್‌ಗಳ ತೀವ್ರ ಕೊರತೆ ಇದ್ದು, ಒಬ್ಬೊಬ್ಬ ವಾರ್ಡನ್‌ಗೆ 3-4 ಹಾಸ್ಟೆಲ್ ಉಸ್ತುವಾರಿ ವಹಿಸಿರುವುದು ಸರಿಯಲ್ಲ.


ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳ ಹಿತ ರಕ್ಷಣೆ, ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಮೂಲಸೌಕರ್ಯ, ಊಟದ ವ್ಯವಸ್ಥೆ ಹಾಗೂ ಭದ್ರತೆಯಲ್ಲಿ ಲೋಪ ಬಾರದಂತೆ ನೋಡಿಕೊಳ್ಳಲು ಪ್ರತಿ ಹಾಸ್ಟೆಲ್‌ಗೆ ಪೂರ್ಣ ಪ್ರಮಾಣದ ವಾರ್ಡನ್ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಮುಂದಿನ 15 ದಿನಗಳೊಳಗೆ ಸಂಬಂಧಪಟ್ಟ ಇಲಾಖೆಗಳು ಅಗತ್ಯ ಕ್ರಮ ಕೈಗೊಂಡು ಪ್ರತಿ ಹಾಸ್ಟೆಲ್‌ಗೆ ಒಬ್ಬರಂತೆ ವಾರ್ಡನ್ ನಿಯುಕ್ತಿಗೊಳಿಸುವಂತೆ ಅಧ್ಯಕ್ಷರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಯಾವುದೇ ಹಾಸ್ಟೆಲ್ ವಾರ್ಡನ್ ಇಲ್ಲದೆ ಖಾಲಿ ಉಳಿಯಬಾರದು. ಹೆಚ್ಚುವರಿ ಪ್ರಭಾರ ವ್ಯವಸ್ಥೆಗೆ ಬದಲಾಗಿ ಪ್ರತಿಯೊಂದು ಹಾಸ್ಟೆಲಿಗೆ ನಿಯಮಿತವಾದ ವಾರ್ಡನ್ ನಿಯೋಜಿಸಬೇಕು ಎಂದು ಅವರು ಸೂಚಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ 23 ಹಾಸ್ಟೆಲ್ ಗಳು ಬಾಡಿಗೆ ಕಟ್ಟಡದಲ್ಲಿದ್ದು, ಇವುಗಳಿಗೆ ಜಮೀನು ಮಂಜೂರು ಮಾಡಿ ಸ್ವಂತ ಕಟ್ಟಡ ನಿರ್ಮಿಸಬೇಕು.

ಪ್ರತಿ ಹಾಸ್ಟೆಲ್‌ಗೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಬೇಕು ಎಂದು ಸಮಿತಿಯು ಜಿಲ್ಲಾಧಿಕಾರಿಗಳಿಗೆ ಸೂಚಿಸಿತು.

ಜೀವ ಮರಳಿ ಪಡೆದ, ಆತ್ಮಹತ್ಯೆಗೆ ಯತ್ನಿಸಿದ ಮಹಿಳೆ

• **ಉದಯವಾಹಿನಿ ಸುಬ್ರಹ್ಮಣ್ಯ:**

ವೈಯಕ್ತಿಕ ಕಾರಣಗಳಿಂದ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ ಉಡುಪಿ ಮೂಲದ ಮಹಿಳೆಯೊಬ್ಬರನ್ನು ಮೊಸಳೆಯೊಂದು ಸಣ್ಣ ಗಾಯಗೊಳಿಸಿದರೂ, ಆಕೆಯ ಜೀವ ಉಳಿಸಿದ ರೋಚಕ ಘಟನೆ ಕುಮಾರಧಾರಾ ಸೇತುವೆ ಬಳಿ ನಡೆದಿದೆ. ನವೆಂಬರ್ 4ರಂದು ರಾತ್ರಿ ಮಹಿಳೆ ಉಡುಪಿಯಿಂದ ಸುಬ್ರಹ್ಮಣ್ಯಕ್ಕೆ ಬಂದು, ಇಲ್ಲಿನ ಕುಮಾರಧಾರಾ ಸೇತುವೆ ಬಳಿ ವೈಯಕ್ತಿಕ ಕಾರಣಗಳಿಂದ ಬೇಸತ್ತು ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಈ ವೇಳೆ ನದಿಯಲ್ಲಿದ್ದ ಮೊಸಳೆ ಆಕೆಯನ್ನು ಕಚ್ಚಿ ಸಣ್ಣ ಪ್ರಮಾಣದಲ್ಲಿ ಗಾಯಗೊಳಿಸಿದೆ. ಮೊಸಳೆಯ ದಾಳಿಯಿಂದ ನೋವು ಹಾಗೂ ಆಘಾತಗೊಂಡ ಮಹಿಳೆ ಜೋರಾಗಿ ಕಿರುಚಿಕೊಂಡಿದ್ದಾರೆ. ಆಕೆಯ ಬೊಬ್ಬೆ ಶಬ್ದ ಕೇಳಿ ತಕ್ಷಣ ಎಚ್ಚೆತ್ತ ಸಮೀಪದ ಲಾಡ್ಜ್ ಒಂದರ ಕೆಲಸಗಾರರು ಕೂಡಲೇ ಸುಬ್ರಹ್ಮಣ್ಯ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಸುಬ್ರಹ್ಮಣ್ಯ ಪೊಲೀಸರು, ಸ್ಥಳೀಯ ಸಾರ್ವಜನಿಕರ ಹಿರಿಯ ಸಹಕಾರದೊಂದಿಗೆ ಸಾಹಸಪಟ್ಟು ಮಹಿಳೆಯನ್ನು ಸುರಕ್ಷಿತವಾಗಿ ರಕ್ಷಿಸಿ ದಡಕ್ಕೆ ಕರೆತಂದಿದ್ದಾರೆ.

ಅವಗೋವಾ ಕಂಪನಿಯಲ್ಲಿ 8 ಲಕ್ಷ ರೂ. ವೇತನದ ಉದ್ಯೋಗ

• **ಉದಯವಾಹಿನಿ ಬೀದರ್ :**


ಉದಯವಾಹಿನಿ ಚಿತ್ರ
ANKITA

ಲಿಂಗರಾಜ ಅಪ್ಪ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮತ್ತೊಮ್ಮೆ ತಮ್ಮ ಪ್ರತಿಭೆ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದು, ಪ್ರತಿಷ್ಠಿತ ಅವಗೋವಾ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕ್ಯಾಂಪಸ್ ನೇಮಕಾತಿಯಲ್ಲಿ ವಾರ್ಷಿಕ 8 ಲಕ್ಷ ರೂ. ವೇತನದೊಂದಿಗೆ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ.

ಕಾಲೇಜಿನ ಇಇ ವಿಭಾಗದ ವಿದ್ಯಾರ್ಥಿನಿ ಅಂಕಿತಾ ಅವರು 8 ಎಲ್‌ಪಿ ಎ ವೇತನದೊಂದಿಗೆ ಆಯ್ಕೆಯಾಗಿರುವುದು ಕಾಲೇಜಿನ ಶೈಕ್ಷಣಿಕ ಸಾಧನೆಗೆ ಮತ್ತೊಂದು ಗರಿಮೆಯಾಗಿದೆ.ಆಯ್ಕೆಯಾದ ವಿದ್ಯಾರ್ಥಿಗಳಲ್ಲಿ ವೈಷ್ಣವಿ ಎಖೆಲ್ಲಿ, ಸ್ವೀಟಿ, ಚೇತನಾ, ಪ್ರಿಯಾಂಕಾ ರಾಯ್, ಪ್ರಣತಿ ಕುಲಕರ್ಣಿ, ಸುಕನ್ಯಾ ಭೂಷೆಟ್ಟಿ, ಸುಮಿತ್ ನವಣೆ ಸೇರಿದ್ದಾರೆ ಇದರೊಂದಿಗೆ ಸಿಎಸ್‌ಇ ವಿಭಾಗದ ಒಟ್ಟು 20 ವಿದ್ಯಾರ್ಥಿಗಳು ಇದೇ ಕಂಪನಿಯಲ್ಲಿ ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ. ಒಟ್ಟಾರೆಯಾಗಿ ಎರಡು ವಿಭಾಗಗಳ ವಿದ್ಯಾರ್ಥಿಗಳು ಉತ್ತಮ ಉದ್ಯೋಗಾವಕಾಶ ಪಡೆದುಕೊಂಡಿರುವುದು ಕಾಲೇಜಿನ ಶೈಕ್ಷಣಿಕ ಗುಣಮಟ್ಟ, ವಿದ್ಯಾರ್ಥಿಗಳ ಪರಿಶ್ರಮ ಹಾಗೂ ತರಬೇತಿ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಕಂಪನಿಯ ನೇಮಕಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ತಮ್ಮ ತಾಂತ್ರಿಕ ಜ್ಞಾನ, ಸಂವಹನ ಕೌಶಲ್ಯ , ಸಮಸ್ಯೆ ಪರಿಹರಿಸುವ ಸಾಮರ್ಥ್ಯ ಸಂದರ್ಶನದ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಈ ಸಾಧನೆಯು ಇತರ ವಿದ್ಯಾರ್ಥಿಗಳಿಗೂ ಉನ್ನತ ಗುರಿ ಹೊಂದಲು ಮತ್ತು ಉದ್ಯೋಗ ಮಾರುಕಟ್ಟೆಗೆ ಸಿದ್ಧರಾಗಲು ಪ್ರೇರಣೆಯಾಗಿದೆ.

ಮಾಲೀಕರ ಪತ್ತೆಯೇ ಜಿಐಎಸ್ ಸಮೀಕ್ಷೆಗೆ ದೊಡ್ಡ ಸವಾಲು

ಜಿಲ್ಲೆಯಲ್ಲಿ ಅನೇಕರು ನಿವೇಶನ ಖರೀದಿಸಿ ಬೇರೆಡೆ ವಾಸವಾಗಿದ್ದಾರೆ. ನಿವೇಶನದ ಮಾಹಿತಿ ಲಭ್ಯವಿದ್ದರೂ, ಸಮೀಕ್ಷಾ ಸಿಬ್ಬಂದಿಗೆ ಸಮಸ್ಯೆಯಾಗಿದೆ.

• **ಉದಯವಾಹಿನಿ ಹುಬ್ಬಳ್ಳಿ:**

ಹುಬ್ಬಳ್ಳಿ- ಧಾರವಾಡ ಮಹಾನಗರದ ಆಸ್ತಿ ತೆರಿಗೆ ವ್ಯವಸ್ಥೆಯನ್ನು ಮತ್ತಷ್ಟು ಸಮಗ್ರಗೊಳಿಸುವ ಹಾಗೂ ನಗರದ ಪ್ರತಿಯೊಂದು ಸ್ಥಿರಾಸ್ತಿಯ ನಿಖರ ಮಾಹಿತಿ ದಾಖಲಿಸುವ ಉದ್ದೇಶದಿಂದ ಮಹಾನಗರ ಪಾಲಿಕೆ ಕೈಗೊಂಡಿರುವ ಜಿಐಎಸ್ (ಭೌಗೋಳಿಕ ಮಾಹಿತಿ ವ್ಯವಸ್ಥೆ) ಸಮೀಕ್ಷೆಯ ಅಂತಿಮ ಹಂತವಾದ ಮನೆ ಮನೆ ಸಮೀಕ್ಷೆ ಪ್ರಗತಿಯಲ್ಲಿದೆ. ಆದರೆ, ಈ ಸಮೀಕ್ಷೆಗೆ ಒಳಪಡುವ

1 : ಮನೆ ಮನೆ ಜಿಐಎಸ್ ಸಮೀಕ್ಷೆ
2 : ವಾಣಿಜ್ಯ ಕಟ್ಟಡಗಳ ಸಮೀಕ್ಷೆ
3 : ಖಾಲಿ ನಿವೇಶನಗಳದ್ದೇ ಚಿಂತೆ

ಸಾವಿರಾರು ಖಾಲಿ ನಿವೇಶನಗಳ ಮಾಲೀಕರನ್ನು ಪತ್ತೆಹಚ್ಚಿ, ಅಗತ್ಯ ದಾಖಲೆಗಳನ್ನು ಸಂಗ್ರಹಿಸುವುದು ಪಾಲಿಕೆ ಅಧಿಕಾರಿಗಳು ಹಾಗೂ ಸಮೀಕ್ಷಾ ತಂಡಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ನಗರದಲ್ಲಿ ಮನೆ, ವಾಣಿಜ್ಯ ಕಟ್ಟಡಗಳ ಸಮೀಕ್ಷೆ ಒಂದು ಹಂತದಲ್ಲಿ ಸಾಗುತ್ತಿದ್ದರೆ, ಖಾಲಿ ನಿವೇಶನಗಳ ವಿಚಾರದಲ್ಲಿ ಮಾತ್ರ ಸಮೀಕ್ಷಾ ತಂಡಕ್ಕೆ ನಿರೀಕ್ಷಿತ ಸಹಕಾರ ದೊರೆಯುತ್ತಿಲ್ಲ. ನಿವೇಶನಗಳಲ್ಲಿ ಯಾರೂ ವಾಸವಿಲ್ಲದ ಕಾರಣ ಮಾಲೀಕರನ್ನು ನೇರವಾಗಿ ಸಂಪರ್ಕಿಸುವುದು ಕಷ್ಟಕರವಾಗಿದೆ. ಹೀಗಾಗಿ ನಿವೇಶನ ಮಾಲೀಕರು ಸ್ವಯಂಪ್ರೇರಿತರಾಗಿ ಮುಂದೆ ಬಂದು ತಮ್ಮ ಆಸ್ತಿಗೆ ಸಂಬಂಧಿಸಿದ


ಉದಯವಾಹಿನಿ ಚಿತ್ರ

ದಾಖಲೆಗಳನ್ನು ಒದಗಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಒಂದು ಲಕ್ಷದಷ್ಟು ಖಾಲಿ ನಿವೇಶನಗಳದ್ದೇ ಚಿಂತೆ: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 3.40 ಲಕ್ಷದಿಂದ 4.50 ಲಕ್ಷದವರೆಗೆ ಆಸ್ತಿಗಳಿರುವ ಕುರಿತು ಅಧಿಕಾರಿಗಳ ಅಂಕಿ - ಅಂಶಗಳಲ್ಲಿ ವ್ಯತ್ಯಾಸ ಕಂಡುಬರುತ್ತಿದೆ. ಇವುಗಳಲ್ಲಿ ವಸತಿ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ವಸತಿ ಮತ್ತು ವಾಣಿಜ್ಯ ಉದ್ದೇಶದ ಜಂಟಿ ಕಟ್ಟಡಗಳು,

> ಸೆಪ್ಟೆಂಬರ್ 28ರಿಂದ ಆರಂಭವಾಗಿರುವ ಮನೆ ಮನೆ ಸಮೀಕ್ಷೆಯಲ್ಲಿ ಈವರೆಗೆ ಸುಮಾರು 32 ಸಾವಿರ ಮನೆ ಹಾಗೂ ವಾಣಿಜ್ಯ ಕಟ್ಟಡಗಳ ಸಮೀಕ್ಷೆ ಪೂರ್ಣಗೊಂಡಿದೆ ಎಂದು ಲಭ್ಯ ಮಾಹಿತಿಯಲ್ಲಿ ತಿಳಿಸಲಾಗಿದೆ. ಆದರೆ, ಒಟ್ಟು ಆಸ್ತಿಗಳ ಸಂಖ್ಯೆಗೆ ಹೋಲಿಸಿದರೆ ಸಮೀಕ್ಷೆಯ ವೇಗ ಹೆಚ್ಚಿಸಬೇಕಾದ ಅಗತ್ಯವಿದೆ. -ಉಪ ಆಯುಕ್ತ ವಿಜಯಕುಮಾರ್

ಬಾಡಿಗೆ ಮನೆಗಳು ಹಾಗೂ ಖಾಲಿ ನಿವೇಶನಗಳು ಸೇರಿವೆ. ಸಮೀಕ್ಷೆಯ ವ್ಯಾಪ್ತಿಗೆ ಸುಮಾರು ಒಂದು ಲಕ್ಷದಷ್ಟು ಖಾಲಿ ನಿವೇಶನಗಳು ಒಳಪಟ್ಟಿದ್ದು, ಅವುಗಳ ಮಾಲೀಕರನ್ನು ಪತ್ತೆಹಚ್ಚುವುದು ಪ್ರಮುಖ ಸವಾಲಾಗಿದೆ. ನಗರ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಅನೇಕರು ನಿವೇಶನ ಖರೀದಿಸಿ ಬೇರೆಡೆ ವಾಸವಾಗಿದ್ದಾರೆ. ಹೀಗಾಗಿ ನಿವೇಶನ ಎಲ್ಲಿದೆ ಎಂಬ ಮಾಹಿತಿ ಲಭ್ಯವಿದ್ದರೂ, ಅದರ ಮಾಲೀಕರು ಯಾರು ಮತ್ತು ಅವರನ್ನು ಹೇಗೆ ಸಂಪರ್ಕಿಸಬೇಕು ಎಂಬುದು ಸಮೀಕ್ಷಾ ಸಿಬ್ಬಂದಿಗೆ ಸಮಸ್ಯೆಯಾಗಿದೆ. ಸಮೀಕ್ಷೆಗೆ ನಿಯೋಜಿಸಿರುವ ಖಾಸಗಿ ಸಂಸ್ಥೆಯ ಸಿಬ್ಬಂದಿ ಹಾಗೂ ಪಾಲಿಕೆ ಸಿಬ್ಬಂದಿಗೆ ಆಸ್ತಿ ಮಾಲೀಕರು ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ ಎಂಬ ದೂರುಗಳೂ ಕೇಳಿಬರುತ್ತಿವೆ. ಇದರ ಜತೆಗೆ ಇತ್ತೀಚಿನ ಹಬ್ಬಗಳು ಮತ್ತು ಸರ್ಕಾರಿ ರಜೆಗಳಿಂದಾಗಿ ಸಮೀಕ್ಷಾ ಕಾರ್ಯದ ವೇಗ ಕುಂಠಿತಗೊಂಡಿದೆ. ಹಬ್ಬದ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಯ ಸಿಬ್ಬಂದಿ ಸುಮಾರು ಒಂದು ವಾರ ರಜೆ

> ವೈಮಾನಿಕ ಸಮೀಕ್ಷೆಯೊಂದಿಗೆ ದಾಖಲೆಗಳ ತಾಳೆ ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಎಲ್ಲಾ ರೀತಿಯ ಆಸ್ತಿಗಳ ವಾಸ್ತವಿಕ ಸ್ಥಿತಿಯನ್ನು ಗುರುತಿಸಿ, ಅವುಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಉದ್ದೇಶದಿಂದ ಮಹಾನಗರ ಪಾಲಿಕೆ ಜಿಐಎಸ್ ಸಮೀಕ್ಷೆ ಕೈಗೊಂಡಿದೆ.

ಪಡೆದಿದ್ದರಿಂದಲೂ ಕಾರ್ಯದಲ್ಲಿ ವಿಳಂಬವಾಗಿದೆ ಎಂಬುದು ಪಾಲಿಕೆ ಅಧಿಕಾರಿಗಳ ಸಮರ್ಥನೆಯಾಗಿದೆ.

ಮನೆ ಮನೆ ಸಮೀಕ್ಷೆ ಪೂರ್ಣಗೊಂಡ ಬಳಿಕ ಈ ಮಾಹಿತಿಯನ್ನು ವೈಮಾನಿಕ ಸಮೀಕ್ಷೆಯೊಂದಿಗೆ ಹೋಲಿಕೆ ಮಾಡಲಾಗುತ್ತದೆ. ಇದನ್ನು 'ಗ್ರೌಂಡ್ ಟ್ರೂಥಿಂಗ್' ಎಂದು ಕರೆಯಲಾಗುತ್ತದೆ. ಈ ಪ್ರಕ್ರಿಯೆಯಿಂದ ವೈಮಾನಿಕ ಸಮೀಕ್ಷೆಯಲ್ಲಿ ಗುರುತಿಸಿರುವ ಆಸ್ತಿಗಳ ವಾಸ್ತವಿಕ ಸ್ಥಿತಿ, ಬಳಕೆ ಹಾಗೂ ದಾಖಲೆಗಳ ನಡು ಪರಿಶೀಲಿಸಲು ಸಾಧ್ಯವಾಗಲಿದೆ.

ನಾಲ್ಕು ತಿಂಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸುವ ಗುರಿ: ಈ ಕುರಿತು ಮಾತನಾಡಿರುವ ಮಹಾನಗರ ಪಾಲಿಕೆ ಉಪ ಆಯುಕ್ತ ವಿಜಯಕುಮಾರ್, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 4.5 ಲಕ್ಷ ಆಸ್ತಿಗಳಿದ್ದು, ಅವುಗಳಲ್ಲಿ ಸುಮಾರು 3.5 ಲಕ್ಷ ಮನೆಗಳಿವೆ. ಉಳಿದವುಗಳಲ್ಲಿ 1 ಲಕ್ಷದಿಂದ 1.50 ಲಕ್ಷದವರೆಗೆ ಖಾಲಿ ನಿವೇಶನಗಳಿರುವ ಅಂದಾಜಿದೆ ಎಂದು ತಿಳಿಸಿದ್ದಾರೆ.